TEXT PROBLEM WITHIN THE BOOK ONLY

UNIVERSAL
LIBRARY
OU_198094
UNIVERSAL
LIBRARY

ವಿಶ್ವಸಾಹಿತ್ಯ ಮಾಲೆ, ಕುಸುಮ: ೧.

# ವಿಚಿತ್ರ ಆಗ್ನೇಯ ಏಶಿಯ

ಲೇಖಕರು:

ಶ್ರೀ. ಎ. ಹರಿದಾಸ

[ದ್ವಿತೀಯ ಮಹಾಯುದ್ಧ, ಉಕ್ಕಿನ ಮನುಷ್ಯ ಮೊದಲಾದ ಗ್ರಂಥಗಳನ್ನು ಬರೆದವರು.]

೯ ಅಗಸ್ಟ ೧೯೪೬ :: ಬೆಲೆ: ೧-೮-೦.

ಮಾರಾಟದ ಸಂಪೂರ್ಣ ಹಕ್ಕುಳ್ಳವರು:

**ರಾವ್ ಬ್ರದರ್ಸ್, ಗದಗ.**

ಪ್ರಕಾಶಕರು:

**ಸಾಹಿತ್ಯ ಭಾಂಡಾರ**
**ಹುಬ್ಬಳ್ಳಿ.**

ಮುದ್ರಕರು:

**ಕರ್ನಾಟಕಬಂಧು**
**ಮುದ್ರಣಾಲಯ, ಗದಗ.**

## ಲೇಖಕನ ಅರಿಕೆ

ಜಪಾನ್ ಯುದ್ಧದಲ್ಲಿ ಧುಮುಕಿ (೧೯೪೧) ಇಂಡೋ ಚೀನ, ಸಯಾಂ, ಮಲಯಾ, ಇಂಡೋನೇಶಿಯ, ಬರ್ಮಾ ಮೊದಲಾದ ಒಂದೊಂದೇ ದೇಶಗಳನ್ನು ಆಕ್ರಮಿಸಿತು. ಅಂದಿನಿಂದಲೂ ಆಗ್ನೇಯ ಏಶಿಯದ ಈ ದೇಶಗಳ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಐತಿಹಾಸಿಕ ಸ್ಥಿತಿಗತಿಗಳನ್ನು ಅಭ್ಯಸಿಸುತ್ತಿದ್ದೆ. ಪುಸ್ತಕರೂಪದಲ್ಲಿ ಅದನ್ನು ಪ್ರಕಟಿಸಬೇಕೆಂದು ನಿರ್ಧರಿಸಿದುದು ಇತ್ತೀಚೆಗೆ. ಅದರಂತೆ ಬರೆಯಲು ತೊಡಗಿ, ಈ ವರುಷದ ಆರಂಭದಲ್ಲೇ ಮುಗಿಸಿದ್ದೆ. ಆದರೆ ಅನಾರೋಗ್ಯ ಹಾಗೂ ಇನ್ನಿತರ ಅನೇಕ ಕಷ್ಟ ಪರಂಪರೆಗಳಿಂದ ಅದು ಬೆಳಕು ಕಾಣಲಿಲ್ಲ. ಈಗ ಇದನ್ನು ಸಾಹಿತ್ಯ ಭಾಂಡಾರ ಹುಬ್ಬಳ್ಳಿ ಇವರು ಪ್ರಕಟಿಸಿರುವರು. ಅವರಿಗೆ ನಾನು ಕೃತಜ್ಞ. ಮುದ್ರಿಸಿಕೊಟ್ಟ ಕರ್ನಾಟಕಬಂಧು ಕಾರ್ಯಾಲಯದವರಿಗೂ ವಂದನೆಗಳು. ಇದಲ್ಲದೆ ನನಗೆ ಅನೇಕ ವಿಧದ ಸಹಾಯವನ್ನು ನೀಡಿ ಪ್ರೋತ್ಸಾಹಿಸಿದ ನನ್ನ ಮಿತ್ರರಿಗೆ ಋಣಿಯಾಗಿದ್ದೇನೆ.

ಗದಗ
೯ ಅಗಸ್ಟ ೧೯೪೬

ಶ್ರೀ. ಎಂ. ಹರಿದಾಸ್

# ಪರಿವಿಡಿ


| | | |
|---|---|---|
| ಭಾಗ ೧ | ಎಚ್ಚತ್ತ ಆಗ್ನೇಯ ಏಶಿಯಾ | ಪುಟ ೧ |
| ಭಾಗ ೨ | ಇಂಡೋನೇಶಿಯ | ” ೧೮ |
| ಭಾಗ ೩ | ಬ್ರಹ್ಮದೇಶ ( ಬರ್ಮ್ಮಾ ) | ” ೬೭ |
| ಭಾಗ ೪ | ಥಾಯಿಲಂಡ (ಸಯಾಂ) | ” ೮೭ |
| ಭಾಗ ೫ | ಮಲಯಾ | ” ೧೦೧ |
| ಭಾಗ ೬ | ಇಂಡೋಚೀನ | ” ೧೧೬ |


## ನಕ್ಷೆಗಳು


| | |
|---|---|
| ಆಗ್ನೇಯ ಏಶಿಯ | ಪುಟ ೨ |
| ಬರ್ಮ್ಮಾ | ” ೬೮ |
| ಮಲಯಾ | ” ೧೦೦ |


———


# ಎಚ್ಚೆತ್ತ ಆಗ್ನೇಯ ಏಶಿಯ

( ಭಾಗ ೧ )

## ಆಗ್ನೇಯ ಏಶಿಯ

ಏಶಿಯ ಎಚ್ಚೆತ್ತಿದೆ. ಸಿರಿಯಾದಿಂದ ಹಿಡಿದು ಸೈಬೀರಿಯಾದವರೆಗೆ ಸ್ವಾತಂತ್ರ್ಯದ ಬಿರುಗಾಳಿ ಬೀಸುತ್ತಿದೆ. ಅನೇಕ ಶತಮಾನಗಳಿಂದ ಒಂದಲ್ಲದಿದ್ದರೆ ಇನ್ನೊಂದು ಪಾಶ್ಚಾತ್ಯ ರಾಷ್ಟ್ರದ ಗುಲಾಮಗಿರಿಯಲ್ಲಿದ್ದ ಈ ಜನ, ಈಗ ಕುಂಭಕರ್ಣನ ನಿದ್ದೆಯಿಂದೆದ್ದಿರುವರು. ತಮ್ಮ ಕೈಕಾಲುಗಳಿಗೆ ತೊಡಿಸಿದ್ದ ಕಬ್ಬಿಣದ ಕಡಗಗಳನ್ನು ಮುರಿಯಲು ರಣಗರ್ಜನೆಯನ್ನೇ ಮಾಡುತ್ತಿರುವರು. ಸಿರಿಯಾ ಲೆಬನಾನಗಳು ಸ್ವಾತಂತ್ರ್ಯಕ್ಕಾಗಿ ತಳಮಳಿಸುತ್ತಿವೆ. ಬ್ರಿಟಿಶ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಇಜಿಪ್ತ ಪ್ರತಿಪಾದಿಸುತ್ತಿದೆ. ಇನ್ನಿತರ ಅರಬ ರಾಷ್ಟ್ರಗಳೂ "ಗಂಟು ಮೂಟೆ ಕಟ್ಟಿಕೊಂಡು ಹೊರಡಿರಿ" ಎಂದು ವಿದೇಶಿಯರಿಗೆ ಹೇಳತೊಡಗಿವೆ. ಹಿಂದುಸ್ತಾನವು ಕಳೆದೊಂದು ಶತಮಾನದಿಂದ ಪ್ರಬಲ ಹೋರಾಟವನ್ನೇ ಅವಲಂಬಿಸಿರುವುದು. ಬ್ರಹ್ಮದೇಶ ಸಿಲೋನಗಳೂ ಆ ದಾರಿಯನ್ನೇ ಹಿಡಿದಿವೆ. ಆದರ ಇಂಡೋನೇಶಿಯಾ ಇಂಡೋ-ಚೀನಗಳು ಉಳಿದೆಲ್ಲ ದೇಶಗಳಿಗಿಂತ ಸ್ವಾತಂತ್ರ್ಯ ಪಥದಲ್ಲಿ ಒಂದು ಹೆಜ್ಜೆ ಮುಂದೆ ನುಗ್ಗಿವೆ. ಪರರಾಜ್ಯದಲ್ಲಿ ನುಗ್ಗಾಗಿರುವ ಹಲವು ದೇಶಗಳ ಪ್ರಜೆಗಳು, "ಸ್ವಾತಂತ್ರ್ಯ! ಸ್ವಾತಂತ್ರ್ಯ!" ಎಂದು ಬರಿ ಗುಲ್ಲೆಬ್ಬಿಸುತ್ತ ಬಂದಿದ್ದರ ಅಂಗೈ ಅಗಲದ ಇಂಡೋನೇಶಿಯ,

# ಆಗ್ನೇಯ ಏಶಿಯ




ಬರ್ಮಾ, ಏಶಿಯಾ, ಮಲಯಾ, ಇಂಡೋಚೀನ, ಇಂಡೋನೇಶಿಯ, ಫಿಲಿಪಾಯಿನ್ಸ್ ಈ ಎಲ್ಲ ದೇಶಗಳನ್ನೂ ಈ ನಕ್ಷೆಯಲ್ಲಿ ಕಾಣಬಹುದು.

ಇಂಡೋಚೀನ ಮುಂತಾದ ಆಗ್ನೇಯ ಏಶಿಯದ ಈ ಚಿಕ್ಕ ಚಿಕ್ಕ ರಾಷ್ಟ್ರಗಳ ಜನ ಸ್ವಾತಂತ್ರ್ಯವನ್ನು ಸಂಪಾದಿಸಿ, ಪ್ರಜಾರಾಜ್ಯಗಳನ್ನು ಸ್ಥಾಪಿಸಿ, ಅವುಗಳ ರಕ್ಷಣೆಗಾಗಿ ಟೊಂಕಕಟ್ಟಿವೆ. ಸರ್ವಸ್ವವನ್ನು ಅರ್ಪಿಸಲು ಅವರು ಸಿದ್ಧ. ಈ ದೇಶಾಭಿಮಾನಿಗಳ ಪ್ರತಿಭಟನೆ, ಅವರು ಮಾಡಿದ ತ್ಯಾಗ ಬಲಿದಾನಗಳು ಅಖಿಲ ಏಶಿಯವನ್ನೇ ನಡುಗಿಸಿದೆ; ಜಗತ್ತೇ ಬೆರಗಾಗಿಹೋಗಿದೆ.

## ಗುಬ್ಬಿಗಳ ಮೇಲೆ ಬ್ರಹ್ಮಾಸ್ತ್ರ

ಸಿರಿಸಂಪತ್ತಿನ ವ್ಯಾಮೋಹದಿಂದ, ರಾಜ್ಯಾಭಿಲಾಷೆಯಿಂದ ಪಾಶ್ಚಾತ್ಯ ಸಾಮ್ರಾಜ್ಯವಾದಿಗಳು ಈಗ ರಕುತ ಸುರಿಸಿ ಈ ಕಿಗ್ಗಡಲ ರಕುತದಲ್ಲಿ ಹುಚ್ಚರಂತೆ ಕುಣಿಯುತ್ತಿರುವರು. ಬ್ರಿಟಿಶರು ಬ್ರಹ್ಮದೇಶ, ಮಲಯಾ ಗಳನ್ನು ಪುನರಾಕ್ರಮಿಸಿ ದೇಶಪ್ರೇಮಿಗಳ ಮೇಲೆ ಸಿಡಿಕಾರಿರುವರು. ಸ್ವತಂತ್ರ ಸಯಾಮಿನ ಗೋಣು ಹಿಚುಕಲು ಅವರ ಯತ್ನ. ಅಲ್ಜೀರಿಯಾ, ಸಿರಿಯಾಗಳ ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕಿದ ಫ್ರಾನ್ಸ, ಇಂಡೋಚೀನದಲ್ಲೂ ಅದೇ ರೀತಿ ವರ್ತಿಸಿದೆ. ಇಂಡೋನೇಶಿಯದಲ್ಲಿ ಡಚ್ಚರ ದಬ್ಬಾಳಿಕೆ. ಒಂದು ಕೋಟಿ ಕೂಡಾ ಇಲ್ಲ ಡಚ್ಚರ ಜನಸಂಖ್ಯೆ. ಆರು ಕೋಟಿ ಇಂಡೋನೇಶಿಯನ್ನರ ಮೇಲೆ ಅವರ ದರ್ಪ. ನಾಝಿ ಗುಲಾಮಗಿರಿಯ ಸವಿ ಕಂಡ ಈ ಮಿತ್ರ ರಾಷ್ಟ್ರಗಳೇ ಈಗ ಅಬಲ ರಾಜ್ಯಗಳನ್ನು ನುಂಗಲೆತ್ನಿಸಿವೆ. ರಾಷ್ಟ್ರಾಭಿಮಾನಿಗಳನ್ನು ರಸಾತಳಕ್ಕೆ ಮೆಟ್ಟಿಬಿಡಲು ಅವರ ಭಗೀರಥಯತ್ನ. ಈ ಡಚ್ ಮತ್ತು ಫ್ರೆಂಚರಿಗೂ ಮಿಕ್ಕವರ ಬೆಂಬಲ. ಅಮೇರಿಕನ್ನರು ಕೋಟಿಗಟ್ಟಲೆ ಡಾಲರುಗಳ ಬೆಲೆಯ ಶಸ್ತ್ರಾಸ್ತ್ರಗಳನ್ನು ಪೂರೈಸಿರುವರು. ಬ್ರಿಟಿಶರು ಸೇನೆ ನೌಕಾಪಡೆ, ವಿಮಾನಗಳನ್ನು ಕಳಿಸಿಕೊಟ್ಟಿರುವರು. ಆಸ್ಟ್ರೇಲಿಯವೊಂದೇ ಮೂರು ಕೋಟಿ ಪೌಂಡುಗಳ ಯುದ್ಧೋಪಕರಣಗಳನ್ನು ಕೊಟ್ಟಿದೆ ಡಚ್ಚರಿಗೆ. ಶರಣಾಗತರಾದ ಜರ್ಮನಿ ಮತ್ತು ಜಪಾನಗಳ ಅಗಣಿತಾಸ್ತ್ರ ಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಆಗ್ನೆಯ ಏಶಿಯದ ಪ್ರಜಾ ಕೋಟಿಯ ಸ್ವಾತಂತ್ರ್ಯ ಚಳವಳಿಯನ್ನು ಬಡಿಯಲು ಪಾಶ್ಚಾತ್ಯ ಜಗತ್ತೇ ಮೇಳಗೂಡಿದೆ.

## ಪಾಶ್ಚಾತ್ಯರ ಮೇಳ

೧೯ನೇಯ ಶತಮಾನದಲ್ಲಿ ಬಾಹ್ಯಜಗತ್ತಿಗೆ ಕಾಲು ಚಾಚಲು ಆರಂಭಿಸಿದ ಡಚ್ಚರು, ಫ್ರೆಂಚರು, ಸ್ಪಾನಿಶರು, ಪೋರ್ತುಗೀಸರು, ಬ್ರಿಟಿಶರು, ಇಜಿಪ್ತ, ಹಿಂದುಸ್ತಾನ, ಚೀನ, ಮೊದಲಾದ ಕಡೆಗಳಲ್ಲಿ ತಮ್ಮ ತಮ್ಮೊಳಗೆ ಹೊಡೆದಾಡಿದರು. ತಾವೇ ಏಕೈಕ ನಾಯಕರಾಗಿ ಲೋಕೈಕ ವೀರರಾಗಿ ಬಯಸಿ, ತಮ್ಮ ತಮ್ಮ ಕೊರಳು ಕೊಯ್ಯಲು ಅವರು ಯತ್ನಿಸಿದುದುಂಟು. ಆದರೆ ಈ ೨೦ನೇಯ ಶತಮಾನದಲ್ಲಿ ಡಚ್, ಫ್ರೆಂಚ್ ಮೊದಲಾದ ಸಾಮ್ರಾಜ್ಯವಾದಿಗಳಿಗೆ ಬ್ರಿಟಿಶರೇ ಸಹಾಯ ಕೊಟ್ಟಿರುವರು. ಆಗ್ನೇಯ ಏಶಿಯದ, ಏಶಿಯದ ಪರಾಧೀನ ಪ್ರಜೆಗಳ ಸ್ವಾತಂತ್ರ್ಯವನ್ನು ಅಪ್ಪಳಿಸಲು ಸಾಮ್ರಾಜ್ಯವಾದಿ ಪಾಶ್ಚಾತ್ಯ ಜಗತ್ತೇ ಕೈಗೆ ಕೈಕೊಟ್ಟು ಮೈಗೆ ಮೈ ತಗುಲಿಸಿ ಒಂದಾಗಿ ನಿಂತಿದೆ. ಸಾಮ್ರಾಜ್ಯವಾದಿಗಳ ಈ ಮೇಳ ಲೋಕಕಲ್ಯಾಣಕ್ಕೆ ಕಂಟಕ; ಫ್ಯಾಸಿಜಂ, ನಾಝಿಸಂಗಳಿಗಿಂತಲೂ ಹೆಚ್ಚು ಗಂಡಾಂತರವಿದೆ ಇದರಿಂದ.

## ಮಿತ್ರರ ಹಿತವಚನ

ಈ ಧೋರಣ ಪಾಶ್ಚಾತ್ಯ ರಾಷ್ಟ್ರಗಳಿಗೆ ಭೂಷಣವಲ್ಲ. ಜರ್ಮನಿ, ಜಪಾನಗಳು ಒಂದೊಂದೇ ದೇಶಗಳನ್ನು ನುಂಗಿ ನೀರು ಕುಡಿದಾಗ 'ಸಾಮ್ರಾಜ್ಯಶಾಹಿಗಳು! ಫ್ಯಾಸಿಸ್ಟರು! ಬರ್ಬರರು!" ಎಂದು ಅವರನ್ನು ಜರಿದರು. ತಾವು ಪ್ರಜಾಸತ್ತೆ, ಪ್ರಜಾರಾಜ್ಯ, ಪ್ರಜಾಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತಿರುವೆವೆಂದು ಭೂವ್ಯೋಮ ಪಾತಾಳವೊಂದಾಗುವಂತೆ ಬಿನ್ನಾಣದ ಮಾತುಗಳನ್ನಾಡಿದರು. ಪರಾಧೀನ ಜನರ ಸ್ನೇಹ, ಸಹಕಾರ, ಸಹಾಯಗಳನ್ನು ಪಡೆಯಲು ಅಟ್ಲಾಂಟಿಕ ಸನದನ್ನು ಘೋಷಿಸಿದರು. ಪರಾಧೀನ ಜನರ ಬೆಂಬಲದಿಂದ ಫ್ಯಾಸಿಸ್ಟರ ಸೊಕ್ಕನ್ನು ಅಡಗಿಸಲು ಸಾಧ್ಯವಾಯಿತು ಅವರಿಗೆ. ಆದರೆ ಈಗ ಕಷ್ಟಕಾಲದಲ್ಲಿ ಉಪಕಾರ ಮಾಡಿದವರ ಮೇಲೆಯೇ ಮಿತ್ರರು ಗುರ್ರೆಂದು ತಿರುಗಿಬಿದ್ದಿರುವರು. ಉಂಡ ಮನೆಗೆರಡು ಬಗೆವ ಬುದ್ಧಿ. ಕೊಟ್ಟ ವಚನಗಳನ್ನು ಮುರಿಯಲೂ ಹೇಸಿಲ್ಲ. ಜಪಾನರು, ಜರ್ಮನರಿಗಿಂತ ಈ ಬ್ರಿಟಿಶ್, ಡಚ್ ಮತ್ತು ಅಮೇ

ರಿಕನ್ನರು ಏನೂ ಭಿನ್ನವಿಲ್ಲ. ಹಿಟ್ಲರನ ಜರ್ಮನಿ, ಮುಸ್ಸೋಲಿನಿಯ ಇಟಲಿ, ಟೋಜೋ ಜಪಾನ ಹೊಸ ಸಾಮ್ರಾಜ್ಯಗಳನ್ನು ಕಟ್ಟಲು ಹೆಣಗಿದುವು. ಜರ್ಮನರು, ಜಪಾನರು, ಇಟಾಲಿಯನ್ನರು ಇಂದು ಮಾಡಿದ ದುಷ್ಕರ್ಮ ಗಳನ್ನು ಹಿಂದಿನ ಶತಮಾನಗಳಲ್ಲೇ ಮಾಡಿ ಮುಗಿಸಿದ್ದಾರೆ ಬ್ರಿಟಿಶರು, ಡಚ್ಚರು ಮತ್ತು ಫ್ರೆಂಚರು. ಈಗ ಮತ್ತೆ, ಸ್ವಪ್ರಯತ್ನದಿಂದ, ಸ್ವಸಾಹಸದಿಂದ, ತ್ಯಾಗದಿಂದ ಸ್ವತಂತ್ರ ಸರಕಾರಗಳನ್ನು ಸ್ಥಾಪಿಸಿದ ಆಗ್ನೇಯ ಏಶಿಯದ ದೇಶಾಭಿಮಾನಿಗಳನ್ನು ನಿರ್ನಾಮ ಮಾಡಲೆತ್ನಿಸಿರುವರು. ಇವರಿಗೂ ಫ್ಯಾಸಿಸ್ಟರಿಗೂ ಏನು ಭೇದ ಎಂದು ಆಗ್ನೆಯ ಏಶಿಯದ ಜನ ಪ್ರಶ್ನಿಸುತ್ತಿದ್ದಾರೆ. ಪಾಶ್ಚಾತ್ಯ ರಣಹದ್ದುಗಳ ಬಣ್ಣ ಎಲ್ಲ ಒಂದೇ.

## ನೈತಿಕ ಪತನ

ಮಿತ್ರರಾಷ್ಟ್ರಗಳ ನೈತಿಕ ಅಧಃಪತನದ ಕರುಣ ಕಥೆಯ ಅಧ್ಯಾಯಗಳು ಇಲ್ಲಿಗೇ ಮುಗಿಯಲಿಲ್ಲ. ಜಪಾನರನ್ನು ನಿಶ್ಶಸ್ತ್ರ ಮಾಡಲು ಬಂದವರು ಅವರಿಗೇ ಶಸ್ತ್ರಾಸ್ತ್ರಗಳನ್ನು ಕೊಟ್ಟು ಆಗ್ನೇಯ ಏಶಿಯದ ಜನರ ಆಶೆ ಆಕಾಂಕ್ಷೆಗಳನ್ನು ನಾಮಶೇಷ ಮಾಡಲು ಬಯಸಿದರು. ಮೊನ್ನೆ ಮೊನ್ನೆಯ ವರೆಗೆ "ಜಪಾನರು ಪರಮ ವೈರಿಗಳು! ಬರ್ಬರರು! ಫ್ಯಾಸಿಸ್ಟರು!" ಇಂದು ಅವರೇ ಬ್ರಿಟಿಶರ ಮಿತ್ರರಾದರಲ್ಲ! ಜಪಾನರನ್ನು ತರಿಯಲು ಸಂಘಟಿಸಿದ್ದ ಹಿಂದೀ ಸೈನಿಕರು ಜಪಾನಿ ಸೈನಿಕರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನುಗ್ಗಬೇಕಾಯಿತಲ್ಲ! ಅದೂ ಯಾವ ಉದ್ದೇಶ ಸಾಧನೆಗಾಗಿ? ದುಷ್ಕರ್ಮಕ್ಕೆ. ಕೊಲೆ ಹೊಲೆಗೆಲಸಕ್ಕೆ. ಎಲ್ಲಿದೆ ಚರ್ಚಿಲ್ಲರ, ರೂಜವೆಲ್ಟರ ಅಟ್ಲಾಂಟಿಕ ಸನದು ? ಎಲ್ಲಿವೆ ಮಿತ್ರರಾಷ್ಟ್ರಗಳ ತೆಹರಾನ, ಪಾಟ್ಸಡ್ಯಾಂ ಘೋಷಣೆಗಳು ? ಲಿಂಕನ, ವಿಲ್ಸನ್ ಜಾನ್ಸನ್ನರ ಆದರ್ಶಗಳು ? ಅವರ ಶವಗಳೊಂದಿಗೆ ಅಮೇರಿಕನ್ನರು ಈ ಘನತತ್ವ ಧ್ಯೇಯಗಳನ್ನು ಮಣ್ಣುಪಾಲು ಮಾಡಿದಂತೆ ತೋರುತ್ತಿದೆ. ಕಾಯುವ ಕೈಯ್ಯೇ ಕೊರಳು ಕೊಯ್ಯಲು ಕೊಡಲಿಯೆತ್ತಿದಮೇಲೆ ಕೇಳುವವರಾರು ?

೬

## ಶಾಂತಿ ! ಸುವ್ಯವಸ್ಥೆ !

ಶಾಂತಿ ಸುವ್ಯವಸ್ಥೆಯನ್ನುಂಟುಮಾಡಲು ಸೇನೆ ಸಹಾಯ ಸಲಕರಣೆಗಳನ್ನು ಇಳಿಸಿದೆವೆಂದು ‘ ಮಿತ್ರರ ’ ವಾದ. ಅಶಾಂತಿ ಮತ್ತು ಅವ್ಯವಸ್ಥೆಗಳಿದ್ದಿದ್ದರಲ್ಲವೇ ಶಾಂತಿ ಸುವ್ಯವಸ್ಥೆಗಳ ಪ್ರಶ್ನೆ. ಜಪಾನರು ಶರಣು ಹೋದ ಕೂಡಲೇ ಈ ದೇಶಗಳ ಜನ ಸ್ವತಂತ್ರ ಸರಕಾರಗಳನ್ನು ಸ್ಥಾಪಿಸಿದರು. ಮಿತ್ರರು ಪ್ರವೇಶಿಸಿದಾಗ ಈ ರಾಜ್ಯಗಳಲ್ಲಿ ಪ್ರಬಲ, ನ್ಯಾಯವಾದ, ಕ್ರಮಬದ್ಧ ಸರಕಾರಗಳೇ ಇದ್ದಿತಲ್ಲ! ಪ್ರಜಾಮುಖಂಡರು ರಾಜ್ಯಸೂತ್ರ ಹಿಡಿದಿದ್ದರು. ಪ್ರಜಾಸತ್ತೆಯ ತತ್ವಗಳ ಒರತೆಯ ನೀರನ್ನು ಕುಡಿದು ತೃಪ್ತರಾದ ಧುರೀಣರವರು. ಜನರಿಗೂ ಅವರ ಮೇಲೆ ಅಮಿತ ವಿಶ್ವಾಸ. ಒಂದೆಡೆಯಾದರೂ ದಂಗೆ, ದರೋಡೆ, ಅಶಾಂತಿಗಳಾಗಲಿಲ್ಲ. ಡಚ್ ಫ್ರೆಂಚ್ ಮತ್ತು ಬ್ರಿಟಿಶರು ಪುನರಾಕ್ರಮಿಸಲು ದಂಡೆತ್ತಿ ಬಂದಾಗಲೇ ಬಡಿದಾಟವಾಯಿತು. ದಂಡಯಾತ್ರೆಯೇ ಕದನಕ್ಕೆ ಕಾರಣ. ಅಂದ ಬಳಿಕ ಮಿತ್ರರು ಕೈಹಾಕಿದುದರಿಂದಲೇ ಅಶಾಂತಿಯ ಬೇಗೆ ಹಬ್ಬುವಂತಾಗಿದೆ. ಶಾಂತಿ ಮತ್ತು ಸುವ್ಯವಸ್ಥೆಯ ಹೆಸರಲ್ಲಿ ಬ್ರಿಟಿಶರು ಜಗತ್ತಿನ ಪ್ರತಿಯೊಂದು ಭಾಗದಲ್ಲಿ ರಕುತದ ಕಾಲುವೆ ಹರಿಸಿರುವರೆಂದು ಪ್ರೊ. ಲಾಸ್ಕಿಯವರೇ ಹೇಳಿರುವರು. ಇತಿಹಾಸದ ಜ್ಞಾನವಿದ್ದವರಿಗೆ ಇದು ಹೊಸದಲ್ಲ. ಫ್ರಾನ್ಸಿನೊಡನೆ ನೂರು ವರುಷಗಳ ಯುದ್ಧ, ಸ್ಕ್ಯಾಂಡಿನೇವಿಯನ ದೇಶಗಳೊಡನೆ ಹ್ಯೊಕೈ, ಸ್ಪಾನಿಶರೊಡನೆ ಕಲಹ, ಕ್ರೀಮಿಯಾ ಯುದ್ಧ, ಇಜಿಪ್ತ ಹಾಗೂ ಅರಬ ದೇಶಗಳಲ್ಲಿ ಜಗಳ, ಚೀನದೊಡನೆ ಆಫೀಮುಯುದ್ಧ ಇವುಗಳ ಒಂದು ಮಾಲೆಯನ್ನು ಕಟ್ಟಬಹುದು. ಬೋರ್ ಯುದ್ಧ, ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮ, ಐರಿಶ ಕಾಳಗಗಳೂ ಚಿರಸ್ಮರಣೀಯ. ಯಾವ ರಾಷ್ಟ್ರದ ವಿರುದ್ಧ ಯುದ್ಧ ಹೂಡಿಲ್ಲ ಈ ಬ್ರಿಟಿಶ ಸಾಮ್ರಾಜ್ಯವಾದಿಗಳು ? ಇಂದಾದರೂ ಡಚ್, ಫ್ರೆಂಚ್ ಮುಂತಾದ ಸಾಮ್ರಾಜ್ಯವಾದಿಗಳಿಗೆ ಬ್ರಿಟಿಶರೇ ಊರುಗಂಬ. ಆಗ್ನೇಯ ಏಶಿಯದ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಬ್ರಿಟನೇ ಅಡ್ಡ ಬಂದಿದೆ. ಫ್ರೆಂಚ್ ಮತ್ತು ಡಚ್ಚರನ್ನು ಇಂಡೋಚೀನಿಯರು ಮತ್ತು

ಇಂಡೋನೇಶಿಯನ್ನರು ಸೋಲಿಸಿಬಿಟ್ಟಿದ್ದರು. ಬ್ರಿಟನ ಸಹಾಯಕ್ಕೆ ಬಾರದೇ ಇರುತಿದ್ದರೆ ಆಗ್ನೇಯ ಏಶಿಯದ ಕಥೆಯೇ ಬೇರೆಯಾಗುತ್ತಿತ್ತು.

## ಮಿತ್ರರ ಕುಂಟುನೆವಗಳು

ಈ ಆಗ್ನೆಯ ಏಶಿಯದ ಪ್ರಜೆಗಳ ಸ್ವಾತಂತ್ರ್ಯ ಚಳವಳಿಯನ್ನು ಮುರಿಯಲು ಒಂದು ಕುಂಟುನೆವ ಬೇಕಾಗಿತ್ತು ಮಿತ್ರರಿಗೆ. ಜಪಾನಿ ಸೈನಿಕರನ್ನು ನಿಶ್ಶಸ್ತ್ರಗೊಳಿಸುವ ಮತ್ತು ಮಿತ್ರ ಸ್ಥಾನಬದ್ಧ ಕೈದಿಗಳ ವಿಮೋಚನೆಯ ಕಾರಣಗಳು ಅವರಿಗೆ ದೊರಿತವು. ಇದಲ್ಲದೆ ಈ ರಾಷ್ಟ್ರಗಳಲ್ಲಿ ಸ್ಥಾಪಿಸಲ್ಪಟ್ಟಿದ್ದ ಸರಕಾರಗಳೂ ಫ್ಯಾಸಿಸ್ಟ ರಾಜ್ಯಗಳು ಮತ್ತು ಜಪಾನಿ ಪ್ರೇರಕವೆಂದು ಅವರ ಆರೋಪ. ಮಿತ್ರರ ಸೇನೆ ನೌಕಾಪಡೆ, ವಿಮಾನ ದಳಗಳೊಂದಿಗೆ ಪ್ರವೇಶಿಸುವ ಮೊದಲೇ ಇಂಡೋಚೀನ, ಇಂಡೋನೇಶಿಯಗಳಲ್ಲಿ ಜಪಾನಿ ಸೈನಿಕರನ್ನು ಬಹುಮಟ್ಟಿಗೆ ಪ್ರಜಾರಾಜ್ಯಗಳು ನಿಶ್ಶಸ್ತ್ರಗೊಳಿಸಿದ್ದುವು. ಉಳಿದವರನ್ನೂ ನಿಶ್ಶಸ್ತ್ರಗೊಳಿಸಲು ಸಮಯಾವಕಾಶ ಕೊಡಬಹುದಿತ್ತು. ಅವರ ಇಷ್ಟದಂತೆ ನಡೆಯಲು ತಪ್ಪಿದ್ದರೆ ಮುಂದೆ ದಂಡಯಾತ್ರೆಯ ಪ್ರಶ್ನೆ. ಇನ್ನು ಮಿತ್ರ ಯುದ್ಧಕೈದಿಗಳ ವಿಮೋಚನೆಗೆ ಆ ರಾಷ್ಟ್ರಗಳಲ್ಲಿ ನೆಲ, ಜಲ, ಆಕಾಶ ಬಲಗಳನ್ನು ಇಳಿಸುವ ಅವಶ್ಯಕತೆಯೇನು? ಆ ಪ್ರಜಾರಾಜ್ಯಗಳ ಪ್ರತಿನಿಧಿಗಳನ್ನು ಕರೆಸಿಕೊಂಡು ಸ್ನೇಹಪೂರ್ಣ ಮಾತುಕತೆ ನಡೆಸುತಿದ್ದರೆ ಈ ಪ್ರಶ್ನೆ ಬಗೆಹರಿಯುತಿತ್ತು. ಯಾವ ಪ್ರಜಾರಾಜ್ಯಗಳಲ್ಲೂ ಫ್ರೆಂಚ್, ಡಚ್, ಬ್ರಿಟಿಶ್ ಅಥವಾ ಹಿಂದೀ ಯುದ್ಧಕೈದಿಗಳ ಮೇಲೆ, ಅತ್ಯಾಚಾರ ನಡೆದಿರಲಿಲ್ಲ. ಸರಿ. ಒಂದು ವೇಳೆ ಮೇಲಿನ ಕಾರಣಗಳಿಗಾಗಿ ಸೇನೆ ಸಹಾಯ ಸಲಕರಣೆಗಳೊಂದಿಗೆ ತೆರಳಿದರೂ ಡಚ್ ಮತ್ತು ಫ್ರೆಂಚರಿಗೆ ಬೆಂಬಲವಿತ್ತು ಡಚ್-ಇಂಡೋನೇಶಿಯನ ಹಾಗೂ ಫ್ರೆಂಚ್-ಇಂಡೋಚೀನಿ ವಾದವಿವಾದಗಳಲ್ಲಿ ಕೈಹಾಕಲು ಹೇಳಿದವರಾರು? ಅದು ಬ್ರಿಟಿಶ ಅಥವಾ ಮಿತ್ರರಿಗೆ ಸಂಬಂಧಿಸಿದ ಪ್ರಶ್ನೆಯೇ ಆಗಿರಲಿಲ್ಲ. ಇನ್ನು ಈ ಪ್ರಜಾರಾಜ್ಯಗಳು ಫ್ಯಾಸಿಸ್ಟ ಎಂದು ಮೂದಲಿಸುವುದೂ ಮಿಥ್ಯಾರೋಪ. ಜಪಾನಿ ಆಕ್ರಮಣ

ಕಾಲದಲ್ಲಿ ಸ್ವಾತಂತ್ರ್ಯದ ಭಾವನೆ ಕೆರಳಿರಬಹುದು. ಆದರೆ ಆಗ್ನೇಯ ಏಶಿಯಾದಲ್ಲೂ ಶತಮಾನಗಳಿಂದ ಸ್ವಾತಂತ್ರ್ಯ ಹೋರಾಟಗಳು ನಡೆದಿವೆ. ಇದನ್ನೆಲ್ಲ ನೋಡಿದರೆ ವ್ಯಾಪಾರೀಹಕ್ಕು ಹಿತಗಳ ಸಂರಕ್ಷಣೆ, ಸಾಮ್ರಾಜ್ಯದ ಆಶೆ, ಅಧಿಕಾರ ಪ್ರಭಾವಗಳಿಗಾಗಿ ಮಿತ್ರರು ಈ ಭಾಗದಲ್ಲಿ ಕಾಲು ಚಾಚಿದರೆಂದು ಹೇಳಲೇನೂ ಅಡ್ಡಿಯಿಲ್ಲ.

## ಸಾಮ್ರಾಜ್ಯವಾದದ ಗಂಡಾಂತರ

ಪಾಶ್ಚಾತ್ಯ ಜಗತ್ತಿನ ಈ ಸಾಮ್ರಾಜ್ಯವಾದವೇ ಲೋಕ ಶಾಂತಿಗೆ ಭದ್ರತೆಗೆ, ಪ್ರಜಾಸತ್ತೆಗೆ ಗಂಡಾಂತರ. ಅದರಿಂದ ಹಲವು ಶತಮಾನಗಳಿಂದಲೂ ಅಬಲ ದೇಶಗಳ ಮಾನವಕೋಟಿ ಸುರಿಸಿದ ಕಣ್ಣೀರು ಮುನ್ನೀರಿಗಿಂತ ಹೆಚ್ಚು. ಕಳೆದ ೨೫ ವರುಷಗಳೊಳಗೇ ಎರಡು ಮಹಾಯುದ್ಧಗಳಾದುವು. ಟ್ಯಾಂಕುಗಳ ತುಳಿತಕ್ಕೆ ಹೊಲನೆಲಗಳು ಹಾಳಾಗಿವೆ. ಬಾಂಬುಗಳಿಗೆ ನಗರ ನಗರಗಳೇ ಭಸ್ಮವಾಗಿರುವವು. ನಿರಪರಾಧಿ ಸ್ತ್ರೀಯರು, ಬಾಲಕರು ಬಲಿ. ಜನಾಂಗದ ಆಧಾರಸ್ತಂಭಗಳಾದ ತರುಣರ ರಕುತ ಕಾವೇರಿಯಾಗಿ ಹರಿದಿದೆ. ಉಪವಾಸ ಮಾರಿಗೆ ಕೋಟಿಗಟ್ಟಲೆ ಜನರು ಸವಿ ತುತ್ತು. ನಳನಳಿಸುವ ನಂದನ ವನದಂತಿದ್ದ ಈ ಸೃಷ್ಟಿಯ ವಿಸ್ತಾರವಾದ ಅನೇಕಭಾಗಗಳು ಮರುಭೂಮಿಯಾಗಿ ಹೋಗಿವೆ. ಯುದ್ಧಾಸಕ್ತರಾಷ್ಟ್ರಗಳು ವ್ಯಯಮಾಡಿದ ಹೊನ್ನು ನಮ್ಮ ಪಶ್ಚಿಮ ಘಟ್ಟಗಳಷ್ಟಾಗುತ್ತಿತ್ತು. ಇದನ್ನು ಕಂಡೂ ಸಾಮ್ರಾಜ್ಯವಾದಿಗಳ ಹೃದಯ ಕರಗಿಲ್ಲ. ಈ ವಿಷಬೀಜ ನಾಶವಾಗಿ ಹೋಗಿಲ್ಲ. ಅಲ್ಲಲ್ಲಿ ಅದರ ಮೊಳಕೆ ಕಾಣುತ್ತಿದೆ. ಇನ್ನುಮುಂದಾದರೂ ಅದರಿಂದಲೇ ಕೇಡು. ಈ ವೈಜ್ಞಾನಿಕ ಅದ್ಭುತಗಳ ಇಂದಿನ ಕಾಲದಲ್ಲಿ ಇನ್ನೊಂದು ಯುದ್ಧವಾದರೆ ನಾಗರಿಕತೆಯ ನಾಶ ನಿಶ್ಚಯ. ಅಟಂಬಾಂಬುಗಳ ಯುದ್ಧದ ಪರಿಣಾಮವಾಗಿ ಹಿರೋಶಿಮಾ, ನಾಗಸಾಕಿ ನಗರಗಳಿಗೆ ಬಂದ ಪಾಡೇ ಈ ಜಗತ್ತಿಗೆ ಒದಗುವುದು. ಇದು ಪ್ರಳಯ. ಜ್ಞಾನಿಗಳು, ವಿಜ್ಞಾನಿಗಳು, ರಾಜಕಾರಣಿಗಳು, ಬಂಡವಲುಗಾರರ ಮತ್ತು ಸಾಮ್ರಾಜ್ಯವಾದಿಗಳ ಕೈಗೂಸುಗಳಾಗಿ ಈ ಪೃಥ್ವಿಯನ್ನು ನರಕಕ್ಕೆ ನೂಕುತಿದ್ದಾರೆ. ಈ ಜಾಗತಿಕ ದುರಂತ

ವನ್ನು ತಡೆಯುವ ಬಗೆ ಹೇಗೆ? ಈ ದುಃಖದುಮ್ಮಾನ ಕಣ್ಣೀರುಗಳಿಂದ ಮಾನವಕೋಟಿಯು ವಿಮೋಚನೆ ಹೇಗೆ ಶಕ್ಯ?

## ರಾಷ್ಟ್ರಸಂಘ

ಯುದ್ಧನಿವಾರಿಸಿ, ಆಕ್ರಮಣಶೀಲರನ್ನು ತಡೆದು, ಜಾಗತಿಕ ಶಾಂತಿ ಪರಿಪಾಲನೆ ಮಾಡಲು ಈಗ ರಾಷ್ಟ್ರಸಂಘ ರಚಿಸಲ್ಪಟ್ಟಿದೆ. ಹಿಂದಿನ ಜನಾಂಗ ಸಂಘವಲ್ಲ ಇದು. ಹೊಸತು. ಆದರೆ ಈಗಾಗಲೇ ಅದು ಅಡ್ಡ ದಾರಿ ಹಿಡಿದಿದೆ. ಜಗತ್ತಿನ ಅನೇಕ ರಾಷ್ಟ್ರಗಳಿಗೆ ಪ್ರವೇಶ ದೊರೆತಿಲ್ಲ. ಶರಣುಹೋದ ಜರ್ಮನಿ, ಜಪಾನಗಳಿಗೆ ಬಹಿಷ್ಕಾರ. ವಸಾಹತು ರಾಜ್ಯ ಗಳಿಗೆ ಪ್ರತಿನಿಧಿಗಳನ್ನು ಕಳಿಸುವ ಹಕ್ಕಿಲ್ಲ. ತಮಗೆ ಪ್ರಿಯರಾಗಿದ್ದವ ರನ್ನು ಮಾತ್ರ ದೊಡ್ಡ ರಾಷ್ಟ್ರಗಳು ಆಮಂತ್ರಿಸಿವೆ. ರಾಷ್ಟ್ರಸಂಘದಲ್ಲೂ ಪ್ರಬಲ ರಾಷ್ಟ್ರಗಳೊಳಗೆ ತಿಕ್ಕಾಟ. ಪಂಗಡಗಳನ್ನು ಎತ್ತಿಕಟ್ಟಲು ಅವರು ಯತ್ನಿಸಿರುವರು. ಚಿಕ್ಕ ಚಿಕ್ಕ ರಾಷ್ಟ್ರಗಳ ಪ್ರತಿನಿಧಿಗಳಲ್ಲಿ ಹಿರಿ ರಾಷ್ಟ್ರಗಳ ಬಾಲಹಿಡಿವ ಪ್ರವೃತ್ತಿ. ಈಗ ಪಶ್ಚಿಮ ರಾಷ್ಟ್ರಗಳಿಗೇ ಬಹುಮತವಿದೆ. ಅದನ್ನು ಕಾಪಾಡಿಕೊಂಡು, ರಶಿಯನ್ ಪ್ರಭಾವವನ್ನು ತಡೆಯುವುದೇ ಅವರ ಧೋರಣವಾಗಿದೆ ಹೊರತು, ಜಾಗತಿಕ ಸಮಸ್ಯೆಗಳನ್ನು ತೀರ್ಮಾನಿ ಸುವ ಮೂಲ ಪ್ರಶ್ನೆ ಮೂಲೆ ಸೇರಿದೆ. ಬ್ರಿಟನ್, ರಾಷ್ಟ್ರಸಂಘದಲ್ಲಿ ಶಾಂತಿಯ ಸವಿಮಾತುಗಳನ್ನಾಡುತ್ತಿದ್ದಾಗಲೇ ಇಂಡೋನೇಶಿಯ, ಇಂಡೋಚೀನ, ಪಾಲೆಸ್ತಾನ, ಗ್ರೀಸ್, ಇಜಿಪ್ತಗಳಲ್ಲಿ ಪ್ರಜಾಕೋಟಿಯು ರಕುತ ಚೆಲ್ಲಿತು. "ಅದು ಏಕೆ" ಎಂದು ಕೇಳಿದುದು ತಪ್ಪು. ಬ್ರಿಟನ್ ಕೆರಳಿತು. ಆದುದರಿಂದ ಪರಾಧೀನ ಜನರ ಆಶೆ ಮಣ್ಣುಪಾಲಾಗಿದೆ. ದಬ್ಬಾಳಿಕೆಗೆ ತುತ್ತಾದ ಜನ, ದಾಸ್ಯದಲ್ಲಿ ತೊಳಲುತ್ತಿರುವ ಜನ, ರಾಷ್ಟ್ರ ಸಂಘದ ಮೇಲಿಟ್ಟ ವಿಶ್ವಾಸ ವ್ಯರ್ಥ. ದೊಡ್ಡವರ ಜಗಳದಲ್ಲಿ ತಮ್ಮ ನಾಶ ನಿಶ್ಚಯವೆಂದು ನಂಬಿದ ಈ ಚಿಕ್ಕ ಚಿಕ್ಕ ರಾಷ್ಟ್ರಗಳು ಈಗ ಸ್ವರಕ್ಷಣೆಗಾಗಿ ಶಸ್ತ್ರ ಸಂಗ್ರಹಿಸುತ್ತಿವೆ. ಶಸ್ತ್ರಸಂಗ್ರಹ ಓಟದಲ್ಲಿ ಬ್ರಿಟನ, ಅಮೇರಿಕ ಮತ್ತು ರಶಿಯಾ ಈ ತ್ರಿರಾಷ್ಟ್ರಗಳೂ ಹಿಂದೆ ಬಿದ್ದಿಲ್ಲ. ಜಪಾನ, ಜರ್ಮನಿ ಮೊದಲಾದ ಫ್ಯಾಸಿಸ್ಟ ರಾಷ್ಟ್ರಗಳ ಅಧಃಪತನವಾಗಿರುವುದರಿಂದ ಈಗ

ಹಿರಿ ರಾಷ್ಟ್ರಗಳು ಶಸ್ತ್ರಸಂಗ್ರಹಿಸುತ್ತಿರುವುದಾದರೂ ಏತಕ್ಕೆ? ಅವರನ್ನು ತಡೆಯಲು ಈಗಲೇ ಸಮರ್ಥವಾಗಿಲ್ಲ ರಾಷ್ಟ್ರಸಂಘ. ಜಾಗತಿಕ ಶಾಂತಿ ಪಾಲನೆಯ ಹೊಣೆ ರಾಷ್ಟ್ರಸಂಘದ್ದು. ಹೀಗಿದ್ದರೂ ಆಂಗ್ಲೋ-ಅಮೇರಿಕನ್ನರು ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಚರ್ಚಿಲ್ಲರು ವಾದಿಸಿ ಒಳಸಂಚು ನಡೆಸಿರುವರು. ಅದರಿಂದ ರಾಷ್ಟ್ರಸಂಘದ ತಾಯಿ ಬೇರಿಗೇ ಕೊಡಲಿ ಏಟು ಬಿದ್ದಿದೆ. ಇಂಥ ವಾತಾವರಣದಲ್ಲಿ ಗತಿಸಿದ ಜನಾಂಗ ಸಂಘದ ಗತಿ ಈ ಹೊಸ ರಾಷ್ಟ್ರಸಂಘಕ್ಕೂ ಒದಗದೇ ಇದ್ದರೆ ಅದು ಮಾನವರ ಪುಣ್ಯ. ರಾಷ್ಟ್ರಸಂಘದಲ್ಲಿ ಸಾಮ್ರಾಜ್ಯವಾದಿಗಳಿಗೆ ಸ್ಥಾನ, ಬಹುಮತ ದೊರೆತುದೇ ಈ ದುರಂತಕ್ಕೆ ಕಾರಣ.

## ಜಾಗತಿಕ ಸ್ವಾತಂತ್ರ್ಯ

ಜಾಗತಿಕ ಸ್ವಾತಂತ್ರ್ಯದಿಂದಲೇ ಈ ಜಾಗತಿಕ ದುರಂತವನ್ನು ನಿವಾರಿಸಲು ಸಾಧ್ಯ. ಅಟಂ ಬಾಂಬಿನ ನಿಯಂತ್ರಣದಿಂದ ರಾಷ್ಟ್ರ ಸಂಘದ ರಚನೆಯಿಂದ ಸಾಮ್ರಾಜ್ಯವಾದಿಗಳನ್ನು ತಡೆಯಲಾಗದು. ಆಕ್ರಮಣಶೀಲ ದಬ್ಬಾಳಿಕೆ ನಿಲ್ಲದು. ಶಾಂತಿ ಸುವ್ಯವಸ್ಥೆಯುಂಟಾಗದು. ಪ್ರಗತಿಶೀಲ ಶಕ್ತಿಗಳಿಗೆ ಈ ಬಂಡವಲುವಾದ ಸಾಮ್ರಾಜ್ಯವಾದ ತತ್ವಗಳೇ ಪ್ರಬಲ ಅಡೆತಡೆ. ವಸಾಹತುಗಳು, ಸಾಮ್ರಾಜ್ಯವಿರುವವರೆಗೆ ಸುಖವಿಲ್ಲ. ವಿಶ್ವದ ಕೆಲವು ಭಾಗಗಳಲ್ಲಿ ಸ್ವಾತಂತ್ರ್ಯ ಕೆಲವು ಭಾಗಗಳಲ್ಲಿ ಗುಲಾಮಗಿರಿಯಿದ್ದರೆ ಯುದ್ಧ ನಿವಾರಣೆಯಾಗದು. ಯುರೋಪಿನಲ್ಲಿ ಪ್ರಜಾಸತ್ತೆ, ಪ್ರಜಾರಾಜ್ಯ, ಏಶಿಯದಲ್ಲಿ ದಾಸ್ಯವಿದ್ದರೆ ಭದ್ರತೆ ಅಶಕ್ಯ. ಹಿಂದುಸ್ಥಾನ, ಇಂಡೋನೇಶಿಯ, ಇಂಡೋಚೀನ, ಬ್ರಹ್ಮದೇಶ, ಜಪಾನ್, ಫಿಲಿಪಾಯಿನ್ಸಗಳು ಸ್ವತಂತ್ರವಾಗದೆ ಏಶಿಯದಲ್ಲಿ ಗಂಡಾಂತರ ಮುಗಿಯದು. ಏಶಿಯದ ವಿಮೋಚನೆಯಾಗದೆ ವಿಶ್ವಶಾಂತಿ ಬಿಸಿಲ್ಗುದುರೆಯೇ ಸರಿ. ಚಿಕ್ಕ ದೊಡ್ಡ ರಾಷ್ಟ್ರಗಳೆಂಬ ಭೇದವಿಲ್ಲದೆ ಎಲ್ಲ ದೇಶಗಳ ಸ್ವಾತಂತ್ರ್ಯ, ಸರಿಸಮಾನತೆ ಮನ್ನಿಸಿದರೆ ಅಂತರರಾಷ್ಟ್ರೀಯ ಸ್ನೇಹ ಸುಲಭ. ಲೋಕದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಉತ್ಕರ್ಷ ಕಠಿನವಲ್ಲ. ಈ ರೀತಿಯ ಜಾಗತಿಕ ಸ್ವಾತಂತ್ರ್ಯವನ್ನು ರಾಷ್ಟ್ರ

ಸಂಘವು ಪ್ರತಿಪಾದಿಸಿದರೆ, ಆಚರಣೆಯಲ್ಲಿ ತಂದರೆ ಅದು ಜನಿಸಿದ್ದಕ್ಕೆ ಸಾರ್ಥಕ. ಅದರ ರಾಯಭಾರವೂ ಯಶಸ್ವಿಯಾಗುವುದು.

## ಏಶಿಯದ ವಿಮೋಚನೆ

ಸಹನೆಗೆ ಸೀಮೆಗಲ್ಲೊಂದುಂಟು. ಏಶಿಯ ಇಷ್ಟರವರೆಗೆ ತಾಳಿದುದು ಸಾಕು. ಎಷ್ಟು ದೀರ್ಘ ನಿದ್ದೆ ಅದರದು! ಎಷ್ಟು ಶತಮಾನಗಳ ಗುಲಾಮಗಿರಿ! ಇನ್ನದು ಸೈರಿಸಬಾರದು. ಸೈರಿಸದು. ಶಾಂತ ಮಾರ್ಗವಿರಲಿ, ಇಲ್ಲದಿರಲಿ, ಈ ಸಂಕೋಲೆಗಳನ್ನು ಅದು ಹರಿದು ಮುರಿದು ಹಾಕುವುದರಲ್ಲಿ ಸಂದೇಹವಿಲ್ಲ. ಈ ಹೋರಾಟ ಶಾಂತ ರೀತಿಯಿಂದ ಆದರೆ ಕ್ಷೇಮ. ಏಕೆಂದರೆ ಅದರಿಂದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಲಯಗಳ ಸ್ನೇಹಕ್ಕೆ ಅವಕಾಶವಿದೆ. ಲೋಕಕಲ್ಯಾಣವನ್ನುಂಟು ಮಾಡಲು ಬಹಳ ರಕುತ ಚೆಲ್ಲಬೇಕಾಗಿ ಬರಲಿಕ್ಕಿಲ್ಲ. ವಿಶ್ವಬಾಂಧವ್ಯಕ್ಕೆ ಅದರಿಂದ ಅನುಕೂಲ. ಅದಕ್ಕೆ ಪ್ರೋತ್ಸಾಹ ದೊರೆಯದಿದ್ದುದು ನಮ್ಮ ದುರ್ದೈವ. ಬ್ರಿಟಿಶರು ಈ ಸಂಕಟ ಕಾಲದಲ್ಲೂ ಪೌರ್ವಾತ್ಯ ದೇಶಗಳ ಸ್ನೇಹ ಸಂಪಾದಿಸಲು ತಪ್ಪಿದುವರು. ಹಿಂದುಸ್ಥಾನ, ಬ್ರಹ್ಮದೇಶ, ಇಂಡೋಚೀನ, ಸಯಾಂ, ಇಂಡೋನೇಶಿಯಗಳಲ್ಲಿ ಅವರು ತಾಳಿಸಿರುವ ಧೋರಣದಿಂದ ಅವರ ಕೀರ್ತಿಗೆ ಕಳಂಕಬಂದಿದೆ. ಚೀನಕ್ಕೆ ಸಂತೋಷವಾಗಿಲ್ಲ. ರಶಿಯಕ್ಕೆ ರುಚಿಸಿಲ್ಲ. ಅಮೇರಿಕವು ಮೌನಧರಿಸಿದ್ದರೂ ಅಸಮಾಧಾನದ ಕೊಪ್ಪರಿಗೆಯೇ ಕುದಿಯುತ್ತಿದೆ ಅಲ್ಲಿ. ಅರಬ ದೇಶಗಳು ಬ್ರಿಟನಿನ 'ಸದುದ್ದೇಶ'ಗಳನ್ನು ಸಂಶಯದಿಂದ ನೋಡುತ್ತಿವೆ. ಬ್ರಿಟನದ ವಿರುದ್ಧ ಪರಾಧೀನ ಜನ ಯುದ್ಧಸಾರದೇ ಇದ್ದರೂ ಮಾನಸಿಕ ಯುದ್ಧ ನಡೆದೇ ಇದೆ. ಶಸ್ತ್ರಾಸ್ತ್ರಗಳ ಅಭಾವ, ಶಿಸ್ತು, ಸಂಘಟನೆ ಸಲಕರಣೆಗಳ ಕೊರತೆ, ಬಡತನ, ಅಜ್ಞಾನ ಇವೇ ತಡೆಹಿಡಿದಿವೆ ಗುಲಾಮರನ್ನು. ಈ ಪರಿಸ್ಥಿತಿ ಅನಿಶ್ಚಿತಕಾಲದ ವರೆಗೆ ಉಳಿಯದು. ಹಿಂದುಸ್ಥಾನ, ಇಂಡೋನೇಶಿಯಾ, ಇಂಡೋಚೀನ ಮುಂತಾದ ರಾಷ್ಟ್ರಗಳಲ್ಲಿ ಹತ್ತಿಕೊಂಡಿರುವ ಈ ಸ್ವಾತಂತ್ರ್ಯ ಅಗ್ನಿಯು ಪಾಶ್ಚಾತ್ಯ ಜಗತ್ತಿನ ಸಾಮ್ರಾಜ್ಯ ವಾದವನ್ನು ಕೊನೆಗಾದರೂ ಸುಟ್ಟುಹಾಕುವುದು ಖಚಿತ.

# ಆಗ್ನೇಯ ಏಶಿಯದ ಭವಿತವ್ಯ

ಆಗ್ನೇಯ ಏಶಿಯದಲ್ಲಿರುವ ರಾಷ್ಟ್ರಗಳ ಭವಿತವ್ಯವು ಬಹುಮಟ್ಟಿಗೆ ಹಿಂದುಸ್ತಾನದ ಅದೃಷ್ಟವನ್ನವಲಂಬಿಸಿದೆ. ಹಿಂದುಸ್ತಾನವು ಬ್ರಿಟಿಶ ಸಾಮ್ರಾಜ್ಯದ ಮುಕುಟಮಣಿ. ಹಿಂದುಸ್ತಾನದ ಧನ, ಜನ, ಸಹಾಯ ಸಲಕರಣೆಗಳ ಸಂಪತ್ತಿನಿಂದಲೇ ಜಗತ್ತಿನಲ್ಲಿ ಪ್ರಬಲ ಸಾಮ್ರಾಜ್ಯವನ್ನು ಸ್ಥಾಪಿಸಿ ಅದನ್ನು ಕಾಪಾಡಿಕೊಂಡು ಬರಲು ಬ್ರಿಟಿಶರು ಸಮರ್ಥರಾದರು. ಬ್ರಿಟನ್ ಸಂಪತ್ತು ಸಮೃದ್ಧ ರಾಷ್ಟ್ರವಾದುದೂ ಅದರಿಂದಲೇ. ಹಿಂದುಸ್ತಾನ ಕೈತಪ್ಪಿದರೆ ಬ್ರಿಟನದ ಜಾಗತಿಕ ಒಡೆತನಕ್ಕೆ ಗಂಡಾಂತರ. ಆದುದರಿಂದಲೇ ಹಿಂದುಸ್ತಾನದ ನೆರೆಕರೆಯಲ್ಲಿ ಸ್ವತಂತ್ರ ರಾಷ್ಟ್ರಗಳು ತಲೆ ಎತ್ತುವುದನ್ನು ಬ್ರಿಟಿಶರು ಸೈರಿಸಿಲ್ಲ. ಹಿಂದೀ ರಾಷ್ಟ್ರೀಯ ಚಳವಳಿಗೆ ಆ ಸ್ವತಂತ್ರ ದೇಶಗಳಿಂದ ಪ್ರೋತ್ಸಾಹ ದೊರೆಯಬಹುದೆಂದು ಬ್ರಿಟಿಶರ ಭಯ. ರಶಿಯಕ್ಕಂಜಿದ್ದ ಬ್ರಿಟಿಶರು ಒಂದು ಶತಮಾನದಿಂದಲೂ ಹಿಂದುಸ್ತಾನದ ಪಶ್ಚಿಮ ಗಡಿನಾಡಿನಲ್ಲಿರುವ ಪರ್ಶಿಯಾದಲ್ಲಿ ತಮಗನುಕೂಲವಾದ ಸರಕಾರವನ್ನು ಪ್ರತಿಷ್ಠಿಸಲು ಯತ್ನಿಸಿರುವರು. ಏಡೆನ ಕೈವಶ ಮಾಡಿಕೊಂಡುದುದೂ ಅದಕ್ಕೇ. ಮಧ್ಯಪೂರ್ವ ರಾಷ್ಟ್ರಗಳ ಇಂದಿನ ರಾಜಕೀಯ ಅವ್ಯವಸ್ಥೆಗೂ ಅದೇ ಮೂಲವೆಂದು ಅಮೇರಿಕದ ರಾಜಕಾರಣಿ ವಾಲ್ಟರ ಲಿಪ್‌ಮಾನ್‌ರವರು ನುಡಿದಿರುವರು. ಇಂಡೋಚೀನ, ಇಂಡೋನೇಶಿಯಗಳ ಸ್ವಾತಂತ್ರ್ಯ ಚಳವಳಿಯನ್ನು ಬಡಿಯಲು ಬ್ರಿಟಿಶರು ಸಹಾಯ ನೀಡಿರುವುದೂ ಅದೇ ಕಾರಣದಿಂದ. ಹಿಂದುಸ್ತಾನವು ಗುಲಾಮಗಿರಿಯಲ್ಲಿದ್ದಷ್ಟು ದಿನ ಬ್ರಹ್ಮದೇಶ ಹಾಗೂ ಆಗ್ನೇಯ ಏಶಿಯದ ರಾಷ್ಟ್ರಗಳಿಗೆ ಹಿಂದೀ ಸೇನೆಗಳನ್ನು ಕಳಿಸಲು ಬ್ರಿಟಿಶರಿಗೆ ಸಾಧ್ಯ. ಹಿಂದುಸ್ತಾನ ಸ್ವತಂತ್ರವಾದ ಮೇಲೆ ಅದು ಈಡೇರದು. ಹಿಂದುಸ್ತಾನ ಸ್ವತಂತ್ರವಾದ ಬಳಿಕ ಹತ್ತು ವರುಷಗಳವರೆಗೆ ಆಗ್ನೇಯ ಏಶಿಯವು ಪಾಶ್ಚಾತ್ಯ ದಾಸ್ಯದಲ್ಲಿ ಉಳಿಯದು. ಹಿಂದುಸ್ತಾನದ ನ್ಯಾಯವಾದ ಮಾತನ್ನು ಮೀರಲು ಬ್ರಿಟಿಶರಿಗೆ ಧೈರ್ಯ ಸಾಲದು. ಹಿಂದುಸ್ತಾನದ ಇಚ್ಛೆಯ ವಿರುದ್ಧ ಆಗ್ನೇಯ ಏಶಿಯದಲ್ಲಿ ಇನ್ನಿತರ ವಸಾಹತು

ಸೈನಿಕರನ್ನೂ ಉಪಯೋಗಿಸಲು ಅವರಿಂದಾಗಲಿಕ್ಕಿಲ್ಲ. ಆದುದರಿಂದ ಹಿಂದುಸ್ತಾನದ ಸ್ವಾತಂತ್ರ್ಯವು ಆಗ್ನೇಯ ಏಶಿಯದ ರಾಷ್ಟ್ರಗಳ ದೈವದ ಬಾಗಿಲು ತೆರೆದ ಹಾಗೆ.

## ಸಂಯುಕ್ತ ಘಟನೆ

ಆಗ್ನೇಯ ಏಶಿಯದ ರಾಷ್ಟ್ರಗಳ ಹಿತಭದ್ರತೆಯನ್ನು ಸಾಧಿಸಲು ಸಂಯುಕ್ತ ಘಟನೆಯು ಸರ್ವೋತ್ಕೃಷ್ಟವಾಗಿದೆ. ಬ್ರಹ್ಮದೇಶ, ಸಯಾಂ, ಮಲಯಾ, ಇಂಡೋಚೀನ, ಇಂಡೋನೇಶಿಯಾ, ಫಿಲಿಪಾಯಿನ್ಸ ಮುಂತಾದ ಈ ರಾಷ್ಟ್ರಗಳೆಲ್ಲ ಸೇರಿಕೊಳ್ಳಬಹುದು. ನೇತಾಜಿ ಬೋಸರು ಆಗ್ನೇಯ ಏಶಿಯದಲ್ಲಿದ್ದಾಗ ಅದರ ಭದ್ರ ತಳಹದಿ ಹಾಕಿದರು. ಇದು ಸಮ್ಮತವಲ್ಲದೇ ಇದ್ದರೆ ಆಗ್ನೇಯ ಏಶಿಯದ ಈ ದೇಶಗಳು ಒಂದು ರೀತಿಯ ಪ್ರಾದೇಶಿಕ ವ್ಯವಸ್ಥೆಯನ್ನು ಮಾಡಿಕೊಂಡು ಚಿಕ್ಕ ರಾಷ್ಟ್ರ ಸಂಘವನ್ನು ಕಟ್ಟುವದು ಉಚಿತ. ಬೃಹತ್ ರಾಷ್ಟ್ರಸಂಘದ ಅಧೀನವೇ ಇರಲಿ ಬೇಕಾದರೆ. ಸಿಂಗಾಪುರವು ಈ ಚಿಕ್ಕ ರಾಷ್ಟ್ರಸಂಘಕ್ಕೆ ಬಹಳ ಯೋಗ್ಯ ಸನ್ನಿಧಿಕೇಂದ್ರ. ಈ ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡರೆ, ಆಗ್ನೇಯ ಏಶಿಯದಲ್ಲಿ ಕಾಲು ಚಾಚಲು ಸಾಮ್ರಾಜ್ಯವಾದಿಗಳಿಗೆ ಶಕ್ಯವೇ ಆಗದು. ಧನಬಲ, ಜನಬಲ, ಸಕಲ ಸಾಮುಗ್ರಿಗಳ ಬಲಗಳುಳ್ಳ ಆಗ್ನೇಯ ಏಶಿಯವು ಬಲಿಷ್ಠವಾಗುವುದು. ಈ ರಾಷ್ಟ್ರಸಂಘವು ಹಿಂದು ಸ್ತಾನ ಮತ್ತು ಚೀನಾಗಳ ಕೃಪಾಶ್ರಯಗಳಲ್ಲಾಗಲಿ.

## ಐತಿಹಾಸಿಕ ಸಂಬಂಧ

ಹಿಂದುಸ್ತಾನ ಮತ್ತು ಆಗ್ನೇಯ ಏಶಿಯದ ರಾಷ್ಟ್ರಗಳಿಗೆ ಬಹಳ ಐತಿಹಾಸಿಕ ಸಂಬಂಧವುಂಟು. ಈ ದೇಶಗಳು ಹಿಂದುಸ್ತಾನದ ವಸಾಹತುಗಳಾಗಿದ್ದವೆಂದರೂ ತಪ್ಪಲ್ಲ. ಸಾವಿರಾರು ವರುಷಗಳ ಹಿಂದೆ ಹಿಂದು ಸ್ತಾನದ ವಿವಿಧ ಭಾಗಗಳಿಂದ ಹಿಂದೀಯರು ಇಂಡೋನೇಶಿಯಾ, ಥಾಯಿಲಂಡ (ಸಯಾಂ) ಬರ್ಮಾ, ಮಲಯಾ, ಇಂಡೋಚೀನ, ಫಿಲಿಪಾಯಿನ್ಸ್, ಮೊದಲಾದ ದೇಶಗಳಿಗೆ ವಲಸೆ ತೆರಳಿದ್ದರು. ಸಿರಿಸಂಪತ್ತಿನ

ಮೋಹ ಎಲ್ಲ ಕಾಲದಲ್ಲೂ ಇದ್ದದ್ದೆ. ಒಂಬತ್ತನೇ ಶತಮಾನದಲ್ಲಿ ಅರಬರು, ಹದಿನಾಲ್ಕನೇ ಶತಮಾನದ ಆರಂಭದಲ್ಲಿ ಪಾಶ್ಚಾತ್ಯರು ಅದರ ಆಶೆಯಿಂದ ವಿದೇಶಗಳಿಗೆ ಕಾಲು ಚಾಚಿದರು. ಹಿಂದೀಯರು ಆಗ್ನೇಯ ಏಶಿಯಕ್ಕೆ ತೆರಳಿದುದು ಅದೇ ಕಾರಣದಿಂದ. ಇದಲ್ಲದೆ, ಜನಸಂಖ್ಯೆಯ ಒತ್ತಡ, ಪರಬಲನಾಯಕರ ಪ್ರವೇಶ, ಕ್ಷತ್ರಿಯ ಅರಸರ ಸಾಹಸವೃತ್ತಿ, ವ್ಯಾಪಾರಿಗಳ ಉದ್ಯಮ ಪ್ರಿಯತೆ, ಬ್ರಾಹ್ಮಣ ಹಾಗು ಬೌದ್ಧ ಧರ್ಮಾನುಯಾಯಿಗಳ ಧರ್ಮ ಪ್ರಚಾರ ಬುದ್ಧಿ ಇವುಗಳಿಂದ ಆಗಾಗ ಸಾಗರದ ಅಲೆಗಳಂತೆ ಹಿಂದೀಯರು ಈ ದೇಶಗಳಿಗೆ ಹರಿದು ಹೋದರು. ಮೊದಲು ಈ ಭಾಗಗಳಲ್ಲಿ ವಾಸಿಸುತ್ತಿದ್ದ ಜನರ ಮೇಲೆ ದರ್ಪದಿಂದ ದಬ್ಬಾಳಿಕೆ, ಶೋಷಣೆಗಳನ್ನು ನಡೆಸಿದರೂ ಕಾಲಕ್ರಮೇಣ ಹಿಂದೀಯರು ಅಲ್ಲೇ ಮನೆ ಮಾರುಗಳನ್ನು ಕಟ್ಟಿ ನೆಲಸಿ ಒಕ್ಕಲಾದರು. ಜನ ಬೆಳೆದ ಹಾಗೆ ಶಕ್ತಿ ಸಂಪಾದಿಸಿ ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ, ಆಳಿ, ಆ ದೇಶಗಳ ನಾಗರಿಕರಾಗಿ ಬಾಳಿಬದುಕಿದರು.

## ನೆಲ ಜಲ ಮಾರ್ಗಗಳು

ಹಿಂದೀಯರು ಆಗ್ನೇಯ ಏಶಿಯದ ದೇಶಗಳಿಗೆ ತೆರಳಿದಾಗ ಹಿಡಿದ ಜಲ ಹಾಗು ನೆಲಮಾರ್ಗಗಳ ಕಾಲಹೆಜ್ಜೆಗಳು ಕಾಣಿಸುತ್ತಿವೆ ನಮಗೆ. ಉತ್ತರದಲ್ಲಿ ಬಂಗಾಲದ ತಾಮ್ರಲಿಪಿ (ಇಂದಿನ ತಾಮಲುಕ್) ಆಗ ಪ್ರಸಿದ್ಧ ಬಂದರ. ಈ ರೇವಿನಿಂದ ಹಿಂದೀ ಹಡಗಗಳು ಬ್ರಹ್ಮದೇಶದ ಕರಾವಳಿ, ಮಲಯಾ, ಇಂಡೋನೇಶಿಯಾಗಳಿಗೆ, ಇಂಡೋಚೀನಗಳಿಗೆ ಪ್ರಯಾಣ ಬೆಳೆಸುತ್ತಿದ್ದವು. ಅದರಂತೆ ಓಡಿಸಾದಲ್ಲಿ ಗೋಪಾಲಪುರ, ಮಚಲಿಪಟ್ಣ ಹಾಗೂ ಗುಜರಾತದ ಬರುಕಚ್ಛ (ಇಂದಿನ ಭಡೋಚ) ಬಂದರಗಳಿಂದ ಜನ ಗುಳೆ ಹೋಗಿರುವರು. ಇದರಂತೆ ಬಂಗಾಲ, ಮಣಿಪುರ, ಆಸಾಂ ನೆಲಮಾರ್ಗಗಳ ಮೂಲಕ ವಲಸೆ ಹೋದ ಕಥೆಗಳು ಪ್ರಾಚೀನ ಓಲೆ ಗ್ರಂಥಗಳಲ್ಲಿವೆ. ಕ್ರಿ. ಪೂ. ಎರಡನೇ ಶತಮಾನದಲ್ಲೇ ಚೀನ ಮತ್ತು ಹಿಂದುಸ್ತಾನಗಳೊಳಗೆ ನೆಲಮಾರ್ಗದ ಮೂಲಕ ವ್ಯಾಪಾರ ಭರದಿಂದ ಸಾಗಿತ್ತು. ಹಿಂದುಸ್ತಾನದ ಜನ ಪೌರ್ವಾತ್ಯ ದೇಶಗಳಿಗೆ

ವಲಸೆ ಹೋದ ಸುದ್ದಿ, ಕಥೆ ವಿವರಗಳು ನಮ್ಮ ಹಾಗೂ ಆ ದೇಶಗಳ ದಂತಕಥೆ, ಜನಪದ ಸಾಹಿತ್ಯ ಮತ್ತು ಶಿಲಾಲೇಖಗಳಲ್ಲಿ ದೊರೆಯುತ್ತವೆ. ನಾವು ಈಗ ಮರೆತಿರುವ ಸಂಗತಿಗಳನ್ನೆಲ್ಲ ಅವು ಸ್ಮರಣೆಗೆ ತಂದು ಕೊಡುವವು. ವಲಸೆ ತೆರಳಿದ ಹಿಂದೀಯರ ಉದ್ದೇಶ, ಅವರು ಹಿಡಿದ ನೆಲ ಹಾಗು ಜಲ ಮಾರ್ಗಗಳು, ದಾರಿಯಲ್ಲಿ ಅವರು ಅನುಭವಿಸಿದ ಸಂಕಟಗಳು ಇವೆಲ್ಲವುಗಳ ಮೇಲೆ ಅವು ಬೆಳಕು ಚೆಲ್ಲುತ್ತವೆ.

## ಕ್ರಿಸ್ತ ಪೂರ್ವದಲ್ಲೋ? ಆ ಮೇಲೋ ?

ಹಿಂದೀಯರು ಈ ಸುವರ್ಣ ಭೂಮಿ ಹಾಗೂ ಇನ್ನಿತರ ಪೌರ್ವಾತ್ಯ ದೇಶಗಳಿಗೆ ಕ್ರಿಸ್ತಪೂರ್ವದ ಮೊದಲೇ ಅಥವಾ ಕ್ರಿಸ್ತ ಶಕದಲ್ಲಿ ತೆರಳಿದರೆ? ಕ್ರಿಸ್ತಶಕದ ಎರಡನೆಯ ಶತಮಾನದಲ್ಲೇ ಈ ದೇಶಗಳಲ್ಲೆಲ್ಲ ಹಿಂದೂ ರಾಜ್ಯಗಳಿದ್ದವು. ಅದನ್ನರಿತರೆ ಕ್ರಿಸ್ತಪೂರ್ವದ ಮೊದಲೇ ಹಿಂದೀಯರು ಈ ನಾಡುಗಳಿಗೆ ಗುಳೆಕಟ್ಟಿಕೊಂಡು ಬಂದಿರ ಬೇಕೆಂದು ಊಹಿಸಲಡ್ಡಿಯಿಲ್ಲ. "ಬೃಹತ್ಕಥಾ" ಮುಂತಾದ ಬೌದ್ಧ ಗ್ರಂಥಗಳಲ್ಲಿ ಹಿಂದೀಯರು ಕ್ರಿಸ್ತಪೂರ್ವದಲ್ಲೇ ವಲಸೆ ಬಂದ ಕಥೆ ಗಳಿವೆ. ವಿದೇಹದ ದೊರೆ ಯುದ್ಧದಲ್ಲಿ ಹತನಾಗಲು ಅವನ ರಾಣಿ ಚಂಪಾವತಿ ಇಂಡೋನೇಶಿಯಕ್ಕೆ ತೆರಳಿದ್ದಳಂತೆ. ರಾಜಕುಮಾರನು ವಯಸ್ಸಿಗೆ ಬಂದ ಮೇಲೆ ತಾಯಿಯನ್ನು ಕಾಣುವುದಕ್ಕಾಗಿ ಕಾಶಿ ಯಲ್ಲೊಂದು ಹಡಗ ಕಟ್ಟಿ ನದಿ ಮೂಲಕ ಬಂಗಾಲ ಸಮುದ್ರ ಸೇರಿ ಇಂಡೋನೇಶಿಯಕ್ಕೆ ಹೊರಟುಹೋದ. ಬರುಕಚ್ಛದ (ಭಡೋಚ) ಅಂಥ ನಾವಿಕನೊಬ್ಬನು ಸುವರ್ಣಭೂಮಿಗೆ ಹಡಗವನ್ನೊಯ್ದು ಮುತ್ತು ರತ್ನ, ಚಿನ್ನಗಳ ಚೀಲಗಳನ್ನೇ ಹೊತ್ತು ತಂದ. ಅಚೇರನೆಂಬ ರಾಜ ಸೈನಿಕರೊಂದಿಗೆ ದಂಡೆತ್ತಿಹೋದಾಗ ಶನುದಾಸನೆಂಬ ಪಂಡಿತನೂ ಅವನನ್ನು ಹಿಂಬಾಲಿಸಿದ. ಇವೆಲ್ಲ ಕ್ರಿಸ್ತಪೂರ್ವದ ಕಥೆಗಳು. ಇನ್ನು ಕ್ರಿಸ್ತಶಕದ ಆರಂಭದಲ್ಲಿ ಅನೇಕರು ವಲಸೆ ಹಾಗೂ ದಂಡೆತ್ತಿಹೋದ ಕಥೆ ಕಾವ್ಯಗಳುಂಟು. ಗುಜರಾತದ ರಾಜಕುಮಾರನೊಬ್ಬನು ಕ್ರಿ. ಶ. ೭೫ರಲ್ಲಿ ಬಂದು ನೆಲಸಿದ. ಬುದ್ಧನು ಜನಿಸುವ ಬಹಳ ಮೊದಲೇ ಕಪಿಲವಸ್ತುವಿನ ಶಾಕ್ಯರಾಜನೊಬ್ಬನು ಇರಾವದಿಗೆ ದಂಡೆತ್ತಿ ಬಂದು

ರಾಜ್ಯ ಸ್ಥಾಪಿಸಿದ. ೩೧ ಸೀಳಿಗೆಯವರೆಗೆ ಆ ರಾಜ್ಯ ಮೆರೆಯಿತು. ಇಂದ್ರಪ್ರಸ್ಥದ ಆದಿತ್ಯವಂಶಕ್ಕೆ ಸೇರಿದ ರಾಜಪುತ್ರನೊಬ್ಬನು ಕಾಂಬೋಜಕ್ಕೆ ಬಂದು ನಾಗರಾಜನ ಪುತ್ರಿಯನ್ನು ವಿವಾಹವಾದ.

## ರಾಜ್ಯ ಸಾಮ್ರಾಜ್ಯಗಳು

ಕ್ರಿ. ಶ. ನಾಲ್ಕು ಅಥವಾ ಐದು ಶತಮಾನಗಳವರೆಗೆ ಆಗ್ನೇಯ ಏಶಿಯದಲ್ಲಿದ್ದದು ಹಿಂದೂ ರಾಜ್ಯಗಳೇ. ಆ ಮೇಲೆ ಬೌದ್ಧಧರ್ಮ ವ್ಯಾಪಿಸಿತು. ಅನೇಕ ಹಿಂದೂ ಅರಸರು ಅದನ್ನು ಆಲಿಂಗಿಸಿದರು. ಅದರಿಂದ ಬೌದ್ಧ ರಾಜ್ಯಗಳು ತಲೆ ಎತ್ತಿದುವು. ಕ್ರಿ. ಶ. ೧೪೦೦ ವರುಷಗಳವರೆಗೆ ಹಿಂದೂ ಮತ್ತು ಬೌದ್ಧ ರಾಜ್ಯ ಸಾಮ್ರಾಜ್ಯಗಳ ವೈಭವದ ಕಾಲ. ಶ್ರೀವಿಜಯ, ಮದಜಾಪಾಹಿತ್, ಕಾಂಬೋಜ ಮೊದಲಾದ ಸಾಮ್ರಾಜ್ಯಗಳು ಜಗತ್ಪ್ರಸಿದ್ಧ. ಪೇಗು, ಪಾಗಣ, ಶ್ರೀ ವಿಜಯ, ಸಿಂಹಪುರ, ಅಂಗಾರ್, ಮಧುರಾ, ಮನಿಲಾ ಮೊದಲಾದ ನಗರಗಳನ್ನು ಅರಿಯದವರಿಲ್ಲ. ಹದಿನೈದನೆಯ ಶತಮಾನದಲ್ಲಿ ಅರಬರು ಬಂದರು. ಆ ಮೇಲೆ ಪೋರ್ತುಗೀಸರು, ಸ್ಪಾನಿಶರು, ಡಚ್ಚರು, ಇಂಗ್ಲೀಷರು ಪ್ರವೇಶಿಸಿದರು. ಚೀನಿಯರು ಅನೇಕ ಸಲ ಈ ದೇಶಗಳನ್ನು ಗೆದ್ದುಕೊಂಡಿದ್ದರೂ ಸ್ವಾತಂತ್ರ್ಯಕ್ಕೆ ಭಂಗತಾರದೆ ಸ್ನೇಹ ಸೌಹಾರ್ದದಿಂದ ಬಾಳುತ್ತಬಂದರು.

## ಹಿಂದುಸ್ತಾನ ಮತ್ತು ಚೀನ

ಆಗ್ನೇಯ ಏಶಿಯ ಮತ್ತು ಏಶಿಯದ ಶಾಂತಿ, ಭದ್ರತೆ, ಪ್ರಗತಿಗಳ ದೃಷ್ಟಿಯಿಂದ ಈ ಭಾಗದಲ್ಲಿ ಹಿಂದುಸ್ತಾನ ಮತ್ತು ಚೀನಗಳೊಳಗೆ ಮೈತ್ರಿ ಅವಶ್ಯ. ಅವು ಸಹಕರಿಸಲೂ ಬೇಕು. ಸಾವಿರಾರು ವರುಷಗಳಿಂದಲೂ ಉಭಯ ರಾಷ್ಟ್ರಗಳು ಸ್ನೇಹದಿಂದಲೇ ಬದುಕಿ ಬಾಳಿವೆ. ಗಂಗೆಗೆ ಕೂಡಿದ ಯಮುನೆಯಂತೆ ಆಗ್ನೇಯ ಏಶಿಯದಲ್ಲಿ ಹಿಂದುಸ್ತಾನ ಮತ್ತು ಚೀನಗಳ ಸಂಸ್ಕೃತಿಗಳ ಸಂಗಮವಾಗಿದೆ. ಮೊದಲು ಹಿಂದೀಯರೇ ಬರ್ಮಾ, ಮಲಯಾ, ಇಂಡೋನೇಶಿಯಾ, ಸಯಾಂ, ಇಂಡೋ

ಚೀನ ಮುಂತಾದ ದೇಶಗಳಿಗೆ ತೆರಳಿ ಒಕ್ಕಲಾದರು. ಕಾಲಕ್ರಮೇಣ ಹಿಂದುಸ್ತಾನದೊಡನಿದ್ದ ನಿಕಟ ಸಂಬಂಧ ತಪ್ಪಿ ಚೀನದ ಸಂಪರ್ಕ ಹೆಚ್ಚಾಯಿತು. ಹೀಗಾಗಿ ಎರಡೂ ದೇಶಗಳ ಜನ ಮಿಲನವಾದ ಪುಣ್ಯ ಭೂಮಿಯಿದು. ಎರಡೂ ದೇಶಗಳ ಸಂಸ್ಕೃತಿಗಳ ಪ್ರಭಾವವೂ ವಿಶೇಷವಾಗಿದೆ. ಧರ್ಮ, ಶಿಲ್ಪಕಲೆ, ತತ್ವಜ್ಞಾನ ಇವುಗಳಲ್ಲಿ ಹಿಂದುಸ್ತಾನದ ಕೈಮೇಲು. ರಾಜ್ಯಾಡಳಿತೆ, ಮಿಲಿಟರಿ ಇವುಗಳಲ್ಲಿ ಚೀನದ ಕೈವಾಡ ಬಹಳ. ತಿಕ್ಕಾಟವಿಲ್ಲದೆ ಸ್ನೇಹ ಸೌಹಾರ್ದದಿಂದ ಇತ್ತಂಡದವರೂ ನೆಲಸಿದ್ದಾರೆ. ಏಶಿಯದ ಜನಾಂಗಗಳ ಸ್ವಾತಂತ್ರ್ಯ ಸುಖಗಳಿಗೆ ಇನ್ನಾದರೂ ಬಲಿಷ್ಠ ಹಿಂದುಸ್ತಾನ ಮತ್ತು ಚೀನಗಳ ಸ್ನೇಹ ಅತ್ಯಗತ್ಯ. ಈ ಸ್ನೇಹ ಅಚ್ಚಳಿಯದೆ ನಿಂತರೆ ಆಗ್ನೇಯ ಏಶಿಯಕ್ಕೂ ಶಾಂತಿ. ಕಲಹವಾದಲ್ಲಿ ಆಗ್ನೇಯ ಏಶಿಯವೇ ರಣರಂಗವಾಗುವುದು. ಅನುಭವಿಗಳು, ಸ್ವಾತಂತ್ರ್ಯ ಪ್ರೇಮಿಗಳು ಈ ಕಲಹಕ್ಕೆ ಅವಕಾಶ ಕೊಡುವುದು ತಪ್ಪು. ಬಲಿಷ್ಠ ಹಿಂದುಸ್ತಾನ ಮತ್ತು ಚೀನ ಕೈಗೆ ಕೈಕೊಟ್ಟು ಆಗ್ನೇಯ ಏಶಿಯದ ರಾಷ್ಟ್ರಗಳನ್ನು ಕರುಣೆಯಿಂದ ನಡೆಸಿಕೊಂಡು ಹೋದರೆ ಏಶಿಯದ ಉದ್ಧಾರವಾದ ಹಾಗೆ, ಪರಾಧೀನ ಪ್ರಜೆಗಳ ವಿಮೋಚನೆಯಾದ ಹಾಗೆ.

# ( ಭಾಗ ೨ )

# ಇಂಡೋನೇಶಿಯ

## ಹಿನ್ನೆಲೆ

ಇಂಡೋನೇಶಿಯದಲ್ಲಿ ಮಹಾಕ್ರಾಂತಿ. ಅಗಸ್ಟ ೧೭ ನೇ ತಾರೀಖಿನಿಂದ (೧೯೪೫) ಅದು ಸ್ವತಂತ್ರ ದೇಶ. ಮೂರೂವರೆ ಶತಮಾನಗಳ ಡಚ್ ಮತ್ತು ಮೂರೂವರೆ ವರುಷಗಳ ಜಪಾನಿ ಸಂಕೋಲೆಗಳು ಮುರಿದು ಬಿದ್ದಿವೆ. ಸಾಮ್ರಾಜ್ಯವಾದದ ಸಮಾಧಿಯ ಮೇಲೆ ಇಂಡೋನೇಶಿಯದ ಪ್ರಜಾರಾಜ್ಯ ತಲೆ ಎತ್ತಿ ನಿಂತಿದೆ. ಅದನ್ನು ನಿರ್ನಾಮ ಮಾಡುವ ಡಚ್ಚರ ಯತ್ನ ಯಶಸ್ವಿಯಾಗಲಿಲ್ಲ. ಬ್ರಿಟಿಶರು ಡಚ್ಚರಿಗೆ ಬೆಂಬಲ ಕೊಟ್ಟರೂ ಮಣಿದಿಲ್ಲ ಇಂಡೋನೇಶಿಯನ್ನರು. ನಾಝಿಸಂ ಅಳಿಯಿತು ಮಿತ್ರರ ಬಲಕ್ಕೆ. ಅಟಂ ಬಾಂಬಿಗೆ ಜಪಾನ್ ಶರಣು ಬಂತು. ಆದರೆ ಇಂಡೋನೇಶಿಯನ್ನರ ಸ್ವಾತಂತ್ರ್ಯದ ಕಿಚ್ಚನ್ನೂ ಕೆಚ್ಚನ್ನೂ ನಾಶಮಾಡಲು ಈ ಪಾಶವೀ ಶಕ್ತಿ ಅಸಮರ್ಥವಾಗಿದೆ. ಬಾಂಬು, ಬಂದೂಕು, ಬಾಣ, ಆಕಾಶಬಾಣಗಳಿಂದ ಸ್ವಾತಂತ್ರ್ಯದ ನಂದಾದೀಪವನ್ನು ನಂದಿಸಲು ಅಶಕ್ಯ. ಡಾ. ಸುಕರ್ನೋ, ಡಾ. ಹಾಟಾ, ಶಹರೀರ ಮುಂತಾದವರ ನಾಯಕತ್ವದಲ್ಲಿ ಇಡೀ ಇಂಡೋನೇಶಿಯದ ಜನಾಂಗವೇ ಟೊಂಕಕಟ್ಟಿ ಹೋರಾಡಿದೆ. ಅವರ ಹೋರಾಟ, ಪ್ರತಿಭಟನೆ, ತ್ಯಾಗ ಅನುಪಮ. ಇಡೀ ಏಶಿಯವೇ ಮೆಚ್ಚಿಹೋಗಿದೆ ಈ ಕ್ಷಾತ್ರ ತೇಜಸ್ಸಿಗೆ. ಸಾಮ್ರಾಜ್ಯವಾದಿಗಳೂ ಈಗ ಶಿರಬಾಗಿ ಸಾಮಂತ ಸ್ವರಾಜ್ಯ ಕೊಟ್ಟು ಸಂತವಿಸಲೆತ್ನಿಸಿರುವರು. ಸಂಪೂರ್ಣ ಸ್ವಾತಂತ್ರ್ಯ ಮನ್ನಿಸಿದ ವಿನಾ ತೃಪ್ತಿಯಾಗದು ಇಂಡೋನೇಶಿಯನ್ನರಿಗೆ. ಇಂದಲ್ಲದಿದ್ದರೆ ನಾಳೆ ಡಚ್ಚರು ಅದಕ್ಕೊಪ್ಪದೆ ಗತ್ಯಂತರವಿಲ್ಲ.

## ಡಚ್ಚರ ವಸಾಹತು

ಇಂಡೋನೇಶಿಯ ಡಚ್ಚರ ವಸಾಹತು. ಡಚ್ ಈಸ್ಟ್ ಇಂಡೀಸ್ ದ್ವೀಪಗಳಿಂದು ಅದಕ್ಕೆ ಹೆಸರು. ೩೫೦ ವರುಷಗಳಿಂದ ಡಚ್ಚರದೇ ಒಡೆತನ. ಡಚ್ಚರಲ್ಲಿ ಮೊಟ್ಟಮೊದಲು ಬಂದವ ಜಾನ ಪೀಟರ್ಸ್. ಪೌರ್ವಾತ್ಯ ರಾಷ್ಟ್ರಗಳ ಸೃಷ್ಟಿಸೊಬಗನ್ನು ನೋಡಿ ಆನಂದಪಡಲು ಬಂದವ. ಹಳೇ ನಾಣ್ಯಗಳನ್ನು ಸಂಗ್ರಹಿಸುವುದು ಅವನ "ಹಾಬಿ". ಜಾವಾದಲ್ಲಿ ಒಂದು ಬಿದಿರಿನ ಮನೆ ಕಟ್ಟಿ ತನ್ನ ಕೆಲಸ ಸಾಗಿಸುತ್ತಿದ್ದ. "ದೇಶ ವಜ್ರ ವೈಢೂರ್ಯ ಪೈರು ಪಚ್ಚೆಗಳಿಂದ ತುಂಬಿದೆ. ಸುವರ್ಣಭೂಮಿ" ಎಂದು ವರದಿ ಬರೆದ ಸ್ವದೇಶಕ್ಕೆ. ಸರಿ. ಡಚ್ಚರ ದಂಡಯಾತ್ರೆಗೆ ಅಂದಿನಿಂದ ಆರಂಭ. ಆ ಮೊದಲೇ ಕರಾವಳಿ ಠಾಣೆಗಳನ್ನು ಬಿಗಿದು ವ್ಯಾಪಾರ ಮಾಡುತ್ತಿದ್ದ ಪೋರ್ತುಗೀಸರನ್ನು ಹೊಡೆದಟ್ಟಲು ಡಚ್ಚರು ಸಮರ್ಥರಾದರು. ಆಗ ಡಚ್ಚರದೇ ನೌಕಾ ಪ್ರಾಬಲ್ಯ. ಒಂದೊಂದೇ ದ್ವೀಪಗಳಲ್ಲಿ ಸೇನೆ ಇಳಿಸಿ ದೇಶೀ ರಾಜರನ್ನು ಬಡಿದು ಕಾಲು ಚಾಚಿದರು. ೧೬೦೨ ರಲ್ಲಿ ಡಚ್ ಈಸ್ಟ ಇಂಡಿಯಾ ಕಂಪೆನಿ ಸ್ಥಾಪಿಸಲ್ಪಟ್ಟಿತು. ೧೯ ನೇ ಶತಮಾನದ ಅಂತ್ಯದೊಳಗೆ ಎಲ್ಲ ದ್ವೀಪಗಳೂ ಡಚ್ಚರ ವಶವಾದುವು, ನೆಪೋಲಿಯನ್ ಯುದ್ಧಕಾಲದಲ್ಲಿ ಹಾಲೆಂಡ ಪರಾಧೀನವಾಪ (ಎಂದರೆ ೧೮೧೫-೧೮೩೦ ರ ಅವಧಿಯಲ್ಲಿ ಬ್ರಿಟಿಶರು ಇಂಡೋನೇಶಿಯದ ಮೇಲೆ ದಂಡೆತ್ತಿ ಹೋದರೂ ಕೊನೆಗೆ ಡಚ್ಚರಿಗೇ ಬಿಟ್ಟುಕೊಟ್ಟರು. ಡಚ್ ವ್ಯಾಪಾರೀ ಕಂಪೆನಿಯ ಆಳಿಕೆ ಕೊನೆಗೊಂಡುದುದು ೧೭೯೮ ರಲ್ಲಿ. ಆ ಮೇಲೆ ಪ್ರತ್ಯಕ್ಷ ಡಚ್ ಸರಕಾರದ ರಾಜ್ಯಭಾರ.

## ದೇಶದ ವಿಸ್ತಾರ

ಇಂಡೋನೇಶಿಯ ೨ ಸಾವಿರ ದ್ವೀಪಗಳ ಸಮೂಹ. ಒಟ್ಟು ವಿಸ್ತಾರ ೭ ಲಕ್ಷದ ೮೮ ಸಾವಿರ ಚದರ ಮೈಲುಗಳು. ಎಂದರೆ ನಮ್ಮ ಹಿಂದುಸ್ತಾನದ ಒಂದು ಮೂರರನೇ ಅಂಶ. ಬೋರ್ನಿಯೋ (೨೦೮,೨೮೫ ಚದರ ಮೈಲುಗಳು), ಸುಮಾತ್ರ (೧,೬೭,೪೮೦ ಚ. ಮೈ.), ಜಾವಾ (೫೧ ಸಾವಿರ ಚ. ಮೈ.) ಸೆಲಿಬೆಸ್ (೩೮ ಸಾವಿರ ಚ. ಮೈಲು) ನ್ಯೂಗಿನ್ನಿಯಾ

ಮುಂತಾದ ಐದು ಅತ್ಯಂತ ದೊಡ್ಡ ನಡುಗಡ್ಡೆಗಳು. ಇವುಗಳಲ್ಲದೆ ಮದುರಾ, ಬಾಲಿ, ಲೊಂಬೋಕ್, ಸುಂಬಾವಾ, ಫ್ಲೋರ್ಸ್, ಸುಂಬಾ, ಟಿಮೋರ್, ಬಂಕಾ, ಬಿಲಿಟನ್, ಸುಳ, ಬುರು, ಅರು, ಸರಾವು ಮುಂತಾದ ನೂರಾರು ಚಿಕ್ಕ ಚಿಕ್ಕ ದ್ವೀಪಗಳು ತಲೆ ಎತ್ತಿ ನಿಂತಿವೆ. ಸುಮಾತ್ರ ಕಗ್ಗಾಡಿನ ಭೂಮಿ. ಜ್ವಾಲಾಮುಖಿಗಳ ತವರೂರು. ೯೦ ಜ್ವಾಲಾಮುಖಿಗಳಿವೆ ಸುಮಾತ್ರದಲ್ಲಿ. ಅವುಗಳಲ್ಲಿ ೧೨ ಇನ್ನೂ ಜೀವಂತವಿವೆ. ಜಾವಾದ ಹಣೆಬರಹವೂ ಅಷ್ಟೇ. ಜ್ವಾಲಾಮುಖಿಗಳು ಗಗನ ಚುಂಬಿಸುವಂತೆ ಉನ್ನತವಿವೆ. ಆದರೆ ಉಳಿದ ದ್ವೀಪಗಳಿಗಿಂತ ಜಾವಾ ಸುಭಿಕ್ಷೆಯ ದ್ವೀಪ. ನಂಡನವನ. ತೋಟಗಳು, ಅಕ್ಕಿ ಗದ್ದೆಗಳು ಮೈಲು ಮೈಲುಗಳವರೆಗೆ ಹಬ್ಬಿಕೊಂಡಿವೆ. ಸೃಷ್ಟಿ ಸೌಂದರ್ಯದ ಬೀಡು ಜಾವಾ. ನ್ಯೂಗಿನಿಯಾ ಘೋರಾರಣ್ಯದಿಂದ ತುಂಬಿದೆ. ಅದರ ಪಶ್ಚಿಮಭಾಗ ಮಾತ್ರ ಡಚ್ಚರ ವಶವಿದೆ. ಪೂರ್ವಭಾಗ ಬ್ರಿಟಿಶರದು.

## ಜನ

ಜನಸಂಖ್ಯೆ ಆರು ಕೋಟಿ ಎಂಟು ಲಕ್ಷ. ಇದು ೧೯೩೯ ರ ಜನಗಣನೆಯಂತೆ. ಉಷ್ಣವಲಯದಲ್ಲಿ ಪ್ರಜಾಭಿವೃದ್ಧಿ ಬಹಳ, ಆದುದರಿಂದ ಹೆಚ್ಚು ಕಡಿಮೆ ಏಳು ಕೋಟಿಯಾಗಬಹುದು ಈಗ. ಜಾವಾ ಮತ್ತು ಮದುರಾ ದ್ವೀಪಗಳಲ್ಲಿ ಜನವಸತಿ ಬಹಳ. ಸಾಧಾರಣ ನಾಲ್ಕು ಕೋಟಿ ಜನ ಈ ಎರಡು ದ್ವೀಪಗಳಲ್ಲಿ ವಾಸಿಸುತ್ತಿದ್ದಾರೆ. ೧೯೩೯ ರ ಜನಗಣನೆಯನ್ವಯ ಇಂಡೋನೇಶಿಯನ್ನರು ೫ ಕೋಟಿ ೯೨ ಲಕ್ಷ. ಯುರೋಪಿಯನ್ನರು ಎರಡೂವರೆ ಲಕ್ಷ. ೧೨ ಲಕ್ಷ ೩೦ ಸಾವಿರ ಚೀನಿಯರು. ಇನ್ನಿತರ ಏಶಿಯನ್ನರ ಸಂಖ್ಯೆ ೧ ಲಕ್ಷ ೧೬ ಸಾವಿರದ ಒಳಹೊರಗೆ. ಒಟ್ಟು ಸ್ತ್ರೀಯರ ಸಂಖ್ಯೆ ೩ ಕೋಟಿ ಚಿಲ್ಲರೆ. ಯುರೋಪಿಯನ್ನರಲ್ಲಿ ಡಚ್ಚರೇ ೨ ಲಕ್ಷ ೮೦ ಸಾವಿರ ಮಂದಿ. ಉಳಿದವರಲ್ಲಿ ಜರ್ಮನರು, ಇಂಗ್ಲೀಷರು, ಸ್ವಿಸ್ಸರು, ಫ್ರೆಂಚರು, ರಶಿಯನ್ನರು, ಇಟಾಲಿಯನ್ನರು, ಪೋಲರು, ಜೆಕ್ಕರು ಕೂಡಿ ಭರ್ತಿಯಾಗುತ್ತಾರೆ.

## ಮುಸ್ಲಿಮರ ರಾಜ್ಯ

ಪ್ರಜೆಗಳಲ್ಲಿ ಬಹುಸಂಖ್ಯಾಕರು ಮುಸ್ಲಿಮರು. ಅವರ ಬಲ ೫ ಕೋಟಿ ೮೦ ಲಕ್ಷ. ಕ್ರಿಶ್ಚನರು ೨೦ ಲಕ್ಷ. ಬಾಲಿ ಮತ್ತು ಲೊಂಬೋಕ ದ್ವೀಪಗಳಲ್ಲಿ ಕ್ರಿಶ್ಚನರೇ ಹೆಚ್ಚು. ಬಾಲಿ ದ್ವೀಪದಲ್ಲಿ ಒಂದೂಕಾಲು ಲಕ್ಷ ಹಿಂದುಗಳೂ ವಾಸಿಸುತ್ತಿದ್ದಾರೆ. ೧೦ ಲಕ್ಷ ಬೌದ್ಧರು. ಇದಲ್ಲದೆ ಗುಡ್ಡಗಾಡುಗಳಲ್ಲಿರುವ ಮೂಲನಿವಾಸಿಗಳು ಬೇರೆ. ಸುಮಾತ್ರ ದ್ವೀಪದಲ್ಲಿ ಬಾಟಕ, ಅಚಿನೀಸ, ಗಯೋ, ಲಾಂಪೊಂಗರು, ಬೋರ್ನಿಯೋದಲ್ಲಿ ಡಯಾಕರು, ನ್ಯೂಗಿನಿಯಾದಲ್ಲಿ ಪಪುವಾನರು, ಲೊಂಬೋಕದಲ್ಲಿ ಶಶಾನರು, ಕನಕರು ಮುಂತಾದ ಜನರಿದ್ದಾರೆ. ಇವರೆಲ್ಲ ಮಲಯೇಶಿಯನ ಜನ. ಪ್ರಾಚೀನ ಕಾಲದಲ್ಲಿ ಮಧ್ಯ ಹಿಂದುಸ್ತಾನದಿಂದ ವಲಸೆ ಬಂದ ಮಂದಿ. ಈ ಜನರನ್ನು ಕ್ರಿಶ್ಚನ ಧರ್ಮಕ್ಕೆ ಮತಾಂತರಿಸಲು ಆಳುವ ಡಚ್ ಮಹಾನುಭಾವರು ಭಗೀರಥ ಯತ್ನ ಕೈಕೊಂಡಿರುವರು. ೧೯೪೦ ರಲ್ಲಿ ಮತಾಂತರ ಕಾರ್ಯದಲ್ಲುದ್ಯುಕ್ತವಾದ ೫೭ ಸಂಘ ಸಂಸ್ಥೆಗಳಿದ್ದುವು ಇಂಡೋನೇಶಿಯದಲ್ಲಿ. ೧೯೩೯ ರಲ್ಲಿ ೧೫೧೬ ಪ್ರೊಟೆಸ್ಟಂಟ್ ಕ್ರಿಶ್ಚನ ಪಾದ್ರಿಗಳು ಹಾಗೂ ೫೬೯ ಕಥೋಲಿಕ ಪಾದ್ರಿಗಳು ಇಂಡೋನೇಶಿಯದಲ್ಲಿ ಕ್ರಿಶ್ಚನ ಧರ್ಮದ ಪ್ರಚಾರ ಕಾರ್ಯ ಕೈಕೊಂಡಿದ್ದರು. ಎಲ್ಲರಿಗೆ ಸರಕಾರೀ ಸಂಬಳ.

## ಸುಭಿಕ್ಷೆಯ ದೇಶ

ಸುಭಿಕ್ಷೆಯ ದೇಶ ಇಂಡೋನೇಶಿಯ. ಪ್ರಾಚೀನ ಹಿಂದೀಯರು ಸುವರ್ಣ ಭೂಮಿ ಮತ್ತು ಸುವರ್ಣ ದ್ವೀಪಗಳೆಂದು ಕರೆಯುತ್ತಿದ್ದುದು ಆ ಕಾರಣದಿಂದಲೇ. ಈ ಭೂಮಿಯಲ್ಲಿ ಹೇರಳ ಚಿನ್ನ ಅಥವಾ ಅಮೂಲ್ಯ ವಸ್ತುಗಳು ದೊರೆಯುತ್ತವೆ. ಆ ಸಿರಿಸಂಪತ್ತಿನ ಮೋಹದಿಂದಲೇ ಪ್ರಾಚೀನ ಹಿಂದೀಯರು ಈ ಭೂಭಾಗಕ್ಕೆ ವಲಸೆಹೋಗಿದ್ದರು. ಇಂದು ಡಚ್ಚರಾದರೂ ಅದೇ ಕಾರಣದಿಂದ ತಮ್ಮ ಮುಂಗಮುಷ್ಠಿಯನ್ನು ಸಡಿಲಿಸಲು ಸಿದ್ಧರಿಲ್ಲ. ರಬ್ಬರ್, ಅಕ್ಕಿ, ಸಕ್ಕರೆ, ಕ್ವಿನಿನ, ಕಾಫೀ, ಟೀ, ಕೊಕೋ, ಹೊಗೆಸೊಪ್ಪು, ಪೆಟ್ರೋಲ ಎಣ್ಣೆ, ಕೊಬ್ಬರಿ, ಮೀನ, ಯಥೇಚ್ಚ ಇವೆ ಈ ದೇಶದಲ್ಲಿ. ಮಾವು, ಬಾಳೆ, ಅನಾನಾಸು

ಮುಂತಾದ ಹಣ್ಣು ಹಂಪಲುಗಳಿಗೆ ಕಡಿಮೆಯಿಲ್ಲ. ಇಂಡೋನೇಶಿಯು ಡಚ್ಚರ ದೊಡ್ಡ ನಂದನವನ. ಇನ್ನು ಟಿನ್, ಕಲ್ಲಿದ್ದಲು, ಚಿನ್ನ, ಮೊದಲಾದ ಖನಿಜಗಳ ಕಣಿಗಳೂ ಅಸಂಖ್ಯ ಇವೆ. ಅಸಂಖ್ಯ ಎಕರೆ ಹೊಲ, ರಬ್ಬರ ತೋಟಗಳು ಯುರೋಪಿಯನ್ನರ ವಶ ಇವೆ.

೧೯೩೯ ರಲ್ಲಿ ಒಟ್ಟು ೬೨ ಲಕ್ಷ ಎಕರೆ ಭೂಮಿಯಲ್ಲಿ ಒಕ್ಕಲತನ ನಡೆದಿತ್ತು. ಇದೇ ವರುಷ ಉತ್ಪಾದನೆಯಾದ ಸಕ್ಕರೆ, ೧೬ ಲಕ್ಷ ಟನ್; ಕಾಫೀ ಒಂದೂಕಾಲು ಲಕ್ಷ ಟನ್; ರಬ್ಬರ ಐದು ಲಕ್ಷ ಟನ್; ಕ್ವಿನಿನ್ ೧೨ ಸಾವಿರ ಟನ್; ಹೊಗೆಸೊಪ್ಪು ೪೦ ಸಾವಿರ ಟನ್; ಚಹಾ ಒಂದು ಲಕ್ಷ ಟನ್; ಟಿನ್ ೪೪ ಸಾವಿರ ಟನ್; ಕಲ್ಲಿದ್ದಲು ೨೦ ಲಕ್ಷ ಟನ್; ಪೆಟ್ರೋಲ ಎಣ್ಣೆ ೮೦ ಲಕ್ಷ ಟನ್. ೭ ಲಕ್ಷ ಕುದುರೆಗಳು ಮತ್ತು ೭೯ ಲಕ್ಷ ದನಕರಗಳಿದ್ದುವು.

ಜಗತ್ತಿನ ಉತ್ಪಾದನೆಯಲ್ಲಿ ನೂರಕ್ಕೆ ೯೨ ರಷ್ಟು ಮೆಣಸು (Pepper); ೯೧ ರಷ್ಟು ಕ್ವಿನಿನ್; ೫೦ ರಷ್ಟು ಹೊಗೆಸೊಪ್ಪು; ೨೦ರಷ್ಟು ಟಿನ್; ೨೦ ರಷ್ಟು ಸಕ್ಕರೆ; ೧೦ ರಷ್ಟು ಪೆಟ್ರೋಲ ಎಣ್ಣೆ; ೩೧ ರಷ್ಟು ಕೊಬ್ಬರಿ ಇಲ್ಲೇ ಲಭಿಸುತ್ತದೆ. ಜಗತ್ತಿನಲ್ಲಿ ಇಂಡೋನೇಶಿಯವು ಕುಬೇರರಾಷ್ಟ್ರ. ಪೆಟ್ರೋಲ ಎಣ್ಣೆಯಲ್ಲಿ ಅದಕ್ಕೆ ಜಗತ್ತಿನ ಪ್ರಮುಖ ರಾಷ್ಟ್ರಗಳ ಮಾಲಿಕೆಯಲ್ಲಿ ೫ ನೇಯಸ್ಥಾನ.

## ಡಚ್ಚರಿಗೆ ದೊರೆವ ಲಾಭ

ಡಚ್ಚರು ಇಂಡೋನೇಶಿಯದ ತಮ್ಮ ಈ ಆಸ್ತಿಯಲ್ಲಿ ೧೯ ಕೋಟಿ ಪೌಂಡುಗಳ ಬಂಡವಲು ಸುರಿಸಿರುವರು. ಅವರ ಮಿತ್ರರಾಗಿರುವ ಬ್ರಿಟಿಶರು ಸುರಿಸಿದ ಬಂಡವಲು ೧೫ ಕೋಟಿ ಪೌಂಡುಗಳು. ಹೆಚ್ಚಿನ ರಬ್ಬರ ತೋಟಗಳು, ಹೊಲಗಳು, ಸಕ್ಕರೆ ಕಾರ್ಖಾನೆಗಳು, ಚಹಾ ಕಾಫೀ ತೋಟಗಳು ಡಚ್, ಬ್ರಿಟಿಶ ಮತ್ತು ಅಮೇರಿಕನ್ನರ ಅಧೀನ ವಿವೆ. ಬ್ರಿಟಿಶ ಮತ್ತು ಡಚ್ ಶೆಲ್ ಕಂಪನಿಗಳು ಪರಸ್ಪರ ಸಹಕಾರ ದಿಂದಲೇ ಭೂಗರ್ಭದಿಂದ ಎಣ್ಣೆಯನ್ನು ಮೇಲೆ ಹೀರುತ್ತವೆ. ೧೯೨೯ರ

ವರೆಗೆ ಹಾಲಂಡ್ ಪ್ರತಿವರುಷ ೧೫ ಕೋಟಿ ಪೌಂಡುಗಳ ಲಾಭ ನುಂಗುತ್ತಿತ್ತು. ಕಳೆದ ೧೦ ವರುಷಗಳಲ್ಲಿ ಪ್ರತಿವರುಷ ಮೂರೂಕಾಲು ಕೋಟಿ ಪೌಂಡುಗಳ ಲಾಭ ಮಾಡಿದೆ. ದೇಶದಲ್ಲಿ ಸುರಿಸಿದ ಬಂಡವಲಿಗೆ ವಾರ್ಷಿಕ ನಾಲ್ಕು ಕೋಟಿ ಪೌಂಡುಗಳಷ್ಟು ಬಡ್ಡಿಯೇ ಸಲ್ಲುತ್ತದೆ. ೧೯೪೦ರಲ್ಲಿ ಇಂಡೋನೇಶಿಯ ೪೩ ಕೋಟಿ ಗಿಲ್ಡರಗಳಷ್ಟು ವಸ್ತುಗಳ ಆಮದು ಮಾಡಿದ್ದರೆ ೮೮ ಕೋಟಿ ಗಿಲ್ಡರಗಳ ಸಹಾಯ ಸಂಪತ್ತನ್ನು ರಫ್ತು ಮಾಡಿರುವುದು. ಪ್ರಜಾಕೋಟಿಯಲ್ಲಿ ಡಚ್ ಹಾಗೂ ಇನ್ನಿತರ ಯುರೋಪಿಯನ್ನರ ಸಂಖ್ಯೆ ನೂರಕ್ಕೆ ೫. ಆದರೆ, ದೇಶದ ಸಂಪತ್ತಿನಲ್ಲಿ ನೂರಕ್ಕೆ ೬೫ ರಷ್ಟನ್ನು ಅವರು ತಿಂದು ತೇಗುತ್ತಿದ್ದಾರೆ. ಇಂಡೋನೇಶಿಯನ್ನರು ನೂರಕ್ಕೆ ೮೫ ಜನ. ರಾಷ್ಟ್ರದ ಐಶ್ವರ್ಯದಲ್ಲಿ ಅವರಿಗೆ ನೂರಕ್ಕೆ ೧೨ರಷ್ಟು ಮಾತ್ರ. ದೇಶೀ ಜನ ಪಾಶ್ಚಾತ್ಯರ ಗುಲಾಮರು. ಯುರೋಪಿಯನ್ನರಿಗಾಗಿ ರಬ್ಬರ್, ಚಹಾ, ಕಾಫೀ, ಹೊಗೆಸೊಪ್ಪು, ತೆಂಗು ತೋಟಗಳಲ್ಲಿ ದುಡಿವ ಕೂಲಿಗಳು ಅವರು. ಮೈಸೂರಿನ ಗಡಿನಾಡಿನಲ್ಲಿರುವ ಚಹಾ ಕಾಫೀ ತೋಟಗಳಲ್ಲಿ ದುಡಿವ ದಕ್ಷಿಣ ಕನ್ನಡದ ಕೂಲಿಗಳ ಹಾಗೆ.

## ಆಡಳಿತ ವ್ಯವಸ್ಥೆ

ಇಂಡೋನೇಶಿಯ ಹಾಲಂಡದ ವಸಾಹತು ಭೂಮಿ. ಒಂದೆರಡು ದೇಶೀ ಸಂಸ್ಥಾನಗಳನ್ನು ಬಿಟ್ಟರೆ ಉಳಿದೆಲ್ಲಭಾಗಗಳಲ್ಲೂ ಡಚ್ಚರದೇ ಪ್ರತ್ಯಕ್ಷ ರಾಜ್ಯಭಾರ. ಹಾಲಂಡದ ಏಜಂಟರಾದ ವಾಯಿಸರಾಯರ ಮೂಲಕ ದೇಶದ ಆಡಳಿತೆ. ಅವರ ಅಧೀನ ನಾಲ್ಕು ಅಥವಾ ಆರು ಸದಸ್ಯರನ್ನೊಳಗೊಂಡ ಮಂತ್ರಿಮಂಡಲ. ಈ ಮಂತ್ರಿಮಂಡಲಕ್ಕೆ ಅಧಿಕಾರವಿಲ್ಲ. ವಾಯಿಸರಾಯರಿಂದ ಅವರ ನೇಮಕ. ವಾಯಿಸ ರಾಯರಿಗೆ ಸಲಹೆ ಕೊಡುವುದು ಅವರ ಕರ್ತವ್ಯ. ವ್ಹಾಯಿಸರಾಯರು ದೇಶದ ಮುಖ್ಯ ಸೇನಾಪತಿ. ಅವರು ನಿರಂಕುಶ ಪ್ರಭು. ೧೯೧೭ರಲ್ಲಿ ಡಚ್ಚರು ಜಗತ್ತಿನ ಕಣ್ಣಿಗೆ ಮಣ್ಣೆರೆಯಲು ವೊಲ್ಕಸರಾದ (ಪಾರ್ಲಿಮೆಂಟ್) ಸ್ಥಾಪಿಸಿದರು. ಅದಕ್ಕೂ ಶಾಸಕ ಅಧಿಕಾರವಿಲ್ಲ. "ಜನಾಭಿಪ್ರಾ

ಯವನ್ನು ಸರಕಾರಕ್ಕೆ ತಿಳಿಸುವುದು ಅದರ ಕೆಲಸ.'' ಈ ಪಾರ್ಲಿಮೆಂಟಿನ ಬಲ ೬೦. ಈ ೬೦ ಸದಸ್ಯರಲ್ಲಿ ೩೦ ಇಂಡೋನೇಶಿಯನ್ನರು ಹಾಗೂ ೨೫ ಡಚ್ಚರು ಮತ್ತು ೫ ಜನ ಇನ್ನಿತರ ಏಶಿಯನ್ನರು. ೧೦ ಡಚ್ ಮತ್ತು ೧೦ ಇಂಡೋನೇಶಿಯನ ಸದಸ್ಯರನ್ನು ನೇಮಿಸುವ ಅಧಿಕಾರ ವಾಯಿಸರಾಯರಿಗೆ. ಏಶಿಯನ ಸದಸ್ಯರಲ್ಲೂ ಇಬ್ಬರನ್ನು ವಾಯಿಸ ರಾಯರೇ ನೇಮಿಸುವರು. ಈ ರೀತಿಯ ನಿರ್ಬಂಧದಿಂದ ಪಾರ್ಲಿ-ಮೆಂಟಿನಲ್ಲಿ ಇಂಡೋನೇಶಿಯನ ಜನಪ್ರತಿನಿಧಿಗಳಿಗೆ ಬಹುಮತ ದೊರೆಯದಂತಾಗಿದೆ. ೧೯೨೫ ರಲ್ಲಿ ಜಾವ ಮತ್ತು ಮದುರಾ ದ್ವೀಪ ಗಳಲ್ಲಿ ಡಚ್ಚರು "ಸುಧಾರಣೆ"ಗಳನ್ನು ಜಾರಿ ಮಾಡಿದರು. ಆ ಯೋಜನೆ ಯನ್ವಯ ಈ ಎರಡು ದ್ವೀಪಗಳನ್ನು ಮೂರು ಪ್ರಾಂತಗಳನ್ನಾಗಿ ವಿಭಜಿಸಿ ಒಂದೊಂದು ಪ್ರಾಂತಕ್ಕೊಬ್ಬ ಗವರ್ನರರನ್ನು ನೇಮಿಸಿದರು. ಈ ಗವರ್ನರರ ಅಧೀನ ರೆಸಿಡೆಂಟರು; ಅವರ ಕೈಕೆಳಗೆ ಸಹಾಯ ರೆಸಿಡೆಂಟರು.

ಜೊಗಜಾಕಾರ್ತ ಮತ್ತು ಸೂಯೆರಕಾರ್ತ ದೇಶೀ ಸಂಸ್ಥಾನ ಗಳೆರಡು. ಈ ಸಂಸ್ಥಾನಗಳಲ್ಲಿ ಸುಲ್ತಾನರಿದ್ದರೂ ಅವರು ಉತ್ಸವ ಮೂರ್ತಿಗಳೇ ಸರಿ. ಡಚ್ಚರು ಈ ಎರಡು ಸಂಸ್ಥಾನಗಳಲ್ಲೂ ಗವರ್ನರರನ್ನು ನೇಮಿಸಿದ್ದಾರೆ. ಸುಲ್ತಾನರಿಗೆ ಇವರು ಯೋಗ್ಯ ಸಲಹೆ ಕೊಡುವರು. ಆನೆಗೆ ಅಂಕುಶವಿದ್ದ ಹಾಗೆ ಈ ಸಲಹೆ. ಇನ್ನು ಉಳಿದ ದ್ವೀಪಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಗವರ್ನರರ ಕೈಗಳಿಗೊಪ್ಪಿಸಿದ್ದಾರೆ. ಈ ಗವರ್ನರರು ವಿವಿಧ ಭೂಭಾಗಗಳನ್ನು ರೆಸಿಡೆಂಟ್ಸಿ (ತಾಲೂಕುಗಳಿದ್ದ ಹಾಗೆ) ಗಳೆಂದು ಗೊತ್ತುಮಾಡಿ ೧೭ ರೆಸಿ ಡೆಂಟರನ್ನು ನೇಮಿಸಿಕೊಂಡಿರುವರು. ಆ ರೆಸಿಡೆಂಟರ ಕೈಕೆಳಗೆ ಬೇರೆ ಡಚ್ ಅಧಿಕಾರಿಗಳು.

## ವಾಹನ ಸೌಕರ್ಯಗಳು

ವಾಹನ ಸೌಕರ್ಯಗಳಲ್ಲಿ ಇಂಡೋನೇಶಿಯಾ ಅತಿ ಹಿಂದುಳಿದುದು. ೧೯೪೦ರಲ್ಲಿ ಒಟ್ಟು ೪೩,೭೦೦ ಮೈಲುದ್ದ ರಸ್ತೆಗಳಿದ್ದುವು. ಜಾವಾ

ಮತ್ತು ಮದುರಾ ದ್ವೀಪಗಳಲ್ಲೇ ಸ್ವಲ್ಪ ಪರಿಸ್ಥಿತಿ ತೃಪ್ತಿಕರ. ಈ ಎರಡು ದ್ವೀಪಗಳಲ್ಲಿ ೧೬೮೫೦ ಮೈಲುದ್ದ ರಸ್ತೆಗಳನ್ನು ಕಡಿದಿರುವರು. ಸುಮಾತ್ರಾದಲ್ಲಿ ೧೫೮೦೦. ಬೋರ್ನಿಯೋದಲ್ಲಿ ಕೇವಲ ೨೨೫೦ ಮೈಲುಗಳು ಸೆಲಿಬೆಸ್‌ದಲ್ಲಿ ೫೦೯೦ ಮೈಲುಗಳು. ಲೊಂಬೊಕ್ ಮತ್ತು ಬಾಲಿ ದ್ವೀಪಗಳಲ್ಲಿ ೧೨೫೦ ಮೈಲುಗಳು. ದೇಶಿ ಸಂಸ್ಥಾನಗಳು ಕೂಡಿ ೪೬೦೧ ಮೈಲು ರೇಲ್ವೆ ಮತ್ತು ಟ್ರಾಂವೇ ರಸ್ತೆಗಳನ್ನು ಹಾಕಿದ್ದಾರೆ. ಜಾವಾ ಮತ್ತು ಸುಮಾತ್ರಾ ದ್ವೀಪಗಳಲ್ಲೇ ಸ್ವಲ್ಪ ರೇಲ್ವೆ ಸೌಕರ್ಯ. ಈ ಎರಡು ದ್ವೀಪಗಳಲ್ಲೇ ಕ್ರಮವಾಗಿ ೩೩೭೮ ಮತ್ತು ೧೨೩೩ ಮೈಲು ರೇಲ್ವೆ ರಸ್ತೆಗಳಿವೆ. ಉಳಿದ ದ್ವೀಪಗಳಿನ್ನೂ ಅಂತಹ ಭಾಗ್ಯ ಪಡೆದಿಲ್ಲ.

## ಅಂಚೆ ಮತ್ತು ತಂತಿ

ಡಚ್ಚರು ಸ್ಥಾಪಿಸಿರುವ ಟಪ್ಪಾಲು ಆಫೀಸುಗಳು ೬೭೬. ೪೮೧ ತಂತಿ ಕಚೇರಿಗಳನ್ನು ತೆರೆದಿರುವರು. ಇದಲ್ಲದೆ ಹಳ್ಳಿಗಳಲ್ಲಿ ೧೩೮೦ ಟಪ್ಪಾಲು ಕಚೇರಿಗಳ ಹಾಗೂ ೬೨೯ ತಂತಿ ಕಚೇರಿಗಳ ವ್ಯವಸ್ಥೆಯನ್ನು ಮಾಡಿರುವರು. ವಿದೇಶಿ ಸರಕಾರಗಳು ಮತ್ತು ಖಾಸಗಿ ಕಂಪೆನಿಗಳು ಸ್ಥಾಪಿಸಿದ ೭೨೨ ತಂತಿ ಕಚೇರಿಗಳು ಬೇರೆಯೇ. ಸರಕಾರವು ಒಟ್ಟು ೪೬೨೫ ಮೈಲುದ್ದ ತಂತಿ ಮತ್ತು ೧೬ ಸಾವಿರ ಮೈಲುದ್ದ ಟೆಲಿಫೋನ್ ಸರಿಗೆಗಳನ್ನು ಹಾಕಿದೆ. ವೈಮಾನಿಕ ಸೌಕರ್ಯಕ್ಕಾಗಿ ವಿಮಾನಗೃಹಗಳನ್ನೂ ರೇಡಿಯೋ ಸ್ಟೇಶನಗಳನ್ನೂ ರಚಿಸಿರುವರು.

## ಶಿಕ್ಷಣ

ಇಂಡೋನೇಶಿಯದ ಪ್ರಜಾಕೋಟಿಯಲ್ಲಿ ನೂರಕ್ಕೆ ೭·೨ ರಷ್ಟು ಸಾಕ್ಷರರು. ಮೂರುವರೆ ಶತಮಾನಗಳ ಡಚ್ ಆಳಿಕೆಯ ಸೌಭಾಗ್ಯವಿದು. ೬ ಕೋಟಿ ೮ ಲಕ್ಷ ಪ್ರಜೆಗಳಲ್ಲಿ ಓದುಬರಹ ಬಲ್ಲವರು ಒಟ್ಟು ೪೩ ಲಕ್ಷ. ಇಂಡೋನೇಶಿಯನ್ನರು ೩೭ ಲಕ್ಷ ಮಾತ್ರ. ನೂರಕ್ಕೆ ೬.೪ ರಷ್ಟಾಯಿತು. ಯುರೋಪಿಯನ್ನರಲ್ಲಿ ಬಹುಸಂಖ್ಯಾಕರು ವಿದ್ಯಾವಂತರೇ ಅವರಲ್ಲಿ ಸಾಕ್ಷರತೆಯ ಪ್ರಸಾರ ನೂರಕ್ಕೆ ೭೫·೨ ರಷ್ಟಿದೆ· ಚೀನಿ ಮತ್ತು

ಏಶಿಯನ್ನರಲ್ಲಿ ಕ್ರಮವಾಗಿ ಮೂರುವರೆ ಲಕ್ಷ ಹಾಗೂ ೨ ಸಾವಿರ ಜನ ಸಾಕ್ಷರರು. ೧೯೩೯ ರಲ್ಲಿ ಸರಕಾರವು ಶಿಕ್ಷಣಕ್ಕೆ ತಲಾ ವಾರ್ಷಿಕ ಎಂಟಾಣೆ ವೆಚ್ಚ ಮಾಡಿದೆ. ಯುರೋಪಿಯನ ಮಕ್ಕಳಿಗೆ ಮಾತ್ರ ಖಡ್ಡಾಯ ಉಚಿತ ಪ್ರಾಥಮಿಕ ಶಿಕ್ಷಣ. ಇಂಡೋನೇಶಿಯನ್ನರನ್ನು ಕೇಳುವವರಿಲ್ಲ. ೧೯೪೦ರಲ್ಲಿ ಇಂಡೋನೇಶಿಯದಲ್ಲಿ ೨೯೨ ಯುರೋಪಿಯನ ೩೫೪ ಇಂಡೋನೇಶಿಯನ ಮತ್ತು ೧೧೦ ಚೀನಿ ಪ್ರಾಥಮಿಕ ಸರಕಾರೀ ಹಾಗೂ ಖಾಸಗಿ ಶಾಲೆಗಳಿದ್ದುವು. ಇಂಡೋನೇಶಿಯನ ಸೆಕೆಂಡರಿ ಶಾಲೆಗಳ ಸಂಖ್ಯೆ ೪೧ ಮಾತ್ರ. ಹಳ್ಳಿ ಶಾಲೆಗಳ ಸಂಖ್ಯೆ ೧೭೭೧೮. ಬಟಾವಿಯಾದಲ್ಲಿ ಡಚ್ಚರು ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಸರ್ವಸಾಧಾರಣ ೭ ಕೋಟಿ ಜನರಿರುವ ದೇಶದಲ್ಲಿ ಈ ಶಿಕ್ಷಣ ಪ್ರಸಾರ ಏನೂ ಅಲ್ಲ. ಶೈಕ್ಷಣಿಕ ಪ್ರಗತಿಗೆ ಡಚ್ಚರು ಪ್ರೋತ್ಸಾಹ ಕೊಟ್ಟರಲ್ಲವೇ? ಜನ ವಿದ್ಯಾವಂತರಾದರೆ ತಮ್ಮ ಸಾಮ್ರಾಜ್ಯಕ್ಕೆ ಗಂಡಾಂತರವೆಂದು ಭಯ ಈ ಸಾಮ್ರಾಜ್ಯವಾದಿಗಳಿಗೆ. ಮಾನಸಿಕ ಶೃಂಖಲೆಗಳಲ್ಲಿಡಲು ಅವರ ಸಾಹಸ. ಅಜ್ಞಾನ ಮಾನವನ, ಜನಾಂಗದ ಪ್ರಗತಿಯನ್ನು ತಡೆಯುವ ಸಂಕೋಲೆಯೇ ಸರಿ.

## ವೈದ್ಯಕೀಯ ವ್ಯವಸ್ಥೆ

ವೈದ್ಯಕೀಯ ವ್ಯವಸ್ಥೆಯಲ್ಲೂ ಇಂಡೋನೇಶಿಯದ ಸ್ಥಿತಿ ಕರುಣಾಜನಕ. ಅಜ್ಞಾನ, ದಾರಿದ್ರ್ಯ, ರೋಗರುಜೆಗಳಿಂದ ಬಳಲುತ್ತಿರುವ ಹಿಂದುಳಿದ ಈ ಕೋಟಿಗಟ್ಟಲೆ ಜನರ ಶುಶ್ರೂಷೆಗೆ ೬೪೯ ಡಾಕ್ಟರರು ವರುಷಂಪ್ರತಿ ೫೩ ಲಕ್ಷ ಶಿಶು ಜನನವಾಗುತ್ತಿದೆ ಈ ರಾಷ್ಟ್ರದಲ್ಲಿ. ಹುಟ್ಟಿದ ಮಕ್ಕಳಲ್ಲಿ ಕೊನೆಯ ವರೆಗೆ ಉಳಿದು ಬಾಳುವವು ಕೆಲವೇ. ಜನಿತಕ್ಕೇ ಹೆಚ್ಚಿನ ಶಿಶುಗಳು ಮರಣ ಹೊಂದುತ್ತಿವೆ. ಹೆರಿಗೆಯ ಸೌಕರ್ಯಗಳನ್ನು ಒದಗಿಸುವುದು ಪ್ರತಿಯೊಂದು ನಾಗರಿಕ ಸರಕಾರದ ಕರ್ತವ್ಯ. ಇಂಡೋನೇಶಿಯದಲ್ಲಿ ಡಚ್ಚರು ಅದರ ಕಡೆ ಗಮನ ಕೊಟ್ಟಿಲ್ಲ. ದೇಶದ ರಬ್ಬರ, ಮೆಣಸು, ಅಕ್ಕಿ, ಸಕ್ಕರೆ ಸಾಗಿಸುವುದರಲ್ಲೇ ಅವರ ಕಾಲಕಳೆಯುತ್ತಿದೆ. ಸಾಮಾಜಿಕ ಸೇವೆಗೆ ಅವಕಾಶವೇ ದೊರೆತಿಲ್ಲ. ಪಾಪ! ಅವರು ನೇಮಿಸಿರುವುದು ೧೦೯ ದಾದಿಯರನ್ನು. ೬೯೦ ದಾದಿಗಳು ಖಾಸಗಿ ವೃತ್ತಿ ಕೈಕೊಂಡಿದ್ದಾರೆ.

## ವರ್ಣದ್ವೇಷ

ಡಚ್ಚರ ವರ್ಣದ್ವೇಷಕ್ಕೆ ಅಳತೆಯಿಲ್ಲ. ಸರಕಾರಕ್ಕೂ ದ್ವಿಮುಖ. ಡಚ್ಚರ ವಿಷಯದಲ್ಲೊಂದು ಧೋರಣ. ಇಂಡೋನೇಶಿಯನ್ನರಿಗೆ ಬೇರೊಂದು. ಶಾಸನಗಳೂ ಎರಡುವಿಧ. ಶಿಕ್ಷಣಪದ್ಧತಿಯಲ್ಲೂ ಈ ಭೇದ. ನ್ಯಾಯಸ್ಥಾನಗಳೂ ಬೇರೆ ಬೇರೆ. ಡಚ್ಚರೊಂದಿಗೆ ವಿನಯದಿಂದ ವರ್ತಿಸಲು ತಪ್ಪಿದರೆ ಅದಕ್ಕೆ ಶಿಕ್ಷೆ. ಆ 'ವಿನಯಕ್ಕೆ' ವಿರಾಟ ಸ್ವರೂಪ. ಡಚ್ಚರೊಂದಿಗೆ ಡಚ್ ಭಾಷೆಯಲ್ಲಿ ಸಂಭಾಷಿಸಿದರೆ ಅದು ವಿನಯವಾಗಲಿಲ್ಲ. ಸೊಕ್ಕಾಯಿತು. ವಿನಯಭ್ರಷ್ಟರಿಗೆ ೩ ವರುಷಗಳ ಕಠಿಣ ಶಿಕ್ಷೆ, ಛಟಕಿ ಶಿಕ್ಷೆ ಹಾಗೂ ೨೦ ಪೌಂಡುಗಳ ದಂಡ ಹೇರುವ ಅಧಿಕಾರವಿದೆ ನ್ಯಾಯಸ್ಥಾನಕ್ಕೆ. ಡಚ್ ಕೋರ್ಟಿನಲ್ಲಿ ಇಂಡೋನೇಶಿಯನ್ನರು ನೆಲದ ಮೇಲೆ ಹಾಸಿದ ಚಾಪೆಯಲ್ಲಿ ಕುಳಿತಿರಬೇಕು. ( ಎಷ್ಟು ಕರುಣೆ ಡಚ್ಚರಿಗೆ! ಚಾಪೆ ಪೂರೈಸುತ್ತಾರಲ್ಲ! ) ನಿಂತರೆ ಅಥವಾ ಕುರ್ಚಿಯಲ್ಲಿ ಕುಳಿತರೆ ಕೋರ್ಟಿಗೆ ಅಪಮಾನ! ಶಿಕ್ಷೆ ತಪ್ಪಿದ್ದಲ್ಲ. ಅದಕ್ಕೆ ೧೯೨೬ರಲ್ಲಿ "ತಲೆ ಕೆಟ್ಟ" ಚೀನಿ ಪತ್ರಿಕೋದ್ಯಮಿ ಡಚ್ ನ್ಯಾಯಾಸ್ಥಾನದ ಈ "ಪವಿತ್ರ" ಕಾಯದೆಯನ್ನು ಧಿಕ್ಕರಿಸಿದ. ಸರಿ, ಅ ತಪ್ಪಿಗೆ ಛಟಕಿ ಶಿಕ್ಷೆಯ ಪ್ರಾಯಶ್ಚಿತ್ತವನ್ನುಂಡ. ನೂರು ವರುಷಗಳ ಹಿಂದೆ ಇಂಡೋನೇಶಿಯನ್ನರು ರಸ್ತೆಗಳ ಮೇಲೆ ಸಂಚರಿಸಬಾರದೆಂಬ ನಿರ್ಬಂಧವಿತ್ತು. ಮೊನ್ನೆ ಮೊನ್ನೆಯವರೆಗೆ ಹಳ್ಳಿಜನ ಹೆದರುತ್ತಿದ್ದರು ಅದಕ್ಕೆ. ಪ್ರಜಾರಾಜ್ಯ ಸ್ಥಾಪಿಸಲ್ಪಟ್ಟ ಮೇಲೆ ಆ ಹೇಡಿತನ ಹೋಯಿತು ಅವರ ಎದೆಯಿಂದ.

— —

## ರಾಜಕೀಯ ಜಾಗೃತಿ

ಇಂಡೋನೇಶಿಯದಲ್ಲಿ ರಾಜಕೀಯ ನವಜಾಗೃತಿಯುಂಟಾದುದು ೨೦ನೇ ಶತಮಾನದ ಆರಂಭದಲ್ಲಿ. ಬಾಲಿ ದ್ವೀಪದ ಸ್ವಾತಂತ್ರ್ಯ ಯುದ್ಧ ಜನಾಂಗದ ಸುಪ್ತಚೇತನವನ್ನು ಪ್ರಚೋದಿಸಿತು. ಬಾಲಿ,

ಜಾವಾದ ಸಮೀಪವಿರುವ ಒಂದು ಚಿಕ್ಕ ದ್ವೀಪ. ಬಹಳ ಪ್ರಾಚೀನ ಕಾಲದಿಂದ ಹಿಂದೂ ಅರಸರು ಈ ದ್ವೀಪದಲ್ಲಿ ಆಳುತ್ತಿದ್ದರು. ಇಂಡೋನೇಶಿಯದಲ್ಲಿ ಅನೇಕ ರಾಜ್ಯ ಸಾಮ್ರಾಜ್ಯಗಳು ತಲೆ ಎತ್ತಿ ಆಳಿ ಬಾಳಿ ಅಳಿದರೂ ಈ ಬಾಲಿ ಸ್ವತಂತ್ರವಾಗಿಯೇ ಇದ್ದಿತು. ಉಳಿದ ದ್ವೀಪಗಳ ಜನ ಹಾಗೂ ಅರಸರು ಇಸ್ಲಾಂ ಧರ್ಮ ಸ್ವೀಕರಿಸಿದರು. ಬಾಲಿ ಮಾತ್ರ ಹಿಂದೂ ರಾಜ್ಯವಾಗಿಯೇ ಮೆರೆಯಿತು. ೧೮ ನೇ ಶತಮಾನದಲ್ಲಿ ಡಚ್ಚರು ಸ್ವಾತಂತ್ರ್ಯಪ್ರಿಯ ಬಾಲಿ ದ್ವೀಪವನ್ನು ತಡವಿದರು. ೧೮೪೯ ರಲ್ಲಿ ಬಾಲಿ ಅರಸ ಡಚ್ಚರ ಪ್ರಭುತ್ವವನ್ನು ಮನ್ನಿಸಿದ. ಆದರೆ ಪಾಶ್ಚಾತ್ಯ ನೊಗದಿಂದ ಪಾರಾಗಲು ಅವನ ಹಂಬಲ. ಪರದಾಸ್ಯವನ್ನು ಅವನು ಸಹಿಸದಾದ. ೧೯೦೮ ರಲ್ಲಿ ಬಾಲಿಯ ದೇವಗಂಗ ರಾಜ ಯುದ್ಧವನ್ನೇ ಮಾಡಿದ. ಅಮಿತ ಬಲ ತಂದು ಡಚ್ಚರು ಅವನ ಅರಮನೆಗೆ ಮುತ್ತಿಗೆ ಹಾಕಿದರು. ಜಯದ ಆಶೆಯಿರಲಿಲ್ಲ ಅವನಿಗೆ. ಅನಿರ್ಬಂಧ ಶರಣುಬಂದರೆ ಜೀವ ರಕ್ಷಿಸುವೆವೆಂದು ಜೀವದಾಶೆ ತೋರಿಸಿದರು ಡಚ್ಚರು. ಹಿಂದಿನ ಬಲ, ವೈಭವವನ್ನು ಕಳೆದುಕೊಂಡಿದ್ದರೂ ಹಿಂದಿನವರ ಕ್ಷಾತ್ರ ತೇಜಸ್ಸನ್ನೂ ಕಳೆದುಕೊಂಡಿರಲಿಲ್ಲ ದೊರೆ. ದೇವಗಂಗನದು ಕೆಚ್ಚೆದೆ. ತನ್ನ ಮಂತ್ರಿ, ಮಡದಿ, ಮಕ್ಕಳೊಡನೆ ರಣರಂಗಕ್ಕೆ ಪ್ರವೇಶಿಸಿ ಡಚ್ಚರ ತಲೆ ಚೆಂಡಾಡಿದ. ಕೈಸೋತ ಮೇಲೆ ಅವನೂ ಒರಗಿದ ಅವನ ಮಂತ್ರಿ, ಮಕ್ಕಳು, ಮಡದಿ ಅದೇ ರೀತಿ ವೀರೋಚಿತವಾಗಿ ಮಡಿದರು. ದೇವಗಂಗನ ಈ ಸ್ವಾತಂತ್ರ್ಯ ಹೋರಾಟದಿಂದ ಇಂಡೋನೇಶಿಯದಲ್ಲೆಲ್ಲ ವಿದ್ಯುತ್ ಸಂಚಾರವಾಯಿತು. ಜಡಜಾಡ್ಯ ಹರಿದೆತ್ತಲೋ ಹೋಯಿತು. ದೇಶದಲ್ಲಿ ರಾಜಕೀಯ ಚಳವಳಿಗಾಗಿ ಅನೇಕರು ಟೊಂಕಕಟ್ಟಿದರು.

## ಬೋದಿ ಉತ್ತಮ

ಇಂಡೋನೇಶಿಯದಲ್ಲಿ ಮೊಟ್ಟಮೊದಲನೆಯದಾಗಿ ಸ್ಥಾಪಿಸಲ್ಪಟ್ಟ ರಾಜಕೀಯ ಸಂಸ್ಥೆ ಬೋದಿ ಉತ್ತಮ (Boedi Oetomo). ಅದು ರೂಪ ಹೊಂದಿದುದು ೧೯೦೮ ರಲ್ಲಿ. ಬಟಾವಿಯಾ ನಗರ ಅದರ

ಸನ್ನಿಧಿಕೇಂದ್ರ. ಅದು ಸ್ವಲ್ಪ ಮಂದಗಾಮಿ ಸಂಸ್ಥೆ. ಶ್ರೀಮಂತರು ಅಧಿಕಾರಿಗಳು ಅದರ ಸದಸ್ಯರು. "ಇಂಡೋನೇಶಿಯನ್ನರಿಗೆಲ್ಲ ಯೋಗ್ಯ ಶಿಕ್ಷಣ ಅವಶ್ಯ. ಶಿಕ್ಷಣವೂ ಉಚಿತವಿರಬೇಕು. ಕೂಲಿಕಾರರಿಗೆ ಅಧಿಕ ವೇತನ." ಇವೇ ಆ ಪಕ್ಷದ ಕಾರ್ಯಕ್ರಮಗಳು. ೧೯೧೦ ರಲ್ಲಿ ೧೦ ಸಾವಿರವಿತ್ತು ಅದರ ಸಂಖ್ಯೆ. ರೈತರೂ ಅದಕ್ಕೆ ಬೆಂಬಲ ಕೊಡುತ್ತಿದ್ದರು. ಡಚ್ ತೋಟ, ಕಣಿಗಳಲ್ಲಿ ದುಡಿವ ಕೂಲಿಕಾರರು ಸಂಜೆಯ ತಂಪು ಹೊತ್ತಿಗೆ ಒಂದೆಡೆ ಗುಂಪು ಕೂಡುತ್ತಿದ್ದರು. ಪಕ್ಷದ ಸದಸ್ಯರೂ ವಿದ್ಯಾರ್ಥಿಗಳೂ ಅವರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು. ಜನರಲ್ಲಿ ರಾಜಕೀಯ ಜಾಗೃತಿಯನ್ನು ಬೆಳೆಸಲು ಬಹಳ ಸಹಾಯವಾಯಿತು ಈ ಪಕ್ಷದಿಂದ.

### ಶರೀಕತ್ ಇಸ್ಲಾಂ

ಬೋದಿ ಉತ್ತಮ, ಅದಕ್ಕಿಂತ ಪ್ರಗತಿಪರ ಮತ್ತು ಉಗ್ರ ಸಂಸ್ಥೆಗೆ ದಾರಿ ತೆರೆಯಿತು. ೧೯೧೨ ರಲ್ಲಿ ಶರೀಕತ್ ಇಸ್ಲಾಂ ರಾಜಕೀಯ ಸಂಸ್ಥೆ ತಲೆ ಎತ್ತಿತು (Sarekat-i-Islam). ಬೋದಿ ಉತ್ತಮದ ಆದರ್ಶದೊಂದಿಗೆ ಧಾರ್ಮಿಕ ಶಿಕ್ಷಣ ಕೊಡುವದೂ ಅದರ ಉದ್ದೇಶ. ೧೯೧೩ ರಲ್ಲಿ ಕೂಡಿದ ಮಹಾಸಭೆಯಲ್ಲಿ ಹಾಲಂಡಗೆ ನಿಷ್ಠೆ ಪ್ರದರ್ಶಿಸಿದರು. ಆದರೆ ೧೯೧೭ರಲ್ಲಿ ರಶಿಯದಲ್ಲಿ ರಾಜ್ಯಕ್ರಾಂತಿಯುಂಟಾದ ಬಳಿಕ ಶರೀಕತ ಇಸ್ಲಾಂದ ಧೋರಣ ಬದಲಿಸಿತು. "ಸ್ವಾತಂತ್ರ್ಯ ಉದ್ದೇಶ" ಎಂದು ಘೋಷಿಸಿದರು. ರಶಿಯದ ರಾಜ್ಯ ಕ್ರಾಂತಿಯಿಂದ ಬಹಳ ಪರಿಣಾಮವಾಯಿತು ಇಂಡೋನೇಶಿಯನ ಮುಖಂಡರ ಮೇಲೆ. ರಶಿಯಾ, ಹಿಂದುಸ್ಥಾನಗಳ ಹಾಗೆ ಇಂಡೋನೇಶಿಯವೂ ರೈತರ ರಾಜ್ಯ. ಒಕ್ಕಲತನವೇ ಬಹುಸಂಖ್ಯಾಕ ಜನರ ಉದ್ಯೋಗ. ಸೋವಿಯೆಟ್ ರಶಿಯದ ಕ್ರಾಂತಿಕಾರರ ಆದರ್ಶವನ್ನೇ ಇಂಡೋನೇಶಿಯನ್ನರು ತಮ್ಮ ಮುಂದಿಟ್ಟುಕೊಳ್ಳಲೆತ್ನಿಸುತ್ತಾ ಬಂದರು. ಹೀಗಿದ್ದರೂ ಸಹಕಾರ ಅವರ ಬೀಜ ಮಂತ್ರ. ಡಚ್ಚರೊಡನೆ ಸಹಕರಿಸಿದರೆ ಅವರ ಹೃದಯದಲ್ಲಿ ಬದಲಾವಣೆಯಾಗಬಹುದು. ಮತ್ತು ಅವರು ಸ್ವಾತಂತ್ರ್ಯ

ಕೊಡಬಹುದೆಂದು ಅವರ ಕುರುಡು ನಂಬಿಗೆ. ಆದರೆ ೧೯೧೪-೧೮ ರ ಯುದ್ಧಾಂತ್ಯವಾದ ಮೇಲೆ ಆ ಭ್ರಮನಿರಸವಾಯಿತು. ೨೦ ಲಕ್ಷ ರಾಷ್ಟ್ರಾಭಿಮಾನಿಗಳು ಶೆರೀಕತ್ ಇಸ್ಲಾಂ ಸಂಸ್ಥೆಯಲ್ಲಿ ಸೇರಿಕೊಂಡರು.

## ಡಚ್ಚರ ವಚನ ಭಂಗ

೧೯೧೪-೧೮ ರ ಮಹಾಯುದ್ಧದಲ್ಲಿ ಡಚ್ಚರು ಇಂಡೋನೇಶಿಯನ್ನರಿಗೆ ಸ್ವರಾಜ್ಯದ ವಚನಕೊಟ್ಟು ಅವರ ಸಹಾಯವನ್ನಪೇಕ್ಷಿಸಿದರು. ಅಸಂಖ್ಯ ಇಂಡೋನೇಶಿಯನ ತರುಣರು ಡಚ್ಚರ ಸೇನೆ, ನೌಕಾಪಡೆಗಳಲ್ಲಿ ಸೇರಿಕೊಂಡರು. ಕಾರ್ಖಾನೆಗಳಲ್ಲಿ, ತೋಟಗಳಲ್ಲಿ, ಎಣ್ಣೆ ಕಣಿಗಳಲ್ಲಿ ದುಡಿದರು. ಅಪಾರ ಧನಸಹಾಯವನ್ನು ನೀಡಿತು ಇಂಡೋನೇಶಿಯ. ಆದರೆ ಯುದ್ಧ ಮುಗಿದ ಮೇಲೆ ಮಾತನ್ನು ಕೃತಿಯಲ್ಲಿ ಇಳಿಸಲಿಲ್ಲ ಡಚ್ಚರು. ಈ ವಚನ ಭಂಗ, ದ್ರೋಹಗಳಿಂದ ಕ್ರಾಂತಿಯ ಕಿಡಿ ಹೊತ್ತಿತು ದೇಶದಲ್ಲಿ. ವಿದೇಶಗಳಲ್ಲಿ ಅಭ್ಯಾಸ ನಡೆಸಲು ತೆರಳಿದ್ದ ತರುಣರಲ್ಲಿ ಕ್ರಾಂತಿ ಭಾವನೆ ಉಕ್ಕೇರಿ ಬಂತು. ಅದರ ಬಿಸಿ ಶೆರೀಕತ್ ಇಸ್ಲಾಂ ಸಂಸ್ಥೆಗೂ ಹತ್ತಿತು. ಶಕ್ಯವಿದ್ದರೆ ಶಾಂತಮಾರ್ಗ. ಇಲ್ಲದೇ ಇದ್ದಲ್ಲಿ ದೇಶ ಮತ್ತು ಜನರ ಹಿತಕ್ಕಾಗಿ ತ್ಯಾಗಮಾಡಲು ಪಕ್ಷವು ಸಿದ್ಧ ಎಂದು ಅದು ಸಾರಿತು.

## ೧೯೧೯ ರ ಸಂಪು

ಕೂಲಿಕಾರರ ಸಂಖ್ಯೆ ಬಹಳ ಇಂಡೋನೇಶಿಯದಲ್ಲಿ. ಡಚ್, ಬ್ರಿಟಿಶ್, ಅಮೇರಿಕನ್ ಕಣಿ ತೋಟಗಳಲ್ಲಿ ಬೆವರು ಸುರಿಸುವ ಆಳುಗಳಿವರು. ರಾಜಕೀಯ ಚಳವಳಿಯ ಗಾಳಿ ಈ ತೋಟಗಳಿಗೂ ಬೀಸಿತು. ಕೂಲಿಕಾರರು ಟ್ರೇಡ್ ಯೂನಿಯನ್‌ಗಳನ್ನು ಕಟ್ಟಲು ಹೆಣಗಿದರು. ಕೂಲಿಕಾರರಿಗೆ ಅಧಿಕ ವೇತನ, ಶಿಕ್ಷಣ ಅವಶ್ಯವೆಂದು 'ಬೋದಿ ಉತ್ತಮ' ಪ್ರತಿಪಾದಿಸುತ್ತ ಬಂದುದರಿಂದ ಕೂಲಿಕಾರರಿಗೆ ಧೈರ್ಯ ಬಂತು. ಅವರೂ ಆ ಸೊಲ್ಲನ್ನು ಆಡತೊಡಗಿದರು. ಅವರ ಬೇಡಿಕೆಯು ನಿರಾಕರಿಸಲ್ಪಡಲು ಸಂಪುಗಳನ್ನು ಹೂಡಿದರು. ಸಿಮರಾಂಗ ಟ್ರಾಂವೇ ಕೂಲಿಕಾ

ರರು, ಸುಮಾತ್ರದ ರೇಲ್ವೆ ಕೆಲಸಗಾರರು, ಸೌರಬಾಯ ಮುದ್ರಣಾಲಯಗಳ ಕೆಲಸಗಾರರು, ಸಕ್ಕರೆ ಕಾರ್ಖಾನೆಗಳಲ್ಲಿ ದುಡಿವವರು ಎಲ್ಲ ೧೯೧೯ ರಲ್ಲಿ ಕೆಲಸ ನಿಲ್ಲಿಸಿದರು. ಆ ಮೇಲೆ ೧೯೨೦, ೧೯೨೨, ೧೯೨೩ ಈ ವರುಷಗಳಲ್ಲೆಲ್ಲ ಇಂಡೋನೇಶಿಯದಲ್ಲಿ ಮುಷ್ಕರಗಳೇ ಮುಷ್ಕರಗಳು.

## ಕಮ್ಯುನಿಸ್ಟ ಪಕ್ಷ

ಕ್ರಾಂತಿಯ ಕುಡಿ ಕೊನರಲು ಕೂಲಿಕಾರರು ಬಂಗಾರದಂಥಾ ಭೂಮಿ. ಕಮ್ಯುನಿಝಂ ಅವರ ತಲೆಗೆ ಲಗು ಹೊಗುತ್ತದೆ. ಕೂಲಿಕಾರರು ಕಮ್ಯುನಿಝಂದ ಜೀವಾಳ. ಕಮ್ಯುನಿಝಂ ಕೂಲಿಕಾರರ ದೈವ, ದೇವರು. ಅದೇ ಅವರ ಭಾಗ್ಯ ಭಾಂಡಾರದ ಕೀಲಿಕೈ. ಇಂಡೋನೇಶಿಯದಲ್ಲೂ ಹಾಗೆಯೇ. ಕಮ್ಯುನಿಸ್ಟರು ಕೂಲಿಕಾರರನ್ನು ಸಂಘಟಿಸಿ ಪಕ್ಷವನ್ನು ಸ್ಥಾಪಿಸಲು ಸಮರ್ಥರಾದರು. ೧೯೨೦ ರಲ್ಲಿ ಅದು ಉದಯವಾಯಿತು. ರಾಷ್ಟ್ರೀಯ ಹಾಗೂ ಕ್ರಾಂತಿಕಾರ ಶಕ್ತಿಗಳಿಗೆಲ್ಲ ಕಮ್ಯುನಿಸ್ಟ ಪಕ್ಷ ಸಂಗಮ ಸ್ಥಳ. ಮೂರು ವರುಷಗಳೊಳಗೆ ಅದು ಪ್ರಭಾವಶಾಲಿ ಸಂಸ್ಥೆಯಾಯಿತು. 'ಶೆರೀಕತ್ ಇಸ್ಲಾಂ' ರಾಜಕೀಯದೊಂದಿಗೆ ಧಾರ್ಮಿಕ ಭಾವನೆಯನ್ನು ಬೆರಸುತ್ತಿತ್ತು. ಕಮ್ಯುನಿಸ್ಟರ ಒಲವು ರಾಜಕಾರಣದ ಕಡೆ ಹೆಚ್ಚು. ಆದುದರಿಂದ ಶೆರೀಕತ್ ಇಸ್ಲಾಂಗಿಂತಲೂ ಅದಕ್ಕೆ ಜನಾಂಗದ ಬೆಂಬಲ ಹೆಚ್ಚೇ ದೊರೆಯಿತು. ೧೯೨೦,೨೨, ೨೩ ರರ ಸಂಪಿನ ಹಾವಳಿಗೆ ಅವರೇ ಕಾರಣ. ವಾಯಿಸರಾಯರು ಎಚ್ಚತ್ತುದುದು ಆಗಲೇ. ಕೂಲಿಕಾರ ಮುಖಂಡರನ್ನು ಕಂಡು ಕಣ್ಣು ಕೆಂಪಗೆ ಮಾಡಿದರು. ಶಿಕ್ಷೆ, ದಂಡ, ಗಡೀಪಾರುಗಳ ಬೆದರಿಕೆ ಹಾಕಿದರು.

## ೧೯೨೬-೨೭ ರ ಹೋರಾಟ

೧೯೨೬ ಮತ್ತು ೨೭ ಚರಿತ್ರಾರ್ಹ ಕಾಲ. ದೊಡ್ಡ ಪ್ರಮಾಣದ ಬಂಡಾಯವುಂಟಾದುದು ಆಗಲೇ. ೧೯೨೬ ನೇ ನವಂಬರದಲ್ಲಿ ತಿಕ್ಕಾಟ ಬಡಿದಾಟಗಳೇ ಆದುವು. ದೇಶದಾದ್ಯಂತ ಮುಷ್ಕರ ಅದು ಅಸಹಕಾರ ಚಳವಳಿಯೆಂದರೂ ಸರಿಯೆ. ವಿದೇಶಿ ವಸ್ತುಗಳಿಗೆಲ್ಲ ಬಹಿಷ್ಕಾರ. ಕೊನೆ

ಕೊನೆಗೆ ಅಂಚೆ ಕಚೇರಿ, ರೇಲ್ವೆ ಸ್ಟೇಶನ್ನುಗಳನ್ನು ವಶಪಡಿಸಿಕೊಳ್ಳಲು ದೇಶಪ್ರೇಮಿಗಳು ಯತ್ನಿಸಿದುದುಂಟು. ಕಮ್ಯುನಿಸ್ಟರದೂ ಕೈವಾಡವಿತ್ತು ಈ ಹೋರಾಟದಲ್ಲಿ. ೧೯೨೭ ರ ದಂಗೆಯೂ ಇದೇ ರೀತಿಯ ವಿರಾಟ ಸ್ವರೂಪವನ್ನು ಧರಿಸಿತ್ತು. ಆದರೆ ಚಳವಳಿಯನ್ನು ಹತ್ತಿಕ್ಕಲು ಡಚ್ಚರು ಸಮರ್ಥರಾದರು. ಮತಪ್ರದರ್ಶಕರ ಮೇಲೆ ಗುಂಡುಗಳ ಮಳೆಗರೆದು ದರಿಂದ ೨೦೦ ಜನ ಮರಣ ಹೊಂದಿದರು ೪೫೦೦ ಕಮ್ಯುನಿಸ್ಟರನ್ನು, ಕೂಲಿಕಾರರನ್ನು ಹಾಗೂ ರಾಷ್ಟ್ರೀಯ ಮುಖಂಡರನ್ನು ಸೆರೆಮನೆಗಳಿಗಟ್ಟಿ ದರು. ೧೩೦೮ ರಾಷ್ಟ್ರಪ್ರೇಮಿಗಳನ್ನು ನ್ಯೂಗಿನಿಯಾ ದ್ವೀಪದಲ್ಲಿರುವ ಕೂಸವೂರ ಮತ್ತು ತಾನತಿನಗಿ ಶಿಬಿರಗಳಿಗೆ ಗಡೀಪಾರು ಮಾಡಿದರು. ಅನೇಕರನ್ನು ಗಲ್ಲಿಗೇರಿಸಲಾಯಿತು. ನ್ಯೂಗಿನಿಯಾ ದ್ವೀಪದ ಸ್ಥಾನಬದ್ಧ ಶಿಬಿರ ನಿರ್ಜನ ಪ್ರದೇಶದಲ್ಲಿದೆ. ಘೋರಾರಣ್ಯ ಮತ್ತು ರೋಗರುಜೆಗ ಳಿಂದ ಕೂಡಿದ ದ್ವೀಪ ನ್ಯೂಗಿನಿಯಾ. ಅಲ್ಲಿಗೆ ತೆರಳಿದ ದೇಶಾಭಿಮಾನಿಗ ಳಲ್ಲಿ ಹಿಂತಿರುಗಿದವರು ವಿರಳ. ಝಾರ್ ರಶಿಯದ ಕಾಲದಲ್ಲಿ ಸೈಬೀರಿ ಯದ ಶಿಬಿರವಿದ್ದ ಹಾಗೆ. ನಾಝಿಗಳ ಬೆಲ್ಸೆನದಂತೆಯೇ ಇಂಡೋನೇಶಿ ಯನ್ನರಿಗೆ ನ್ಯೂಗಿನಿಯಾ ಸ್ಥಾನಬದ್ಧ ಶಿಬಿರ. ನಾಝಿಗಳು ಯುದ್ಧ ಕಾಲದಲ್ಲಿ ಮಾತ್ರ ಆ ಅತ್ಯಾಚಾರ ಕೈಕೊಂಡಿದ್ದರೆ ಡಚ್ಚರು ಶತಮಾನಗ ಳಿಂದ ಅದನ್ನು ನಡೆಸುತ್ತ ಬಂದಿರುವರು.

## ಆಯ್. ಪಿ ಎನ್.

ಸಾಮ್ರಾಜ್ಯವಾದಿ ಡಚ್ಚರು ದೇಶದಲ್ಲಿ ಮಿಲಿಟರಿ ಆಡಳಿತೆಯನ್ನೇ ನಡೆಸತೊಡಗಿದರು. ಯಾವ ರಾಜಕೀಯ ಚಟುವಟಿಕೆಗೂ ಅವಕಾಶ ಕೊಡಲಿಲ್ಲ. ಶರೀಕತ್ ಇಸ್ಲಾಂ, ಕಮ್ಯುನಿಸ್ಟ ಮುಂತಾದ ರಾಜಕೀಯ ಪಕ್ಷಗಳು ನಿರ್ಬಂಧಗೊಳಗಾದವು. ಈ ಪಕ್ಷಗಳ ಮುಖಂಡರು ತಲೆ ಮರೆಸಿಕೊಂಡು ಗುಪ್ತಗಾಮಿನಿಗಳಾದರು. ಇಂತಹ ವಾತಾವರಣದಲ್ಲಿ ಇಂಡೋನೇಶಿಯ ಮತ್ತಿಬ್ಬರು ನಾಯಕರನ್ನು ಕೊಟ್ಟಿತು ಜನಕ್ಕೆ. ಡಾ. ಸುಕರ್ನೋ ಮತ್ತು ಡಾ. ಹಾಟಾ ೧೯೨೮ ರಲ್ಲಿ "ಇಂಡೋನೇಶಿಯ ಪರಟಾಯಿ ನ್ಯಾಶನಲ್" (ಆಯ್. ಪಿ. ಎನ್.) ಸಂಸ್ಥೆ ಕಟ್ಟಿದರು.

"ಇಂಡೋನೇಶಿಯುದ ರಾಜ" ಎಂಬ ರಾಷ್ಟ್ರೀಯ ಗೀತವನ್ನು ಜನಾಂಗಕ್ಕೆ ಒದಗಿಸಿದವರೂ ಅವರೇ. ಹಿಂದುಸ್ತಾನವೇ ಡಾ|| ಸುಕರ್ನೋರವರ ಆದರ್ಶ. ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಸೊಲ್ಲು, ಪಲ್ಲವಿ, ಬಹಿಷ್ಕಾರ ಅಸಹಕಾರ, ಅಹಿಂಸೆಗಳೇ ಅವರ ಹೋರಾಟದ ಪದ್ಧತಿ. ಗೋಖಲೆ, ತಿಲಕ, ಗಾಂಧಿ, ನೆಹರು, ಅಝಾದರವರೇ ಅವರಿಗೆ ಪ್ರಿಯರು. ಪ್ರೇರಕ ಶಕ್ತಿಗಳು. ಆದರೆ ಅವರ ಮೇಲೂ ಡಚ್ಚರ ವಕ್ರದೃಷ್ಟಿ. ೧೯೨೯ ರಲ್ಲಿ ಈ ರಾಜಕೀಯ ಸಂಸ್ಥೆಯ ಮೇಲೂ ನಿರ್ಬಂಧಕಾಜ್ಞೆ ಹೊರಟಿತು. ಡಾ|| ಸುಕರ್ನೋ, ಮಹಮ್ಮದ ಹಾಟಾ ಇವರಿಬ್ಬರೂ ದೇಶಭ್ರಷ್ಟರಾದರು. ನ್ಯೂಗಿನಿಯಾ ದ್ವೀಪದ ಸ್ಥಾನಬದ್ಧ ಶಿಬಿರಗಳೇ ಅವರ ವಾಸಸ್ಥಳ. ಅಂದಿನಿಂದ ರಾಜಕೀಯ ಚಟುವಟಿಕೆಯೇ ಅಕ್ರಮವಾಯಿತು ಇಂಡೋನೇಶಿಯದಲ್ಲಿ.

## ಜಪಾನದ ದಂಡಯಾತ್ರೆ

ಜಪಾನವು ಆಂಗ್ಲೋ-ಅಮೇರಿಕನ್ನರ ವಿರುದ್ಧ ಯುದ್ಧ ಹೂಡಿದ ಬಳಿಕ (೧೯೪೧ ಡಿಸೆಂಬರ) ೧೯೪೨ ರ ಆರಂಭದಲ್ಲಿ ಡಚ್ ಈಸ್ಟ ಇಂಡಿಸ (ಇಂಡೋನೇಶಿಯ)ದ ಮೇಲೆ ದಂಡೆತ್ತಿ ಬಂದಿತು. ಫೆಬ್ರುವರಿ ೨೦ ನೇ ತಾ. ದಿನ ಜಪಾನಿ ಸೈನಿಕರು ಬಾಲಿ ದ್ವೀಪದಲ್ಲಿ ಇಳಿದರು. ಬಟಾವಿಯಾ ನಗರ ವಶವಾದುದು ಮಾರ್ಚ ೫ನೇ ತಾ. ದಿನ. ಮಾರ್ಚ ೮ನೇ ತಾ. ದಿನ ಡಚ್ಚರು ಅನಿರ್ಬಂಧ ಶರಣು ಹೋದರು. ಜಪಾನರಿಗೆ ಅಮಿತ ಶಸ್ತ್ರಾಸ್ತ್ರಗಳೂ ದೊರೆತುವು. ಡಚ್ ಸೈನಿಕರು ಒಂದು ಗುಂಡನ್ನೂ ಹಾರಿಸಲಿಲ್ಲ. ಡಚ್ ಮುಖ್ಯ ಸೇನಾಪತಿಗಳು ಹಾಗೂ ಉಚ್ಚ ಅಧಿಕಾರಿಗಳು ಒಂದು ವಾರದ ಮೊದಲೇ ಕಾಲಿಗೆ ಬುದ್ಧಿ ಹೇಳಿದರು. ೩½ ಶತಮಾನಗಳ ಡಚ್ ಸಾಮ್ರಾಜ್ಯ ಜಪಾನದ ಒಂದೇ ಏಟಿಗೆ ಉರುಳಿ ಮಣ್ಣು ಮುಕ್ಕಿತು.

## ಜಪಾನಿ ಆಳಿಕೆ

ನಾಝಿಗಳು ಹಾಲಂಡನ್ನು ಆಕ್ರಮಿಸಿದ ಮೇಲೆ ಇಂಡೋನೇಶಿಯನ್ನರಲ್ಲಿ ಸ್ವಲ್ಪ ಧೈರ್ಯ ಬಂತು. ಡಚ್ ವಿರೋಧ ಚಳವಳಿಯೂ ಪ್ರಬಲವಾಗಹತ್ತಿತು. ಜಪಾನವು ದಾಳಿ ಮಾಡಿದ ಬಳಿಕ ಡಚ್ಚರಿಗೆ ಯಾರೂ

ಟಗ್ಗಲಿಲ್ಲ. "ಏಶಿಯವು ಏಶಿಯನ್ನರಿಗೆ" ಂಬ ಜಪಾನರ ಸೊಲ್ಲಿಗೆ ಮರುಳಾಗಿ ಹೋದವರುಂಟು. ಜಪಾನರು ಸ್ವಾತಂತ್ರ್ಯ ಕೊಡಬಹುದೆಂಬ ಲವಲವಿಕೆಯಿಂದ ಅನೇಕರು ಸಹಕಾರ ನೀಡಿದರು. ಇಂಡೋನೇಶಿಯನ್ನರ ಸಹಕಾರ ಪಡೆಯಬೇಕಾಗಿದ್ದರೆ ರಾಷ್ಟ್ರೀಯ ಚಳವಳಿಗೆ ಪ್ರೋತ್ಸಾಹಕೊಡುವುದವಶ್ಯವೆಂದು ಜಪಾನರೂತಿಳಿದಿದ್ದರು. ಆದರೆ ರಾಷ್ಟ್ರೀಯ ಚಳವಳಿ ಪ್ರಬಲವಾದರೆ ತಮ್ಮ ಸ್ಥಾನಮಾನಕ್ಕೆ ಗಂಡಾಂತರವೆಂದೂ ಅವರು ಕಂಡಿದ್ದರು. ಆದುದರಿಂದ ಅವರು ಮಧ್ಯ ಮಾರ್ಗ ಹಿಡಿದರು. ರಾಷ್ಟ್ರಾಭಿಮಾನಿ ಇಂಡೋನೇಶಿಯನ್ನರಿಗೆ ನಿರಾಶೆಯಾಯಿತು. ಏಶಿಯವು ಏಶಿಯನ್ನರಿಗೆ ಸೊಲ್ಲಿನ ಅರ್ಥ, ಏಶಿಯವು ಜಪಾನರಿಗೆ ಎಂದಾಗ ಅವರಿಗೆ ಹೊಳೆಯಿತು. ಜಪಾನಿ ನೊಗವನ್ನು ಕಳಚಲು ಅವರು ಯುಕ್ತಿಸತೊಡಗಿದರು.

## ದೇಶಪ್ರೇಮಿಗಳ ಸಂಘಟನೆ

ಜಪಾನರು ಪ್ರವೇಶಿಸಿದಾಗ ಹೆಚ್ಚಿನ ಮುಖಂಡರು ಸೆರೆಮನೆಗಳಲ್ಲೇ ಕೊಳೆಯುತ್ತಿದ್ದರು. ಬಿಡುಗಡೆ ಮಾಡಿದರೆ ತಮ್ಮೊಡನೆ ಸಹಕರಿಸಬಹುದೆಂದು ಜಪಾನರ ಆಶೆ. ಅದರಂತೆ ಕ್ರಾಂತಿಕಾರರನ್ನು ಬಂಧಮುಕ್ತ ಮಾಡಿದರು. ಡಚ್ಚರ ಆಳಿಕೆಯಲ್ಲಿ ಉಸಿರಾಡಿಸಲು ಅವಕಾಶವಿರಲಿಲ್ಲ. ಅವರಿಗೆ. ಆದುದರಿಂದ ಚಟುವಟಿಕೆಗಳಿಗೆ ಜೀವದಾನ ಈಗ ದೊರೆಯಿತು. "ಸಹಕಾರವೇ? ಅದಕ್ಕೇನಡ್ಡಿ?" ಎಂದು ಜಪಾನರ ಕಣ್ಣಿಗೆ ಮಣ್ಣೆರಚಿ ಕಾರ್ಯೋನ್ಮುಖರಾದರು. ಜಪಾನರ ದೃಷ್ಟಿಗೆ "ಸಹಕಾರ" ವಾಗಿ ಗೋಚರಿಸಿದರೂ ಒಳಗಿಂದೊಳಗೆ ಸುಕರ್ನೊ, ಹಾಟಾ, ಶರಿಫುದ್ದೀನ್, ಮುಂತಾದವರು ದೇಶಪ್ರೇಮಿಗಳನ್ನು ಸಂಘಟಿಸುತ್ತಿದ್ದರು. ಸಹಕಾರದ ಸೋಗು ಹಾಕದೇ ಇರುತ್ತಿದ್ದರೆ ಶಿಸ್ತು, ಸಂಘಟನೆ ಮಾಡುವುದು ಶಕ್ಯವಿರಲಿಲ್ಲ. ೧೯೪೩ ರರಲ್ಲಿ ಸುಕರ್ನೋ ಬಹಿರಂಗವಾಗಿ ಗೊರಿಲ್ಲಾ ದಳವನ್ನು ರಚಿಸ ತೊಡಗಿದರು. ಜಪಾನರ ಕೈಕಾಲುಗಳು ತಣ್ಣಗಾದುವು. "ಏಕೆ?" ಎಂದು ಅವರು ಪ್ರಶ್ನಿಸಲು, "ಮಿತ್ರರು ಇಳಿದರೆ ಅವರನ್ನು ಪ್ರತಿಭಟಿಸಲು ಬೇಕಲ್ಲ" ಎಂದು ಸುಕರ್ನೋ ಹಾರಿಕೆಯ ಉತ್ತರ ಕೊಟ್ಟರು. ಮಹಾಕ್ರಾಂತಿಯ ಕಹಳೆ ಮೊಳಗಲು ಸುಕರ್ನೋರವರ ಸನ್ನಾಹವಿದು ಎಂದು ಜಪಾನರಿಗೆ ಆಗ ಗೊತ್ತಾಗಲಿಲ್ಲ.

## ದಂಗೆ

ಜಪಾನಿ ಆಳಿಕೆಯಲ್ಲಿ ರಾಷ್ಟ್ರೀಯ ಚಳವಳಿ ವಿರಾಟಸ್ವರೂಪ ತಾಳಿದ್ದುದೇನೋ ನಿಜ. ಅದರ ಸದುಪಯೋಗ ಮಾಡಿಕೊಳ್ಳುವ ಜಪಾನರ ಆಶೆ ಈಡೇರಲಿಲ್ಲ, ಅಷ್ಟೆ. ಜಪಾನರಿಗೇ ಅವರಿಂದ ಪ್ರಾಣಸಂಕಟ ಬಂದಿತು. ಸಾಮ್ರಾಜ್ಯವಾದಕ್ಕೆ ಇಂಡೋನೇಶಿಯನ್ನರು ಕಡುಹಗೆಗಳು. ಅದು ಜಪಾನಿ ಸಾಮ್ರಾಜ್ಯವಾದರೂ ಒಂದೆ. ಡಚ್ ಸಾಮ್ರಾಜ್ಯವಾದರೂ ಒಂದೇ. ಸಾಮ್ರಾಜ್ಯವಾದ ಮತ್ತು ರಾಷ್ಟ್ರೀಯ ವಾದಗಳೊಳಗೆ ಎಣ್ಣೆ ಸೀಗೆ. ಇಂಡೋನೇಶಿಯನ್ನರೂ ಅನೇಕ ಬಾರಿ ಜಪಾನರೊಡನೆ ಹೆಣಗಾಡಿದರು. ೧೯೪೩, ೪೪, ೪೫ ರಲ್ಲಿ ಅಲ್ಲಲ್ಲಿ ಬಡಿದಾಟಗಳೇ ಆದುವು. ಸಿಂಗಪಾರ್ನ, ಇಂದ್ರಮಾಜೋಯೊ, ಬ್ಲಿತಾರ, ಜಿಲಜಾಪಗಳಲ್ಲಿ ದಂಗೆಗಳೆದ್ದುವು. ದೇಶಪ್ರೇಮಿಗಳ ನಾಯಕ ಶರೀಫುದ್ದೀನರು ಜಪಾನರಿಂದ ಬಂಧಿಸಲ್ಪಟ್ಟರು. ೩೦೦ ದೇಶಪ್ರೇಮಿಗಳು ಸೆರೆಮನೆಗೆ ಕಳಿಸಲ್ಪಟ್ಟರು. ಮೂವರು ಮುಖಂಡರು ಪ್ರಾಣ ತೊರೆದರು. ಇಂಡೋನೇಶಿಯನ್ನರ ಬಂದೂಕುಗಳಿಗೆ ಅನೇಕ ಜಪಾನರು ಬಲಿಯಾದುದು ನಿಜವೆಂದು ೧೯೪೪ ಮಾರ್ಚಿ ತಿಂಗಳಲ್ಲಿ ಲಂಡನ ಟೈಮ್ಸ ಕೂಡಾ ಒಪ್ಪಿಕೊಂಡಿತ್ತು. ಮಹಾಕ್ರಾಂತಿಯ ದೊಡ್ಡ ಯೋಜನೆಯನ್ನೇ ಸುಕರ್ನೋ, ಹಾಟಾ, ಶರೀಫುದ್ದೀನರು ತಯಾರಿಸಿದ್ದರಂತೆ. ಕ್ರಾಂತಿಯ ಸಮಯ ನಿರೀಕ್ಷಣೆ ಮಾಡುತ್ತ ಕುಳಿತಿದ್ದರವರು. ಅಮೇರಿಕನ್ನರು ಹಿರೋಶಿಮಾ, ನಾಗಸಾಕಿ ನಗರಗಳ ಮೇಲೆ ಅಟಂ ಬಾಂಬನ್ನು ಎಸೆದಕೂಡಲೇ ಗಳಿಗೆಬಟ್ಟಲು ತುಂಬಿತು. ಸುಕರ್ನೊ, ಕ್ರಾಂತಿಯ ಕಹಳೆ ಮೊಳಗಿದರು.

---

## ಮಹಾಕ್ರಾಂತಿ

---

ಬಂಡಾಯ! ಕ್ರಾಂತಿ! ಅಗಸ್ಟ ೧೭ ನೇ ತಾರೀಖಿನ ದಿನ ಇಂಡೋನೇಶಿಯದಲ್ಲಿ ಮಹಾಕ್ರಾಂತಿ! ಸರಕಾರೀ ಕಟ್ಟಡ, ಅಂಚೆ ತಂತಿ ಕಚೇರಿಗಳೆಲ್ಲ ಸೈನಿಕರ ವಶವಾದುವು. ಜಪಾನರ ಅಧಿಕಾರ

ಜರಿಯಿತು. ಇಂಡೋನೇಶಿಯನ್ನರು ಅಧಿಕಾರ ಕಿತ್ತುಕೊಂಡರು ಅವರಿಂದ. ಅದೇ ದಿನ ಪ್ರಜಾರಾಜ್ಯ ಸ್ಥಾಪಿಸಲ್ಪಟ್ಟಿತು. ಮೂರೂವರೆ ಶತಮಾನಗಳ ಡಚ್ ಮತ್ತು ಮೂರೂವರೆ ವರುಷಗಳ ಜಪಾನಿ ದಾಸ್ಯ ಕೊನೆಗಂಡಿತು. ಪ್ರತಿಯೊಬ್ಬರ ಮೋರೆಯಲ್ಲಿ ಗೆಲವು. ಸ್ಫೂರ್ತಿಯ ಕಳೆ. ಆತ್ಮವಿಶ್ವಾಸದ ತೇಜಸ್ಸು. ಹೆಣ್ಣುಗಂಡು ಎಲ್ಲ ಸಂತೋಷದಿಂದ ನಲಿದರು.

## ಪ್ರಜಾರಾಜ್ಯ

ಬಡವನಿಂದ ಬಲ್ಲಿದನವರೆಗೂ ಪ್ರಜಾರಾಜ್ಯದ ಆಜ್ಞೆಗೆ ಶಿರಬಾಗಿದರು. ರಶಿಯದ ರಾಜ್ಯಕ್ರಾಂತಿಯಂತೆ ಬಹಳ ರಕ್ತಪಾತವಾಗಲಿಲ್ಲ ಇಂಡೋನೇಶಿಯದಲ್ಲಿ. ಜಪಾನರು ಶರಣುಹೋದುದರಿಂದ ಇದ್ದಕ್ಕಿದ್ದ ಹಾಗೆ ಆಡಳಿತೆಯ ವ್ಯವಸ್ಥೆಯೆಲ್ಲ ಕ್ರಾಂತಿಕಾರರ ವಶವಾಗಿದೆ. ಸರಕಾರೀ ಕಟ್ಟಡಗಳು, ತಂತಿ ಟಪಾಲು ಕಚೇರಿಗಳು ವಿದ್ಯುಚ್ಛಕ್ತಿ ಕೇಂದ್ರ, ನೀರಾವರಿ ಸೌಕರ್ಯ ಎಲ್ಲವೂ ಅದರ ಅಧೀನ. ಎಲ್ಲ ಕೆಲಸವೂ ಸುಸೂತ್ರವಾಗಿ ಸಾಗಿದೆ. ಸರಕಾರದ ಎಲ್ಲ ಉಪಕರಣಗಳೂ ಇವೆ. ರಾಜ್ಯಸೂತ್ರ ಹಿಡಿದವರು ಸಮರ್ಥರು. ಆಡಳಿತೆಯ ಅನುಭವವುಳ್ಳವರು. ಪ್ರಜಾವಾತ್ಸಲ್ಯಕ್ಕೆ ಪಾತ್ರರಾದವರು. ಯಾರಿಗೂ ಅಸಮಾಧಾನವಿಲ್ಲ. ಎಲ್ಲಿಯೂ ಗಲಭೆ ಗೊಂದಲಗಳಿಲ್ಲ. ದಂಗೆಯಾಗಲಿಲ್ಲ. ದರೋಡೆ ನಡೆಯಲಿಲ್ಲ. ತಿಕ್ಕಾಟವೂ ಆಗಲಿಲ್ಲ. ಬಹಳ ಶಿಸ್ತಿನಿಂದ, ಅಚ್ಚುಕಟ್ಟಿನಿಂದ ನಡೆಯಿತು ಸರಕಾರ. ಇಂಡೋನೇಶಿಯನ್ ಜನಾಂಗ ಸಂತೋಷ ಸಾಗರದಲ್ಲಿ ತೇಲಿತು.

## ಘೋಷಣೆ

ಎರಡು ದಿವಸಗಳ ಮೇಲೆ ಪ್ರಜಾರಾಜ್ಯ ಸ್ವಾತಂತ್ರ್ಯದ ಘೋಷಣೆ ಮಾಡಿತು. ಅಧ್ಯಕ್ಷ ಸುಕರ್ನೋ ಮತ್ತು ಉಪಾಧ್ಯಕ್ಷ ಹಾಟಾರವರು ಅದಕ್ಕೆ ಸಹಿ ಹಾಕಿದ್ದರು. “ಇಂಡೋನೇಶಿಯನ ಜನಾಂಗದ ಪರವಾಗಿ, ಇಂಡೋನೇಶಿಯದ ಜನ ಈ ಮೂಲಕ

ನಮ್ಮ ಸ್ವಾತಂತ್ರ್ಯವನ್ನು ಘೋಷಿಸುವೆವು. ಸ್ವಾತಂತ್ರ್ಯ ಪ್ರತಿಯೊಂದು ಜನಾಂಗದ ಜನ್ಮಸಿದ್ಧ ಹಕ್ಕು. ಈ ಜಗತ್ತಿನಲ್ಲಿ ಮಾನವೀಯತೆಗೆ ವಿರುದ್ಧವಾಗಿರುವ ಯಾವುದೇ ರೀತಿಯ ಪರತಂತ್ರವನ್ನು ರದ್ದುಪಡಿಸಲೇ ಬೇಕು. ನಮ್ಮ ಹೋರಾಟವು ಈಗ ವೈಭವದ ಸ್ಥಿತಿಗೆ ಮುಟ್ಟಿದೆ. ಸ್ವತಂತ್ರ ಇಂಡೋನೇಶಿಯನ್ ಪ್ರಜಾರಾಜ್ಯಕ್ಕೆ ಅವರನ್ನು ಕೈಹಿಡಿದು ನಡೆಸಿಕೊಂಡು ಬರಲಾಗಿದೆ. ಈ ಪ್ರಜಾರಾಜ್ಯ ಸ್ವತಂತ್ರ, ನ್ಯಾಯ, ಸಂಪನ್ನ ಹಾಗೂ ಐಕಮತ್ಯವುಳ್ಳದ್ದು. ದೇವರ ದಯೆಯ ಬಲದಿಂದ ಮತ್ತು ಸ್ವತಂತ್ರ ರಾಷ್ಟ್ರೀಯ ಜೀವನದ ಘನ ಆದರ್ಶಗಳ ಪ್ರೇರಣೆಯಿಂದ ಈ ಸ್ವಾತಂತ್ರ್ಯವನ್ನು ಶಾಶ್ವತಗೊಳಿಸುವೆವೆಂದು ಪ್ರತಿಜ್ಞೆ ಮಾಡುವೆವು. ಇಂಡೋನೇಶಿಯುನ ಪ್ರಜಾರಾಜ್ಯದಲ್ಲಿ ಪ್ರಜೆಗಳದೇ ಪ್ರಭುತ್ವ. ನ್ಯಾಯ ನೀತಿ ಸತ್ಯ ಪ್ರೀತಿಗಳಿಗಾಗಿ, ಇಂಡೋನೇಶಿಯದ ಐಕ್ಯಕ್ಕಾಗಿ, ಪ್ರಜಾಸತ್ತೆಗಾಗಿ ಪ್ರಜಾರಾಜ್ಯ".

ಸ್ವತಂತ್ರವಾಗಿರಲು ಇಂಡೋನೇಶಿಯನ ಜನಾಂಗ ಈ ಪಣ ತೊಟ್ಟಿತು. ಡಚ್ ಆಳಿಕೆಯನ್ನೆಂದೂ ಸ್ವಾಗತಿಸೆವೆಂದವರ ದೃಢ ಪ್ರತಿಜ್ಞೆ.

## ಸುಲ್ತಾನರ ಬೆಂಬಲ

ದೇಶೀ ಸಂಸ್ಥಾನಗಳು ಸಾಮ್ರಾಜ್ಯವಾದಿಗಳ ಕೈಗೊಂಬೆಗಳು. ಜನರ ರಾಷ್ಟ್ರೀಯ ಆಶೆ ಆಕಾಂಕ್ಷೆಗಳಿಗೆ ಅವು ಅಡ್ಡಗಲ್ಲು. ಆದರೆ ಸುದೈವದಿಂದ ಇಂಡೋನೇಶಿಯದಲ್ಲಿ ಈ ಸಂಸ್ಥಾನಗಳು ರಾಷ್ಟ್ರೀಯ ನೆರೆಯೊಂದಿಗೆ ಕೂಡಿಕೊಂಡು ಹೋಗಿವೆ. ಜಾವಾದ ಮಧ್ಯದಲ್ಲಿರುವ ಜೊಗಜಾಕಾರ್ತ ಅಂತಹ ಒಂದು ಸಂಸ್ಥಾನ. ಜೊಗಜಾಕಾರ್ತದ ಸುಲ್ತಾನರು ಪ್ರಜಾರಾಜ್ಯದ ಅಧ್ಯಕ್ಷರಾದ ಡಾ. ಸುಕರ್ನೋರವರನ್ನು ರಾಜಮರ್ಯಾದೆಯಿಂದ ಬರಮಾಡಿಕೊಂಡರು. ಮೊದಲು ಡಚ್ ವಾಯಿಸರಾಯರಿಗೆ ದೊರೆಯುತ್ತಿದ್ದದಕ್ಕಿಂತ ಹೆಚ್ಚಿನ ಗೌರವ ಸುಕರ್ನೋರವರಿಗೆ. ಈ ಸುಲ್ತಾನರು ಇಂಡೋನೇಶಿಯನ ಸೇನೆಯಲ್ಲಿ ಅಧಿಕಾರಿಗಳಾಗಿಯೂ ಸೇರಿಕೊಂಡಿರುವರು. ಜೊಗಜಾಕಾರ್ತದ ೬೦

ಮೈಲು ದಕ್ಷಿಣದಲ್ಲಿದೆ ಸೊಯೊರಕಾರ್ತ ಸಂಸ್ಥಾನ. ಈ ಸುಲ್ತಾನರೂ ಪ್ರಜಾರಾಜ್ಯದ ಆಧಾರಸ್ತಂಭ. ದೇಶದಲ್ಲಿದ್ದುದೇ ಎರಡು ಸಂಸ್ಥಾನ ಗಳು. ಉಳಿದೆಲ್ಲ ಸಂಸ್ಥಾನಗಳ ತುಂಡರಸರನ್ನು ೧೯ ನೇಯ ಶತಮಾನದಲ್ಲೇ ಡಚ್ಚರು ಮಣ್ಣುಗೂಡಿಸಿದ್ದರು. ಅಳಿದುಳಿದ ಈ ಎರಡು ಸಂಸ್ಥಾನಗಳೂ ಕಾಲ್ತೊಡಕಾಗಿ ಪರಿಣಮಿಸಲಿಲ್ಲ.

ಈ ಸುಲ್ತಾನರು ಪ್ರಜಾರಾಜ್ಯಕ್ಕೆ ಬೆಂಬಲ ಕೊಟ್ಟಿರುವುದರಿಂದ ಶಿಕ್ಕಾಟವಾಗಲಿಲ್ಲವೆಂದರೆ ಅದು ತಪ್ಪು. ಪ್ರಜಾರಾಜ್ಯದೊಡನೆ ಪಾಳೆಯ ಗಾರ ಪದ್ಧತಿಯ ಮಧುರ ಬಾಂಧವ್ಯ ಅಶಕ್ಯ. ಈಗಿನ ಪ್ರಧಾನ ಮಂತ್ರಿ ಶಹರೀರರಿಗೆ ಈ ಸಂಸ್ಥಾನಗಳನ್ನು ಕಂಡರೆ ಸಿಟ್ಟು. ಶಹರೀರ ಸಾಮ್ಯವಾದಿ. ಸುಲ್ತಾನರ ಸಂಪರ್ಕ ಸಂಬಂಧ ಬೇಡ ಎಂದವರ ಹಟ. ಆದರೆ ಪ್ರಜಾರಾಜ್ಯವು ಜೀವನ್ಮರಣ ಹೋರಾಟದಲ್ಲಿ ತೊಡಗಿರುವು ದರಿಂದ ತಾತ್ಕಾಲಿಕ ಸಂಧಿ ಮಾಡಿಕೊಳ್ಳಲಾಗಿದೆ ಸುಲ್ತಾನರೊಡನೆ. ಆಂತರಿಕ ಐಕ್ಯದ ದೃಷ್ಟಿಯಿಂದ ಇದು ಅವಶ್ಯವಾಗಿದೆ. ಶಿಕ್ಕಾಟವಾದಾಗ ಲೆಲ್ಲ ಡಾ. ಸುಕರ್ನೋ ಬಂದು ಸಂತವಿಸುತ್ತಾರೆ. ಸುಕರ್ನೋ "ಇಂಡೋ ನೇಶಿಯದ ಗಾಂಧಿ." ಅವರ ಮಾತಿಗೆ ಎಲ್ಲರ ಸಮ್ಮತಿ. ಆದರೆ ಬಾಹ್ಯ ಗಂಡಾಂತರ ತಪ್ಪಿದ ಬಳಿಕ ಈ ಸಂಸ್ಥಾನಗಳು ಹೊಣೆಗಾರ ರಾಜ್ಯ ಪದ್ಧತಿಗಳನ್ನು ಸ್ವೀಕರಿಸದೇ ಇದ್ದರೆ ಮಹಾಕ್ರಾಂತಿಯ ನೆರೆಯಲ್ಲಿ ಮುಳುಗಿ ಹೋಗುವುದು ನಿಶ್ಚಯ.

## ಆಂತರಿಕ ಐಕ್ಯ

ಇಂಡೋನೇಶಿಯ ಹೆಚ್ಚುಕಡಿಮೆ ಎರಡು ಸಾವಿರ ದ್ವೀಪಗಳ ಸಮೂಹ. ಮಹಾಕ್ರಾಂತಿಯುಂಟಾದುದು ಮೊದಲು ಜಾವಾ ದ್ವೀಪದಲ್ಲಿ. ಅದರ ಗಾಳಿ ಉಳಿದ ದ್ವೀಪಗಳಿಗೂ ಬಲು ಬೇಗ ಬೀಸಿತು. ಪ್ರಜಾರಾ ಜ್ಯದ ಸಂದೇಶವನ್ನಾಲಿಸಿದ ಜನರೆಲ್ಲ ಅದಕ್ಕೆ ನಿಷ್ಠೆ ತೋರಿಸಿದರು. ಉಳಿ ದೆಲ್ಲ ದ್ವೀಪಗಳೂ ಪ್ರಜಾರಾಜ್ಯದ ಆಜ್ಞೆಯನ್ನು ಶಿರಸಾಪಾಲಿಸಿವೆ. ಆಂತ ರಿಕ ಐಕ್ಯದ ಕಟ್ಟು ಸಡಿಲಾಗಿಲ್ಲ. ಬಾಲಿ ದ್ವೀಪದಲ್ಲಿ ಇಂಡೋನೇಶಿಯ

ನ್ನರು ದಂಗೆಯೆದ್ದು ಜಪಾನಿ ಸೈನಿಕರನ್ನು ನಿಶ್ಶಸ್ತ್ರಗೊಳಿಸಿ ಸ್ವತಂತ್ರ ಆಡಳಿತೆಯನ್ನು ಸ್ಥಾಪಿಸಿದರು. ಆದರೆ, ಇಂಡೋನೇಶಿಯನ ಪ್ರಜಾರಾಜ್ಯದ ಅಧೀನವಿರಲು ಅದು ಸ್ವಯಂಪ್ರೇರಣೆಯಿಂದ ಸಮ್ಮತಿಕೊಟ್ಟಿದೆ. ಬೋರ್ನಿಯೋ ಮತ್ತು ಸೆಲಿಬೆಸ್ ದ್ವೀಪಗಳಲ್ಲಿ ಈಗ ಡಚ್ಚರು ಕರಾವಳಿ ನಗರ ಮತ್ತು ಬಂದರಗಳನ್ನು ವಶಪಡಿಸಿಕೊಂಡಿರುವುದಾದರೂ ಒಳನಾಡಿನ ಜನ ರಿಪಬ್ಲಿಕಿನ ಪ್ರಜೆಗಳು. ಸುಮಾತ್ರ ದ್ವೀಪದ ಒಲವೂ ಸ್ವತಂತ್ರ ಇಂಡೋನೇಶಿಯನ ಸರಕಾರದ ಕಡೆ. ಅಧ್ಯಕ್ಷ ಸುಕರ್ನೋರವರ ಪತ್ನಿ ಸುಮಾತ್ರದ ಪುತ್ರಿ. ಈಗಿನ ಪ್ರಧಾನ ಮಂತ್ರಿ ಡಾ. ಶಹರೀರ, ಉಪಾಧ್ಯಕ್ಷರಾದ ಮಹಮ್ಮದ್ ಹಾಟಾ ಇವರೂ ಸುಮಾತ್ರದವರೇ. ಹೀಗಾಗಿ ಸುಮಾತ್ರ ಕೈ ಬಿಡುವ ಹಾಗಿಲ್ಲ. ಅಂಬೋನೀಸರನ್ನು ಮಾತ್ರ ಡಚ್ಚರು ಪ್ರಜಾರಾಜ್ಯದ ವಿರುದ್ಧ ಎತ್ತಿಕಟ್ಟಿರುವರು. ಅವರ ಸಂಖ್ಯೆ ಅತ್ಯಲ್ಪ. ೩೦ ಸಾವಿರವೂ ಇಲ್ಲ ಈ ಜನ. ಅವರನ್ನು ಒಲಿಸಿಕೊಳ್ಳಲು ಸುಕರ್ನೋ ಶಾಂತಿ ದೂತರನ್ನು ಕಳಿಸಿರುವರು. ಪ್ರಜಾರಾಜ್ಯದ ಸಂದೇಶ ಮೂಲೆ ಮೂಲೆಗೂ ಕಸ್ತೂರಿಯಂತೆ ವ್ಯಾಪಿಸಿರುವುದರಿಂದ ಐಕ್ಯದಿಂದ ಹೋರಾಡಲು ಸಾಧ್ಯವಾಗಿದೆ.

## ಅಧಿಕಾರಿಗಳ ನಿಷ್ಠೆ

ಇಂಡೋನೇಶಿಯದ ಮಧ್ಯಮ ವರ್ಗದ ಜನ ಕೂಡಾ ಪ್ರಜಾರಾಜ್ಯದ ರಕ್ಷಣೆಗೆ ಧೈರ್ಯದಿಂದ ನಿಂತಿರುವುದು ದೊಡ್ಡ ಆಶ್ಚರ್ಯ. ಪರಾಧೀನ ರಾಜ್ಯಗಳಲ್ಲೆಲ್ಲ ಈ ಮಧ್ಯಮ ವರ್ಗದ ಜನರೇ ಪರಕೀಯರ ಊರುಗಂಬಗಳು. ಗುಮಾಸ್ತರು, ಪೋಲೀಸರು, ಸೈನಿಕರು, ಚಿಕ್ಕವೃತ್ತಿ ಸರಕಾರೀ ನೌಕರರು, ಅಧಿಕಾರಿಗಳು, ವ್ಯಾಪಾರಿಗಳು ಇವರೇ ಈ ಮಧ್ಯಮ ವರ್ಗ. ನೌಕರಿ ಎಂದರೆ ಇವರಿಗೆ ಪ್ರಾಣ. ಮೂರುಕಾಸಿಗಾಗಿ ಅವರ ಜೀವ, ಜೀವನ ಮೀಸಲು. ತಮ್ಮ ಸ್ವದೇಶಬಾಂಧವರ ಜೀವ ತೆಗೆಯಲು ಹಿಂದು ಮುಂದು ನೋಡರು. ತಮ್ಮ ಹೊಟ್ಟೆ ಪಾಡಿಗಾಗಿ ಎಂತಹ ಹೀನ ಹೊಲೆಗೆಲಸಕ್ಕೂ ಸಿದ್ಧ. ಇಂಡೋನೇಶಿಯದಲ್ಲಿ ಮಾತ್ರ ಆರೀತಿ ನಡೆಯಲಿಲ್ಲ. ಡಚ್ಚರು ಅಮಿತ ಬಲದೊಂದಿಗೆ ದಂಡೆತ್ತಿ ಬಂದಮೇಲೂ ದೇಶಕ್ಕೆ

ದ್ರೋಹ ಬಗೆದವರು, ಪ್ರಜಾರಾಜ್ಯವನ್ನು ಬೆನ್ನ ಹಿಂದೆ ತಿವಿಯಲು ಯತ್ನಿಸಿದವರು ವಿರಳ. ಡಚ್ಚರ ಅಧೀನ ಸೇನೆಯಲ್ಲಿ ಸರ್ಜನರಾಗಿದ್ದವರು ಈ ದಿನ ಪ್ರಜಾರಾಜ್ಯದ ಮಂತ್ರಿ. ಡಚ್ಚರ ಅಧೀನ ಸೇನಾಧಿಕಾರಿಗಳಾಗಿದ್ದವರು ಈ ದಿನ ಇಂಡೋನೇಶಿಯನ ಸೇನಾಧಿಕಾರಿಗಳು. ಸ್ವಾಮಿದ್ರೋಹವಿಲ್ಲ. ಜನಿಸಿದ ತಾಯಿಯ ಕೊರಳು ಕೊಯ್ಯುವ ಯತ್ನವಿಲ್ಲ. ಸ್ವಾತಂತ್ರ್ಯದ ಗಾಳಿ, ಬಿರುಗಾಳಿ, ಅವರ ಮನೋವೃತ್ತಿಯನ್ನೇ ಬದಲಾಯಿಸಿಬಿಟ್ಟಿದೆ.

## ರಾಷ್ಟ್ರೀಯ ಸೇನೆ

ಇಂಡೋನೇಶಿಯನ ಪ್ರಜಾರಾಜ್ಯ ರಾಷ್ಟ್ರೀಯ ಸೇನೆಯನ್ನು ಸಂಘಟಿಸಿದೆ. ಸುದಿರಾಮನ ಅದರ ಮುಖ್ಯಾಧಿಕಾರಿ. ಮಹಾಕ್ರಾಂತಿಯ ಮೊದಲು ಅವರು ಶಾಲಾ ಮಾಸ್ತರರು. ಈ ರಾಷ್ಟ್ರೀಯ ಸೇನೆಗೆ ಶಾಂತಿಪಾಲಕ ದಳವೆಂದು ಹೆಸರು. ಅದರ ಸಂಖ್ಯೆ ಅರ್ಧ ಲಕ್ಷ. ಜಪಾನರು ತಮ್ಮ ಆಕ್ರಮಣ ಕಾಲದಲ್ಲಿ ಐದು ಲಕ್ಷ ಇಂಡೋನೇಶಿಯನ್ನರಿಗೆ ಸೈನ್ಯ ಶಿಕ್ಷಣ ಕೊಟ್ಟಿದ್ದರು. ಅವರನ್ನು ಪ್ರಜಾರಾಜ್ಯದ ಸೇನೆಯಲ್ಲಿ ಸೇರಿಸಿಕೊಂಡಂತೆ ತೋರುತ್ತದೆ. ಆದರೆ ಶಸ್ತ್ರಾಸ್ತ್ರಗಳ ಕೊರತೆ ವಿಶೇಷವಾಗಿದೆ. ಈಟಿ, ಕತ್ತಿ ಇವುಗಳೇ ಅವರ ಉಪಕರಣಗಳು. ಮಹಾಕ್ರಾಂತಿಯ ಸಮಯ ಅಲ್ಲಲ್ಲಿ ಜಪಾನಿ ಶಿಬಿರಗಳಿಗೆ ಮುತ್ತಿಗೆ ಹಾಕಿ ಜಪಾನಿ ಸೈನಿಕರನ್ನು ನಿಶ್ಶಸ್ತ್ರಗೊಳಿಸಿ ಅವರ ಯುದ್ಧೋಪಕರಣಗಳನ್ನು ವಶಪಡಿಸಿಕೊಂಡುದುದೂ ಇದೆ. ಕೆಲವು ಟ್ಯಾಂಕುಗಳೂ ವಿಮಾನಗಳೂ ಅವರಿಗೆ ದೊರೆತಿವೆ. ಕೊನೆಗಾಲದಲ್ಲಿ ಕೆಲವು ಜಪಾನಿ ಅಧಿಕಾರಿಗಳು ಅಪಾರ ಮೆಶಿನಗನ್, ಬಂದೂಕು ಮತ್ತು ಮದ್ದುಗುಂಡುಗಳನ್ನು ಪೂರೈಸಿದ್ದರೆಂದು ಡಚ್ ಮತ್ತು ಬ್ರಿಟಿಶರ ಆರೋಪ. ಇರಲೂಬಹುದು. ನಾರ್ವೆ, ಫ್ರಾನ್ಸಗಳ ದೇಶಪ್ರೇಮಿಗಳಿಗೆ ಬ್ರಿಟಿಶರೇ ಶಸ್ತ್ರಾಸ್ತ್ರಗಳನ್ನು ಕೊಟ್ಟಿದ್ದರಲ್ಲವೇ ?

## ಜಪಾನಿ ಕೈಗೊಂಬೆಗಳಲ್ಲ

ಡಾ. ಸುಕರ್ನೋ, ಹಾಟಾ ಮುಂತಾದ ಮುಖಂಡರು ಜಪಾನಿ ಕೈಗೊಂಬೆಗಳು; ಪ್ರಜಾರಾಜ್ಯವನ್ನು ಸ್ಥಾಪಿಸಿದವರು ಜಪಾನರೇ;

ಶಸ್ತ್ರಾಸ್ತ್ರಗಳನ್ನು ಅವರೇ ಪೂರೈಸಿದ್ದಾರೆಂದು ಡಚ್ ಮತ್ತು ಬ್ರಿಟಿಶರು ಆಕ್ಷೇಪಿಸಿರುವರು. ಫ್ಯಾಸಿಸ್ಟರೆಂದು ಬೆವಿನ್ನರು ರಾಷ್ಟ್ರಸಂಘದಲ್ಲಿ ಜರೆದರು. ಸಚ್ಚರಿತ ದೇಶದ ರಾಜಕಾರಣಿಯೊಬ್ಬರು ಈ ಮಾತುಗಳನ್ನಾಡುತ್ತಿದ್ದರೆ ಅದಕ್ಕೆ ಬೆಲೆಯಿರುತ್ತಿತ್ತು. ಆದರೆ ಬೆವಿನ್ನರು ಸಾಮ್ರಾಜ್ಯವಾದಿ ರಾಷ್ಟ್ರದ ನೌಕರ. ಆದುದರಿಂದ ಅವರ ಮಾತಿಗೆ ಮರುಳಾಗಿ ನಂಬುವ ಮಂಗಗಳಿಲ್ಲ ಜಗತ್ತಿನಲ್ಲಿ. ಫ್ಯಾಸಿಸ್ಟರೆಂದು ಜರೆದು ಪ್ರಜಾರಾಜ್ಯದ ಮೇಲೆ ಕೆಸರೆರಚಿ ಅದನ್ನು ಜಗ್ಗಬಹುದೆಂದು ಡಚ್ ಮತ್ತು ಬ್ರಿಟಿಶ್ ಸಾಮ್ರಾಜ್ಯವಾದಿಗಳ ಆಶೆ. ತಂತ್ರ. ಸುಕರ್ನೊ, ಹಾಟಾ ಮುಂತಾದ ಮುಖಂಡರ ವ್ಯಕ್ತಿತ್ವ ಹಾಗೂ ಏಶಿಯದ ರಾಷ್ಟ್ರಗಳ ರಾಷ್ಟ್ರೀಯ ಚಳವಳಿಯ ಸ್ವರೂಪವನ್ನರಿತವರಿಗೆ ಸಾಮ್ರಾಜ್ಯವಾದಿಗಳ ಆರೋಪಕ್ಕೆ ಬೆನ್ನೆಲುಬು ಇಲ್ಲವೆಂದು ಹೊಳೆಯದೇ ಇರಲಾರದು. ಇಂಡೋನೇಶಿಯದ ಪರಿಸ್ಥಿತಿಯ ವಿಚಾರಣೆ ನಡೆಸಿದ ಅಮೇರಿಕದ ಫ್ಯಾಸಿಫಿಕ ರಾಜಕೀಯ ಸಂಸ್ಥೆಯ ವರದಿಯೇ ಅದಕ್ಕೆ ಯೋಗ್ಯ ಉತ್ತರ. “೧೯೪೦ ರಲ್ಲೇ ಇಂಡೋನೇಶಿಯನ್ನರು ಮಿತ್ರರಿಗೆ ಬೆಂಬಲ ಕೊಟ್ಟಿದ್ದರು. ರಾಷ್ಟ್ರಸಂಘದ ಮೂಲಕ ಅಂತರರಾಷ್ಟ್ರೀಯ ಸ್ನೇಹ ಸೌಹಾರ್ದ ಸಹಕಾರ ತತ್ವಗಳನ್ನು ಪ್ರತಿಪಾದಿಸುತ್ತಿದ್ದರು. ಎಲ್ಲ ಜನಾಂಗಗಳ ಸ್ವಾತಂತ್ರ್ಯ, ವಿಮೋಚನೆಗಳಿಗಾಗಿ ಹೋರಾಡಿದ ವ್ಯಕ್ತಿಗಳೂ ರಾಷ್ಟ್ರಗಳೂ ಈ ಲೋಕದಲ್ಲಿವೆ. ಅಲ್ಲದೆ ಯುದ್ಧಪೂರ್ವ ಸ್ಥಿತಿಯನ್ನು ಕಾಯ್ದುಕೊಳ್ಳುವದಕ್ಕಾಗಿ ವಿಜಯಶ್ರೀಯನ್ನು ಒಲಿಸಲೂ ಕೆಲವು ರಾಷ್ಟ್ರಗಳು ಹೆಣಗಿವೆ. ಇಂಡೋನೇಶಿಯನ್ನರು ಜಗತ್ತಿನ ವಿಮೋಚನೆಗಾಗಿ ಸ್ವಾತಂತ್ರ್ಯಕ್ಕಾಗಿ ಹೆಣಗಿರುವರು. ವಸಾಹತನ್ನು ರಕ್ಷಿಸಿಕೊಳ್ಳಲು ಡಚ್ಚರ ಹೆಬ್ಬಯಕೆ” ಎಂದು ಅದರಲ್ಲಿ ಹೇಳಲಾಗಿದೆ. ಸಾಮ್ರಾಜ್ಯವಾದಿಗಳಿಗೆ ಈ ಉತ್ತರ ಸಾಲದೇ ?

---

## ಮಿತ್ರರ ದಂಡಯಾತ್ರೆ

---

ಇಂಡೋನೇಶಿಯದ ಪ್ರಜಾರಾಜ್ಯದ ಅದೃಷ್ಟ ಕೆಟ್ಟಿದು. ಶೈಶವಸ್ಥೆಯಲ್ಲೇ ಬಂತು ಬಾಲಗ್ರಹಪೀಡೆ. ಜಪಾನಿ ಸೈನಿಕರನ್ನು ನಿಶ್ಯಸ್ತ್ರ

ಗೊಳಿಸುವ ಮತ್ತು ಡಚ್ ಹಾಗೂ ಇನ್ನಿತರ ಯುದ್ಧಕೈದಿಗಳನ್ನು ವಿಮೋಚಿಸುವ ನೆವದಿಂದ ಮಿತ್ರರು ದಂಡೆತ್ತಿ ಬಂದರು. ಮಿತ್ರರ ಸೇನಾಪತಿ ಜನರಲ್ ಕ್ರಿಸ್ಟಿಸನ್ ಬ್ರಿಟಿಶ, ಡಚ್ ಮತ್ತು ಹಿಂದೀ ಸೈನಿಕರೊಂದಿಗೆ ಸಪ್ಟಂಬರ ೨೯ ನೇ ತಾರೀಖಿನ ದಿನ (೧೯೪೫) ಜಾವಾದಲ್ಲಿ ಇಳಿದ.

## ಮಿತ್ರರ ಕಾರಣಗಳು

ದಂಡೆತ್ತಿ ಹೋಗಲು ಮಿತ್ರರು ಕೊಟ್ಟ ಕಾರಣಗಳೆಲ್ಲ ಸುಳ್ಳು. ಬಹುಸಂಖ್ಯಾಕ ಜಪಾನಿ ಸೈನಿಕರನ್ನು ಇಂಡೋನೇಶಿಯನ್ನರೇ ನಿಶ್ಶಸ್ತ್ರ ಗೊಳಿಸಿದ್ದರು. ಉಳಿದವರ ನಿಶ್ಶಸ್ತ್ರೀಕರಣಕ್ಕೆ ಸಮಯಾವಕಾಶ ಕೊಡ ಬಹುದಿತ್ತಲ್ಲ! ಅದಕ್ಕೆ ಪ್ರಜಾರಾಜ್ಯ ಒಪ್ಪದಿದ್ದರೆ, ತಪ್ಪಿದ್ದರೆ ಮುಂದೆ ಬಲಪ್ರಯೋಗ ನ್ಯಾಯ. ಇನ್ನು ಡಚ್ ಹಾಗೂ ಇನ್ನಿತರ ಮಿತ್ರ ಯುದ್ಧಕೈದಿಗಳ ವಿಮೋಚನೆ ಪ್ರಶ್ನೆ. ಇಂಡೋನೇಶಿಯನ್ನರು ಈ ಯುದ್ಧಕೈದಿಗಳ ಮೇಲೆ ಹಿಂಸಾಚಾರ ನಡೆಸಿರಲಿಲ್ಲ. ಅವರನ್ನು ಪಡೆಯಲು ಪ್ರಜಾರಾಜ್ಯದೊಡನೆ ಮಿತ್ರ ಅಧಿಕಾರಿಗಳು ಸ್ನೇಹಸೌಹಾರ್ದದಿಂದ ಮಾತುಕತೆ ನಡೆಸುವುದುಚಿತವಿತ್ತು. ನಾಗರಿಕ ಸರಕಾರಗಳ ಧೋರಣ ಹಾಗೆ. ಬ್ರಿಟಿಶರು ಅದರಂತೆ ವರ್ತಿಸಲಿಲ್ಲ. ಕೇವಲ ಆ ಎರಡು ಉದ್ದೇಶಗಳನ್ನು ಸಾಧಿಸಲು ಇಂಡೋನೇಶಿಯನ ಸರಕಾರವು ಮಿತ್ರರೊಡನೆ ಸಹಕರಿಸಲು ಸದಾಸಿದ್ಧ ಎಂದು ಅಧ್ಯಕ್ಷ ಸುಕರ್ನೋ ನುಡಿದಿದ್ದರು. ಡಚ್ ಸೇನೆ ಕಾಲಿಟ್ಟರೆ ಮಾತ್ರ ಕೋಲಾಹಲ ತಪ್ಪಿದ್ದಲ್ಲವೆಂದೂ ಅವರು ಎಚ್ಚರಿಕೆ ಕೊಟ್ಟಿದ್ದರು. ಹೀಗಿದ್ದರೂ ಬ್ರಿಟಿಶರು ಪ್ರವೇಶಿಸಿದಾಗ ಡಚ್ಚರನ್ನು ಬೆನ್ನಿನಲ್ಲಿ ಕಟ್ಟಿಕೊಂಡು ಬಂದರು. ಅದು ಅವರ ಸಾಮ್ರಾಜ್ಯವಾದಿ ಆಶೆಆಕಾಂಕ್ಷೆಯನ್ನು ಬಯಲಿಗೆಳೆಯಿತು. ಡಚ್ಚರ ಒಡೆತನವನ್ನು ಸ್ಥಿರಪಡಿಸುವ ಯತ್ನವಿದೆಂದು ಇಂಡೋನೇಶಿಯನ್ನರು ಸಂದೇಹಪಟ್ಟರು.

## ಡಚ್ಚರ ಪೂರ್ವಸಿದ್ಧತೆ

ನಾಝಿ ಜರ್ಮನಿ ಸೋಲಿಸಲ್ಪಟ್ಟಂದಿನಿಂದಲೂ ಪೌರ್ವಾತ್ಯ ಪ್ರದೇಶದಲ್ಲಿದ್ದ ತಂತಮ್ಮ ವಸಾಹತುಗಳನ್ನು ವಶಪಡಿಸಿಕೊಳ್ಳಲು

ಪಾಶ್ಚಾತ್ಯ ಸಾಮ್ರಾಜ್ಯವಾದಿಗಳು ಅಪೂರ್ವ ಸಿದ್ಧತೆ ನಡೆಸುತ್ತಿದ್ದರು. ಬ್ರಿಟಿಶ, ಫ್ರೆಂಚರಂತೆ ಡಚ್ಚರೂ ಆ ಕಾರ್ಯದಲ್ಲಿ ತಲ್ಲೀನ. ಕತ ಮತ್ತು ಒತ್ತಿ ಕಾಯದೆಯನ್ವಯ ಅಮೇರಿಕದಿಂದ ಡಚ್ಚರು ಕೋಟಿಗಟ್ಟಲೆ ಡಾಲರುಗಳ ಶಸ್ತ್ರಾಸ್ತ್ರಗಳನ್ನು ಕೊಂಡುಕೊಂಡಿದ್ದರು. ಸೈನಿಕರನ್ನು ತರಬೇತಿಗೊಳಿಸಿ ಆಸ್ಟ್ರೇಲಿಯಾ ಸಿಂಗಾಪುರಗಳಿಗೆ ಕಳಿಸಿದರು. ಜಪಾನರು ಶರಣುಹೋಗುವ ಮೊದಲೇ ಇಂಡೋನೇಶಿಯದ ಮೇಲೆ ದಾಳಿಮಾಡಲು ಅವರ ಅಭಿಲಾಷೆ. ಅದು ಕೈಗೂಡಿರಲಿಲ್ಲ ಅಷ್ಟೆ. ಮಲಯಾದಲ್ಲಿ ೧೦ ಸಾವಿರ ಡಚ್ ಸೈನಿಕರಿಗೆ ಬ್ರಿಟಿಶರು ತರಬೇತಿಗೊಡುತ್ತಿದ್ದರು. ಇದು ಅವರ ಉದ್ದೇಶದ ನಗ್ನಸ್ವರೂಪವಲ್ಲದೆ ಮತ್ತೇನು?

## ತಿಕ್ಕಾಟ

ಮಿತ್ರರು ಮತ್ತು ಇಂಡೋನೇಶಿಯನ್ನರೊಳಗೆ ಮೊದಲು ತಿಕ್ಕಾಟ ವಾದುದು ಸೌರಬಾಯ ನಗರದಲ್ಲಿ. ಬ್ರಿಟಿಶ ಯುದ್ಧಹಡಗಗಳು ಬಂದರವನ್ನು ಪ್ರವೇಶಿಸಿದುವು. ಬಂದರ, ನೌಕಾಠಾಣೆ, ವಿಮಾನ ಗೃಹ ಎಲ್ಲ ಅವರ ವಶ. ಆ ಮೇಲೆ ವಿಮಾನಗಳು ಹಾರಿ ಮಿತ್ರರ ಮಿಲಿಟರಿ ಸರಕಾರ ಸ್ಥಾಪಿಸಲ್ಪಟ್ಟಿದೆಯೆಂದು ಕರಪತ್ರಗಳನ್ನು ಚೆಲ್ಲಿದುವು. ಇಂಡೋನೇಶಿಯನ್ನರು ಅದರಿಂದ ಉರಿದೆದ್ದರೂ ಮಾತ ನಾಡಲಿಲ್ಲ. ಡಚ್ ನಾಗರಿಕ ಆಡಳಿತೆಯು ಸ್ಥಾಪಿಸಲ್ಪಟ್ಟ ಕೊಡಲೇ ಅವರು ಕೆರಳಿದರು. ಮಿತ್ರ ಸೈನಿಕರು ಹೊರತು ಉಳಿದವರು ಯಾರೂ ಶಸ್ತ್ರಾಸ್ತ್ರಧರಿಸಕೂಡದೆಂದು ಕಟ್ಟಾಜ್ಞೆ ಹೊರಡಿಸಿ ಮಿತ್ರರು ಮತ್ತೊಂದು ತಪ್ಪು ಮಾಡಿದರು. ಈ ಕಥೆ ಅಲ್ಲೇ ಮುಗಿಯಲಿಲ್ಲ. ಸೌರಬಾಯಾ ನಗರದಲ್ಲಿ ಇಂಡೋನೇಶಿಯನ್ನರ ನಿಶ್ಶಸ್ತ್ರೀಕರಣಕ್ಕೆ ಆರಂಭವಾಯಿತು. ಸಹನೆಯ ಸೀಮೆಗಲ್ಲು ದಾಟಿದಂತಾಯಿತು ಇದರಿಂದ. ಇಂಡೋನೇಶಿಯನ್ನರು ಶಸ್ತ್ರಾಸ್ತ್ರಗಳನ್ನೊಪ್ಪಿಸಲು ನಿರಾಕರಿಸಿ ಪ್ರತಿಭಟಿಸಿದರು. ಇತ್ತಂಡದವರೊಳಗೆ ಬಡಿದಾಟವಾಯಿತು. ನಗರವನ್ನು ಆಕ್ರಮಿಸಲು ಮಿತ್ರರು ಯತ್ನಿಸಿದರು. ಅದು ಕಠಿಣವಾಗಿ ಪರಿಣಮಿಸಿತು.

## ರಾಷ್ಟ್ರೀಯ ಮಹಾಸಭೆ

ಮಿತ್ರರ ದಂಡಯಾತ್ರೆ, ಸೌರಬಾಯದ ಕದನಗಳಿಂದ ದೇಶ ಅಲ್ಲೋಲಕಲ್ಲೋಲವಾಯಿತು. ಪ್ರಜಾರಾಜ್ಯಕ್ಕೆ ಬಂತು ಗಂಡಾಂತರ! ಅದನ್ನು ರಕ್ಷಿಸಲು ಎಲ್ಲರೂ ಸಿದ್ಧರಾದರು. ಅದನ್ನು ಬಲಗೊಳಿಸುವ ಯತ್ನಗಳು ನಡೆದುವು. ಅಕ್ಟೋಬರ ತಿಂಗಳ ಮಧ್ಯದಲ್ಲಿ ಬಟಾವಿಯಾ ನಗರದಲ್ಲಿ ರಾಷ್ಟ್ರೀಯ ಮಹಾಸಭೆ ಕೂಡಿತು. ಕೇಂದ್ರ ರಾಷ್ಟ್ರೀಯ ಸಮಿತಿಯೊಂದನ್ನು ಸಭೆಯಲ್ಲಿ ಆರಿಸಲಾಯಿತು. ಡಾ. ಶಹರೀರರು ಅದರ ಅಧ್ಯಕ್ಷರು. ಹೊಸ ಚುನಾವಣೆ ನಡೆದು ಪ್ರಜಾಪ್ರತಿನಿಧಿ ಸಭೆ (ಪಾರ್ಲಿಮೆಂಟ) ಯನ್ನು ಸ್ಥಾಪಿಸುವವರೆಗೆ ಈ ಸಮಿತಿಗೇ ಶಾಸನಾಧಿಕಾರ ಕೊಡಲ್ಪಟ್ಟಿತು. ದಿನನಿತ್ಯದ ವ್ಯವಹಾರದಲ್ಲಿ ಮಾರ್ಗದರ್ಶನ ಮಾಡಲು ವರ್ಕಿಂಗ್ ಕಮಿಟಿಯೊಂದನ್ನು ನೇಮಿಸಿದರು. ಈ ವರ್ಕಿಂಗ ಕಮಿಟಿ ಕೇಂದ್ರ ರಾಷ್ಟ್ರೀಯ ಸಮಿತಿಗೆ ಹೊಣೆ. ಪ್ರಜಾರಾಜ್ಯಕ್ಕೆ ಅಂತರರಾಷ್ಟ್ರೀಯ ಮನ್ನಣೆ, ಶಾಂತಿ ಪರಿಷತ್ತಿನಲ್ಲಿ ಸ್ಥಾನ ದೊರಕಿಸಲು ಸರಕಾರಕ್ಕೆ ಆಜ್ಞಾಪಿಸಲಾಯಿತು. ಜಪಾನರ ನಿಶ್ಯಸ್ತ್ರೀಕರಣಕ್ಕಾಗಿ ಬ್ರಿಟಿಶರೊಡನೆ ಸಹಕರಿಸಲಡ್ಡಿಯಿಲ್ಲವೆಂದೂ ನಿರ್ಣಯಿಸಲಾಯಿತು. ಆದರೆ ಆ ಕೆಲಸ ಮುಗಿದ ಕೂಡಲೇ ವಿದೇಶಿ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಅಧ್ಯಕ್ಷ ಸುಕರ್ನೋ ಸ್ಪಷ್ಟಪಡಿಸಿದರು. ಆದಕ್ಕೆ ರಾ. ಮಹಾಸಭೆಯ ಸಮ್ಮತಿ.

## ಕ್ರಿಸ್ಟಿಸನ್‌ರಿಗೆ ಸೂಚನೆ

ರಾಷ್ಟ್ರೀಯ ಮಹಾಸಭೆಯ ನಿರ್ಣಯದಂತೆ (೧) ಇಂಡೋನೇಶಿಯದಲ್ಲಿರುವ ಡಚ್ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು. (೨) ಡಚ್ ನಾಗರಿಕ ಆಡಳಿತ ವ್ಯವಸ್ಥೆಯನ್ನು ರದ್ದುಗೊಳಿಸಬೇಕು. ಮತ್ತು (೩) ಇಂಡೋನೇಶಿಯನ್ ಪ್ರಶ್ನೆಯನ್ನು ರಾಷ್ಟ್ರಸಂಘವು ಅಥವಾ ಪಂಚಮಹಾ ರಾಷ್ಟ್ರಗಳು ಬಗೆಹರಿಸುವ ವರೆಗೆ ಪ್ರಜಾರಾಜ್ಯವೊಂದೇ ನ್ಯಾಯಬದ್ಧ ಸರಕಾರವೆಂದು ಮನ್ನಿಸುವುದವಶ್ಯವೆಂದು ಜನರಲ್ ಕ್ರಿಸ್ಟಿಸನ್

ರಿಗೆ ಇಂಡೋನೇಶಿಯನ್ ಸರಕಾರ ಸೂಚಿಸಿತು. ಪ್ರಜಾರಾಜ್ಯವು ಬಲ ವಿವೆ; ಚೆನ್ನಾಗಿ ಸಂಘಟಿಸಲ್ಪಟ್ಟಿದೆಯೆಂದು ಕ್ರಿಸ್ಟಿಸನ್‌ರಿಗೆ ಗೊತ್ತಾ. ಕೆಣಕಿದರೆ ಬೇಳೆ ಬೇಯುವುದಿಲ್ಲವೆಂಬೂ ಅವರ ತಿಳುವಳಿಕೆಗೆ ಬಂತು. ಆದುದರಿಂದ ಡಚ್ ಮತ್ತು ಇಂಡೋನೇಶಿಯನ್ನರಲ್ಲಿ ಸಂಧಾನ ಮಾಡಲೆ ತ್ನಿಸಿದರು. ನವಂಬರದಲ್ಲಿ ಜನರಲ್ ಕ್ರಿಸ್ಟಿಸನ್ನರ ಸನ್ನಿಧಿಕೇಂದ್ರಕ್ಕೆ ಡಾ. ಸುಕರ್ನೋ ಕರೆಸಲ್ಪಟ್ಟರು ಡಚ್ ವಾಯಿಸರಾದ ಡಾ. ಮೂಕ ರಿಗೂ ಆಮಂತ್ರಣ ಕೊಡಲ್ಪಟ್ಟಿತು. ಅಲ್ಲಿ ಚರ್ಚೆ ನಡೆಯುವ ಕಾಲಕ್ಕೆ ೧೯೪೨ರ ವಿಲಹೆಲ್ಮಿನಾ ರಾಣಿ ಘೋಷಣೆಯನ್ನು ಆಚರಣೆಯಲ್ಲಿ ತರು ವುದಾಗಿ ಮೂಕರು ಮಾತನಾಡಿದರು. ಇಂಡೋನೇಶಿಯಕ್ಕೆ ಕೊನೆಗೆ ಸ್ವರಾಜ್ಯ ಕೊಡುವ ಇಚ್ಛೆಯನ್ನು ಆ ಘೋಷಣೆಯಲ್ಲಿ ವಿಶದಪಡಿಸಲಾ ಗಿದೆ. ಇಂಡೋನೇಶಿಯನ್ನರಿಗೆ ಆ ಮಾತು ಬೇಡ. ಸ್ವಾತಂತ್ರ್ಯವೇ ಅವರ ಬೇಡಿಕೆ. ಇಂಡೋನೇಶಿಯನ್ ಜನಾಂಗಕ್ಕೆ ಹೊಣೆಯಾಗಿರುವ ಸರಕಾರ ಅವರಿಗೆ ಬೇಕು. ಡಚ್ ವಾಯಿಸರಾಯರಿಗೆ ಅಥವಾ ರಾಣಿಗೆ ಹೊಣೆಯಾಗಿರುವ ಸರಕಾರವಲ್ಲ. ಇಂಡೋನೇಶಿಯನ್ನರ ಧೋರಣ ಹೀಗಿದ್ದರೆ ಡಚ್ ಸರಕಾರದ ಧೋರಣ ಇನ್ನೊಂದು ವಿಧ. ಸಂಧಾನದ ಯತ್ನವನ್ನೇ ಹಾಲಂಡ್ ಖಂಡಿಸಿತು. ಮೂಕರ ಮಾತಿಗೆ ಹಾಲಂಡ್ ಸರಕಾರ ಬದ್ಧವಾಗಲಾರದೆಂದು ಅದರ ಸೂಚನೆ. ಸರಿ, ಮಾತುಕತೆ ವಿಫಲವಾಗಿ ಕೈಗೆ ಕೈ ಹತ್ತಿತು.

## ಸೌರಬಾಯ

ದೇಶದಲ್ಲಿ ಉದ್ವೇಗಜನಕ ಪರಿಸ್ಥಿತಿ. ಸೌರಬಾಯ ನಗರದಲ್ಲಿ ಅದು ಪರಾಕಾಷ್ಠೆಗೆ ಮುಟ್ಟಿತು. ಬ್ರಿಟಿಶರ ಪುಟ್ಟ ಸೇನಾಧಿಕಾರಿ ಬ್ರಿಗೇಡಿ ಯರ ಮಲ್ಲಬಿ ಗುಂಡಿಗಾಹುತಿಯಾದ. ಇಂಡೋನೇಶಿಯನ್ನರು ಮೋಸ ದಿಂದ ಅವನ "ಕೊಲೆ" ಮಾಡಿದರೆಂದು ಜಗತ್ತಿನಲ್ಲೆಲ್ಲ ಬ್ರಿಟಿಶರೂ ಡಚ್ಚರೂ ಡಂಗುರ ಹೊಡೆದರು. ಇಂಡೋನೇಶಿಯನ್ನರ "ಅತ್ಯಾಚಾರ"ದ ರಾಮಾಯಣವನ್ನೇ ಪಠಿಸತೊಡಗಿದರು. ಮಲ್ಲಬಿ ನಿಜವಾಗಿಯೂ ಮಡಿದುದು ಯುದ್ಧದಲ್ಲಿ. ಇಂಡೋನೇಶಿಯನ್ನರನ್ನು ಚದರಿಸಲು ಯತ್ನಿ

ಸಿದಾಗ ಸೌರಬಾಯಾ ನಗರದಲ್ಲಿ ಇತ್ತಂತಪವರೊಳಗೆ ಕದನವಾಯಿತು. ಆಗ ಮಲ್ಲಬಿ ಸಾವಿಗೆ ತುತ್ತಾದ. ಮಲ್ಲಬಿಯ ಹಿಂದಿದ್ದ ಹಿಂದೀ ಸೇನೆ ಗುಂಡು ಹಾರಿಸಿದಾಗ ತಪ್ಪಿ ಆ ಗುಂಡು ಮಲ್ಲಬಿಗೆ ಬಡಿದು ಅವನು ಒರಗಿದನೆಂದೆನ್ನುವವರೂ ಉಂಟು. ಅಂತೂ ಇಂಡೋನೇಶಿಯನ್ನರು ಅತ್ಯಾಚಾರ ಅಥವಾ "ಕೊಲೆ" ಮಾಡಿದುದು ಮಿಥ್ಯಾರೋಪ. ಅದೇನಿದ್ದರೂ ಮಿತ್ರರು ರೌದ್ರಾವತಾರ ತಾಳಿದರು. ಒಬ್ಬ ಮಲ್ಲಬಿಯ ಮರಣಕ್ಕಾಗಿ ಜನಾಂಗಕ್ಕೇ ಶಿಕ್ಷೆ. ಜೆನರಲ್ ಕ್ರಿಸ್ಟಿಸನ್ನರು ಸೌರಬಾಯಾ ನಗರದ ಮೇಲೆ ನೆಲ, ಜಲ, ಆಕಾಶ ದಾಳಿಯನ್ನು ಮಾಡಿದರು. ಸುಂದರ ನಗರ ಅಗ್ನಿಗಾಹುತಿ. ಸರಕಾರೀ ಕಟ್ಟಡಗಳು, ಕೋರ್ಟು, ಕಚೇರಿ, ಶಾಲೆ, ಕಾಲೇಜು, ಮನೆ, ಮಠ, ಮಸೀದೆಗಳೆಲ್ಲ ಜರಿದುಬಿದ್ದುವು. ಇಂಡೋನೇಶಿಯನ್ನರು ಧೃತಿಗೆಡಲಿಲ್ಲ. ಎಲ್ಲ ಕಷ್ಟಗಳನ್ನು ಸಹಿಸಿಕೊಂಡರು. ಬಗ್ಗಲಿಲ್ಲ ಮಿತ್ರರಿಗೆ ಮತ್ತು ಮಿತ್ರರ ಅಮಿತ ಬಲಕ್ಕೆ.

## ಶಹರೀರ ಮಂತ್ರಿಮಂಡಲ

ಅಧ್ಯಕ್ಷ ಸುಕರ್ನೋ ದೊಡ್ಡ ಮುತ್ಸದ್ದಿ. ಅವರದು ಸೂಕ್ಷ್ಮ ಬುದ್ಧಿ. ಇಂಡೋನೇಶಿಯದಲ್ಲಿ ದೀರ್ಘ ಯುದ್ಧ ನಿಶ್ಚಯವೆಂದು ಅವರಿಗೆ ಖಚಿತವೆನಿಸಿತು. ಸರಕಾರವನ್ನು ಬಲಗೊಳಿಸದೆ ಗತ್ಯಂತರವಿಲ್ಲ. ಇಲ್ಲದೇ ಇದ್ದರೆ ಮಿತ್ರರ ಏಟಿಗೆ ಅದು ಜರಿದು ಬೀಳುವ ಸಂಭವ. ಅಲ್ಲದೆ ಸಂಧಾನದ ಬಾಗಿಲನ್ನು ತೆರೆದಿಡಲು ಅವರು ಇಷ್ಟಪಟ್ಟರು. ಅಂದಿನ ಮಂತ್ರಿಮಂಡಳದಲ್ಲಿ ಜಪಾನಿಪರ ಮಂತ್ರಿಗಳು ಕೆಲವರಿದ್ದುದರಿಂದ ಜರೆಯಲು ಡಚ್ ಮತ್ತು ಬ್ರಿಟಿಶರಿಗೆ ಅವಕಾಶವಿತ್ತು. ಜಪಾನಿ ಗೊಂಬೆಗಳು, ಫ್ಯಾಸಿಸ್ಟರೆಂದು ಅವರು ಮೂದಲಿಸಿದುದು, ದೇಶ ವಿದೇಶಗಳಲ್ಲಿ ಪ್ರಚಾರ ಮಾಡಿ ಕೆಸರೆರಚಲು ಯತ್ನಿಸಿದೂದೂ ಉಂಟು. ಆದುದರಿಂದ ಹೊಸ ಮಂತ್ರಿಮಂಡಳ ರಚಿಸುವ ನಿರ್ಧಾರ ಅವರದು. ಅದರಂತೆ ನವಂಬರ ೧೪ ನೇ ತಾ, ದಿನ ಡಾ. ಶಹರೀರರನ್ನು ಆಮಂತ್ರಿಸಿ ಪ್ರಧಾನಮಂತ್ರಿಯ ಪಟ್ಟಗಟ್ಟಿ ಹೊಸ ಮಂತ್ರಿಮಂಡಲ ರಚಿಸಲು ಆಜ್ಞಾಪಿಸಿದರು. ಶಹರೀರರು ಸೋಶಲಿಸ್ಟ. ಪಾಳೆಯಗಾರಪದ್ಧತಿಗಳಿಗೆಲ್ಲ ಹಗೆ.

ತಮ್ಮ ಜೀವನದ ೩೬ ವರುಷಗಳಲ್ಲಿ ೯ ವರುಷಗಳನ್ನು ಕಾರಾಗೃಹದಲ್ಲೇ ಕಳೆದವರು. ವಾಸ್ತವಿಕವಾದಿ. ಸ್ವಾತಂತ್ರ್ಯದ ವಿಷಯದಲ್ಲಿ ಸಂಧಾನ ಮಾಡಿಕೊಳ್ಳದ ಕಠೋರ ಮನುಷ್ಯ. ಸ್ನೇಹವೆಂದರೆ ಸ್ನೇಹ. ಹಗೆತನ ವಾದರೆ ಕಡೆತನಕ ಬಿಡಲಾರದ ಛಲ. ಅವರ ಕೈಯಲ್ಲಿ ರಾಜ್ಯಸೂತ್ರ ಸುಸೂತ್ರ. ಅವರು ಆರಿಸಿಕೊಂಡ ಮಂತ್ರಿಗಳೆಲ್ಲರೂ ಫ್ಯಾಸಿಸ್ಟ ವಿರೋಧಿ ಗಳೇ. ಜಪಾನರೊಡನೆ ನಿಮಿತ್ತ ಮಾತ್ರ ಸಹಕರಿಸಿದ ಕಲಂಕವೂ ಇಲ್ಲ ಯಾರ ಮೇಲೆ ಕೂಡಾ.

## ಪಾರ್ಲಿಮೆಂಟಿನ ಅಧಿವೇಶನ

ಶಹರೀರ ಮಂತ್ರಿ ಮಂಡಳ ರಚಿಸಲ್ಪಟ್ಟ ೧೫ ದಿವಸಗಳ ಮೇಲೆ ಎಂದರೆ ನವಂಬರ ೨೫ ನೇ ತಾ. ದಿನ ಪುನಃ ಬಟಾವಿಯಾ ನಗರದಲ್ಲಿ ರಾಷ್ಟ್ರೀಯ ಮಹಾಸಭೆಯ (ಪಾರ್ಲಿಮೆಂಟ) ಅಧಿವೇಶನ ಸೇರಿತು. ಟ್ರೇಡ ಯೂನಿಯನ, ರೈತಸಂಘ, ತರುಣಸಂಘ, ಹಾಗೂ ೭ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಜರಿದ್ದರು. ಮಹಿಳೆಯರಿಗೆ ೧೦ ಸ್ಥಾನ. ದೇಶ ದಲ್ಲಿ ಒಂದೇ ರಾಷ್ಟ್ರೀಯ ಪಕ್ಷವಿರುವುದು ಉಚಿತವೆಂಬ ಗೊತ್ತುವಳಿ ನಿರಾ ಕರಿಸಲ್ಪಟ್ಟಿತು. ಅದರಿಂದ ಫ್ಯಾಸಿಸ್ಟ ಮನೋವೃತ್ತಿ ಬೆಳೆಯಲು ಅವಕಾಶ ಕೊಟ್ಟಂತಾಗುವುದೆಂದು ಪಾರ್ಲಿಮೆಂಟಿನ ಅಂಜಿಕೆ. ವಿಷಯ ನಿಯಾಮಕ ಸಮಿತಿಯು ಶಿಫಾರಸುಮಾಡಿದ ವರ್ಕಿಂಗ ಕಮಿಟಿ ಸದಸ್ಯರ ಹೆಸರು ಗಳಿಗೂ ಮನ್ನಣೆ ದೊರೆಯಲಿಲ್ಲ. ಅವರೆಲ್ಲ ಪುಸ್ತಕದ ಹುಳಗಳು ಅಥವಾ ಬುದ್ಧಿವಂತರು. ತರುಣರಿಗೆ, ರೈತರಿಗೆ ಹಾಗೂ ಜನಸಾಮಾನ್ಯರಿಗೆ ಸ್ಥಾನ ದೊರೆಯಬೇಕೆಂದು ಪಾರ್ಲಿಮೆಂಟಿನ ಅಭಿಪ್ರಾಯ. ಅವರಂತೆ ೨೫ ಸದ ಸ್ಯರುಳ್ಳ ವರ್ಕಿಂಗ ಕಮಿಟಿ ರಚಿಸಲ್ಪಟ್ಟಿತು. ಶಹರೀರ ಮಂತ್ರಿ ಮಂಡ ಲಕ್ಕೂ ಬಹುಮತ ಬೆಂಬಲ ಲಭಿಸಿತು. ಡಚ್ ಮತ್ತು ಬ್ರಿಟಿಶರ ಆಕ್ರ ಮಣಶೀಲ ದಬ್ಬಾಳಿಕೆಯನ್ನು ಪ್ರತಿಭಟಿಸಬೇಕೆಂದೂ ಪಾರ್ಲಿಮೆಂಟ ನಿರ್ಣಯಿಸಿತು. ಈ ರೀತಿ ಪ್ರಜಾರಾಜ್ಯ ಘಟನಾತ್ಮಕ ಪದ್ಧತಿಯನ್ನವಯ ಚಲಿಸಲಾರಂಭಿಸಿತು.

## ಪ್ರಜಾ ಬೆಂಬಲ

ಶಹರೀರ ಸರಕಾರ ತಲೆಎತ್ತಿದ ಮೇಲೆಯೇ ದೇಶದಲ್ಲಿ ರಾಜಕೀಯ ಚಳವಳಿ ವಿರಾಟ ಸ್ವರೂಪ ತಾಳಿತು. ಇಂಡೋನೇಶಿಯಾನ ಸೋಶಾಲಿಸ್ಟ ಪಕ್ಷ, ಕ್ರಿಶ್ಚನ್ ಪಕ್ಷ, ಕಮ್ಯುನಿಸ್ಟ್ ಪಕ್ಷ, ಇಸ್ಲಾಂ ಪಕ್ಷ, ಇಕ್ತಾನ ಸಾರೆಕತ್ ಸಾಕೇರಜಾ ಟ್ರೇಡಯೂನಿಯನ್ ಪಕ್ಷ, ಬಾರಿಸಾನ ತಾನಿ ಇಂಡೋನೇಶಿಯಾ ರೈತಪಕ್ಷ, ಇಕ್ತಾನ ಪೆಲೇಜಾರ ವಿದ್ಯಾರ್ಥಿ ಸಂಸ್ಥೆ ಎಲ್ಲ ಸರಕಾರದಲ್ಲಿ ವಿಶ್ವಾಸ ವ್ಯಕ್ತಪಡಿಸಿದುವು. ಶಹರೀರರ ಕಾಲು ಬಹಳ ಭದ್ರವಾದುವು. ಈ ಹೊಸ ಸರಕಾರ ಇಂಡೋನೇಶಿಯದ ಮಹಾಕ್ರಾಂತಿಯ ಇತಿಹಾಸದಲ್ಲಿ ಒಂದು ಪ್ರಗತಿಪರ ಸೋಪಾನ. ಹಿಂದಿನ ಸರಕಾರ ರಾಷ್ಟ್ರೀಯವಿದ್ದರೆ ಇದು ರಾಷ್ಟ್ರೀಯ ಹಾಗೂ ಕ್ರಾಂತಿಕಾರಕ. ಸಾಮ್ಯವಾದದ ಕಡೆ ಇದರ ಒಲವು. ಕೇವಲ ಬುದ್ಧಿಜೀವಿಗಳ ಸರಕಾರವಲ್ಲ. ರೈತರು, ಕೂಲಿಕಾರರು ಹಾಗೂ ಜನಸಾಮಾನ್ಯರು ಈ ಸರಕಾರದ ಜೀವದುಸಿರು. ಕೂಲಿಕಾರರು, ತರುಣರು ಈ ಮಹಾಕ್ರಾಂತಿಯ ಸಚೇತನ ಶಕ್ತಿ. ವಿದೇಶಿ ಆಳಿಕೆ ಕೊನೆಗಂಡರೆ ಮಾತ್ರ ರೈತರ ಹಾಗೂ ಶ್ರಮಜೀವಿಗಳ ಮುಕ್ತಿಯಾಗಲಿಲ್ಲ. ಅವರ ಸಂಕಷ್ಟಗಳು ನಿವಾರಣೆ ಹೊಂದಿದರೇನೇ ಅವರಿಗೆ ಸ್ವಾತಂತ್ರ್ಯದ ಲಾಭ. ರಾಜ್ಯಸೂತ್ರ ಕ್ರಾಂತಿಕಾರರ ಕೈಯಲ್ಲಿದ್ದರೆ ಅವರ ಉದ್ಧಾರವಾದ ಹಾಗೆ. ಶಹರೀರರ ಮಂತ್ರಿ ಮಂತ್ರಿಮಂಡಲದ ಸ್ವರೂಪ ಅದೇ.

## ಸಿಂಗಾಪುರ ಸಭೆ

ಪ್ರಜಾರಾಜ್ಯದ ಈ ರೀತಿಯ ಸಂಘಟನೆ ಕಂಡು ದೂರದೃಷ್ಟಿಯುಳ್ಳ ರಾಜಕಾರಣಿಗಳು ಅದರೊಡನೆ ಸಂಧಾನ ಬಯಸಬೇಕಾಗಿತ್ತು. ಅದರ ಬದಲು ಬ್ರಿಟಿಶ್ ಮತ್ತು ಡಚ್ಚರು ಕಠೋರ ಧೋರಣವನ್ನೇ ಅವಲಂಬಿಸಿದರು. ಘೋರ ಯುದ್ಧವೇ ಆರಂಭವಾಯಿತು. ಇಂಡೋನೇಶಿಯನ್ನರು ಹಿಮ್ಮೆಟ್ಟಲಿಲ್ಲ. ಡಚ್ ಮತ್ತು ಬ್ರಿಟೀಶರು ಕಂಗೆಟ್ಟರು. ಇಷ್ಟು ಉಗ್ರ ಪ್ರತಿಭಟನೆಯನ್ನು ಅವರು ನಿರೀಕ್ಷಿಸಿರಲಿಲ್ಲ. ಆದುದರಿಂದ ಅಸಂಖ್ಯ ದಳಗಳನ್ನು ತಂದಿರಲಿಲ್ಲ ಇಂಡೋನೇಶಿಯಕ್ಕೆ. ಪರಿಸ್ಥಿತಿ ಹದ

ಗೆಟ್ಟಿತೆಂದು ತಿಳಿದು ಸಿಂಗಾಪುರದಲ್ಲಿ ಅಧಿಕಾರಿಗಳ ಸಭೆಗೂಡಿಸಿದರು. ಲಾರ್ಡ ಮೌಂಟಬ್ಯಾಟನ್ನರು ಅಧ್ಯಕ್ಷರು. ಡಚ್ ವಾಯಿಸರಾಯರಾದ ಡಾ. ಮೂಕರೂ ತೆರಳಿದ್ದರು. ಇಂಡೋನೇಶಿಯನ್ನರ ವಿರುದ್ಧ ದೊಡ್ಡ ಪ್ರಮಾಣದ ಯುದ್ಧ ಮಾಡಲು ನಿರ್ಧರಿಸಲಾಯಿತಂತೆ. ಈ ನಿರ್ಣಯ ಕೇಳಿ ಕೆರಳಿದರು ಶಹರೀರ. "ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಇಂಡೊನೇಶಿಯನ್ನರು ಪಣತೊಟ್ಟಿದುದು ಜಗತ್ತಿಗೇ ಗೊತ್ತಾಗಿದೆ. ಶಾಂತ ಮಾರ್ಗದಿಂದ ಬಿಕ್ಕಟ್ಟನ್ನು ನಿವಾರಿಸಿದರೆ ನಮಗೆ ಸಂತೋಷ. ಆದರೆ ಬಲಪ್ರಯೋಗವನ್ನು ಪ್ರತಿಭಟಿಸುವೆವು" ಎಂದವರು ಗರ್ಜಿಸಿದರು. ಮಿತ್ರ ಸೇನಾಧಿಕಾರಿಗಳು ಅದನ್ನು ಲಕ್ಷಿಸದೆ ಸರ್ವತೋಮುಖ ಯುದ್ಧಕ್ಕೆ ಅಣಿಯಾದರು.

## ಬಾಂಡೊಯೆಂಗ

ಡಿಸೆಂಬರ ತಿಂಗಳಲ್ಲಿ ಬಾಂಡೊಯೆಂಗ ನಗರಕ್ಕೆ ಸೌರಬಾಯದ ಗತಿ ಬಂದೊದಗಿತು. ಆ ನಗರವು "ಉಗ್ರಗಾಮಿಗಳಿಗೆ" ಆಶ್ರಯ ಕೊಟ್ಟಿತಂತೆ. ಅದರ ನಿರ್ನಾಮಕ್ಕಾಗಿ ಆರ್. ಎ. ಎಫ್ ವಿಮಾನಗಳನ್ನು ಉಪಯೋಗಿಸಿದರು. ನಗರವಾಸಿಗಳಿಗೆ ಓಡಿ ಹೋಗಲು ೬ ನಿಮಿಷಗಳ ಸಮಯಾವಕಾಶವನ್ನು ಕೊಡುವ ಕರಪತ್ರಗಳನ್ನು ಚೆಲ್ಲಿದ್ದರಂತೆ. ಇಂಡೋನೇಶಿಯನ್ನರು ಹಿಂದೀಯರಂತೆ ಬಹುಜನ ನಿರಕ್ಷರಕುಕ್ಷಿಗಳು. ಆ ಕರಪತ್ರಗಳನ್ನು ಓದಿ ತಿಳಿದುಕೊಳ್ಳುವ ಬಗೆಹೇಗೆ? ೬ ನಿಮಿಷಗಳಲ್ಲಿ ಮಡದಿ ಮಕ್ಕಳನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುವುದೂ ಅಸಾಧ್ಯ. ಮುದುಕರು ಎಲ್ಲಿಗೋಡಬೇಕು? ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ಕಂದಕಗಳೂ ಇಲ್ಲ. ಅವರೆಲ್ಲರೂ ಹೋಗುವುದೆಲ್ಲಿ? ಸರಿ. ಆರು ನಿಮಿಷಗಳಾದ ಮೇಲೆ ಆರ್. ಎ. ಎಫ್. ಉರಿಗೊಳ್ಳಿಗಳನ್ನೆಸೆಯಿತು. ಇದರಂತೆಯೇ ಬಟಾವಿಯಾ ಬಂದರದಿಂದ ೩೦ ಮೈಲು ದೂರವಿರುವ ಬಿಕಾಸಿ ನಗರಕ್ಕೆ ಪೆಟ್ರೋಲ್ ಎಣ್ಣೆ ಸುರಿಸಿ ಸುಟ್ಟರು.

## ಮಿತ್ರಸೈನಿಕರ ನಿಷೇಧ

ಸಾಮ್ರಾಜ್ಯವಾದಿಗಳ ಈ ಹಿಂಸೆ, ಕ್ರೌರ್ಯ, ಮಿತ್ರಸೈನಿಕರಿಗೂ ಪ್ರಿಯವಾಗಿಲ್ಲ. ನಿರಪರಾಧಿ ಜನರ ಮೇಲೆ ಇಷ್ಟು ನಿರ್ದಯೆಯಿಂದ ವರ್ತಿ

ಸುವದು ಅನುಚಿತವೆಂದು ಕೆಲವು ಹಿಂದೀ ಸೇನಾಧಿಕಾರಿಗಳು ಮೇಲಧಿಕಾರಿಗಳಿಗೆ ತಿಳಿಸಿದರಂತೆ. ಅನೇಕ ಹಿಂದೀ ಸೈನಿಕರೂ ನಿಷೇಧ ವ್ಯಕ್ತಪಡಿಸಿರುವರಂತೆ. ಕೆಲವರನ್ನು ದಂಡಿನ ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ವಿಧಿಸಲಾಯಿತೆಂದು ಸುದ್ದಿ. ಬ್ರಿಟಿಶ್ ಸೈನಿಕರೂ ಈ ಅತ್ಯಾಚಾರವನ್ನು ಖಂಡಿಸಿರುವರು. ಬಟಾವಿಯಾ, ಬಾಂಡೊಯೆಂಗ್ ಮುಂತಾದ ನಗರಗಳಲ್ಲಿದ್ದ ಆರ್. ಎ ಎಫ್. ವೈಮಾನಿಕರು ಒಂದು ದಿನದ ಸಂಪು ಹೂಡಿ ತಮ್ಮ ನಿಷೇಧ ವ್ಯಕ್ತಪಡಿಸಿದರು. ಆಸ್ಟ್ರೇಲಿಯನ್ ಸೈನಿಕರು ಈ ಹತ್ಯಾಕಾಂಡದಲ್ಲಿ ಭಾಗವಹಿಸಲು ಸಮ್ಮತಿಸಿಲ್ಲ. ಪಂಡಿತ ನೆಹರು ಹಿಂದೀ ಸೈನಿಕರನ್ನು ಉಪಯೋಗಿಸಿದುದನ್ನು ನೋಡಿ ಕಿಡಿಕಿಡಿಯಾಗಿ ಬ್ರಿಟಿಶ್ ಧೋರಣವನ್ನು ಖಂಡಿಸಿದರು. ಬ್ರಿಟಿಶರು ಈಗ ತಮ್ಮ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಲು ನಿರ್ಧರಿಸಿರುವರು. ಅವರ ಬದಲು ಅಧಿಕ ಡಚ್ ಸೇನೆಯನ್ನು ಕಳಿಸಲಾಗಿದೆ.

---

## ಸಂಧಾನ ಯತ್ನ

---

ಇಂಡೋನೇಶಿಯದ ಈ ಕಿಗ್ಗಡಲ ರಕುತದಲ್ಲಿ ಮಿತ್ರರು ಕುಣಿದಾಡುತ್ತಿರುವುದನ್ನು ನೋಡಿ "ರಕ್ಷಿಸಿರಿ" ಎಂದು ಪ್ರಜಾರಾಜ್ಯವು ಜಗತ್ತಿಗೆ ಮೊರೆಯಿಟ್ಟಿತು. "ಈ ಮಿತ್ರರೊಡನೆ ಸಹಕರಿಸಲು ನಾವು ಸದಾ ಸಿದ್ಧರು. ಆದರೆ ನಮ್ಮ ಸ್ವಾತಂತ್ರ್ಯಕ್ಕೆ ಭಂಗಬರಬಾರದು ಅಷ್ಟೆ. ಶಾಂತರೀತಿಯಿಂದ ಇಂಡೋನೇಶಿಯದ ಪ್ರಶ್ನೆಯನ್ನು ಬಗೆಹರಿಸಿದರೆ ನಮಗೆ ಸಂತೋಷ" ಎಂದು ಅಧ್ಯಕ್ಷ ಸುಕರ್ನೋ ನುಡಿದರು. ಇಂಡೋನೇಶಿಯದ ಈ ಆರ್ತನಾದದಿಂದ ಜಗತ್ತಿನ ಶಾಂತಿಪ್ರಿಯ, ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಅಂತಃಕರುಣ ಅಲುಗಿತು. ಹಿಂದುಸ್ತಾನವು ಅನಾದಿಕಾಲದಿಂದಲೂ ಸಾಮ್ರಾಜ್ಯವಾದಿಗಳ ಹಿಂಸಾಚರಣೆಯನ್ನು ನಿಷೇಧಿಸಿದ

ರಾಷ್ಟ್ರ. ಹಿಂದುಸ್ತಾನದ ಸಹಾನುಭೂತಿ ಒಲವು ಪ್ರಜಾರಾಜ್ಯದ ಕಡೆಗೇ. ದೇಶದಾದ್ಯಂತ ಬ್ರಿಟಿಶ್ ಮತ್ತು ಡಚ್ ಆಕ್ರಮಣಶೀಲ ದಬ್ಬಾಳಿಕೆಯು ಖಂಡನೆಗೆ ಪಾತ್ರವಾಯಿತು. ಪ್ರಜಾರಾಜ್ಯದ ಬೇಡಿಕೆ ನ್ಯಾಯವೆಂದಿತು ರಶಿಯ. ಮಿತ್ರರ ಧೋರಣ ಚೀನಕ್ಕೂ ಪ್ರಿಯವಾಗಲಿಲ್ಲ. ಇಷ್ಟರವರೆಗೆ ಬಕ ಧ್ಯಾನ ಮಾಡುತ್ತಿದ್ದ ಟ್ರೂಮನ ಅಮೇರಿಕದ ವಿದೇಶಿ ಖಾತೆಯು ಒಂದು ಪ್ರಕಟನೆಯನ್ನು ಹೊರಡಿಸಿ, ಅಂತರರಾಷ್ಟ್ರೀಯ ಶಾಂತಿಭದ್ರತೆಯ ದೃಷ್ಟಿ ಯಿಂದ ಸ್ನೇಹಪೂರ್ಣ ಮಾತುಕತೆ ಮೂಲಕ ಈ ಪ್ರಶ್ನೆಯನ್ನು ಪರಿ ಹರಿಸುವುದು ಹಿತವಿಹಿತವೆಂದಿತು. ಸಾಮ್ರಾಜ್ಯವಾದಿಗಳು ಕಕ್ಕಾವಿಕ್ಕಿ ಯಾದರು.

## ಮೂಕರ ರಾಯಭಾರ

ಜಾಗತಿಕ ಜನಾಭಿಪ್ರಾಯದ ತೆರೆಗೆ ತತ್ತರಿಸಿದ ಕೆಲವು ಡಚ್ ಮತ್ತು ಬ್ರಿಟಿಶ್ ಅಧಿಕಾರಿಗಳು ಶಾಂತಮಾರ್ಗದ ಸವಿನುಡಿಗಳನ್ನಾಡ ತೊಡಗಿದರು. ಡಚ್ ವಾಯಿಸರಾಯರಾದ ಡಾ. ಮೂಕರು ಪುನಃ ಅಧ್ಯಕ್ಷ ಸುಕರ್ನೋ, ಹಾಟಾ, ಶಹರೀರ ಮುಂತಾದವರನ್ನು ಭೆಟ್ಟಿ ಯಾದರು. ೧೯೪೨ರ ವಿಲಹೆಲ್ಮಿನಾ ಘೋಷಣೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಸ್ವೀಕರಿಸಬೇಕೆಂದು ಅವರ ಮತ. ಆದರೆ ಅಷ್ಟನ್ನೂ ಹಾಲಂಡದ ಡಚ್ ಸರಕಾರವು ನಿರಾಕರಿಸುತ್ತಿದ್ದುದರಿಂದ ಡಚ್ಚರ ಮನವೊಲಿಸಲು ಮೂಕರು ಸ್ವದೇಶಕ್ಕೆ ತೆರಳಿದರು. ಮೂಕರೊಪ್ಪಿಸಿದ ವರದಿ ನೋಡಿ ಡಚ್ ಸರಕಾರದ ತಲೆಯೇ ತಿರುಗಿತು. ಇಂಡೋ ನೇಶಿಯದಲ್ಲಿ ಇಷ್ಟು ಜಾಗೃತಿಯಾಗಿದೆಯೆಂದು ಅವರಿಗೆ ಗೊತ್ತಾದುದು ಆಗಲೇ. ಬಿಡಿಸಲಾರದ ಕಗ್ಗಂಟಾಗಿ ಕೂತಿತು ಈ ಪ್ರಶ್ನೆ. ಡಚ್ ಮಂತ್ರಿಮಂಡಲದಲ್ಲೇ ಭಿನ್ನಾಭಿಪ್ರಾಯ. ಬ್ರಿಟಿಶರ ಬೆಂಬಲವಿಲ್ಲದೆ 'ವಸಾಹತು' ಕೈಯಲ್ಲಿ ಭದ್ರ ಉಳಿಯದೆಂದೂ ಅವರಿಗೆ ಖಚಿತ ವಾಯಿತು. ಅದಕ್ಕಾಗಿ ಬ್ರಿಟನಿನ ಸಲಹೆ, ಸೂಚನೆ ಹಾಗೂ ಮಿಲಿಟರಿ ಸಹಾಯ ಪಡೆಯಲು ಡಚ್ ಶಿಷ್ಟಮಂಡಳ ಲಂಡನಿಗೆ ಹೊರಟಿತು.

## ಆ್ಯಟ್ಲೀ ಹಿತೋಪದೇಶ

ಈ ವಿಸ್ತಾರವಾದ ಜಗತ್ತಿನಲ್ಲಿ ಎಲ್ಲಿ ಕಾಲೂರಿದರೂ ಅದು ಬ್ರಿಟಿಶರ ಭೂಮಿ. ಒಂದಲ್ಲದಿದ್ದರೆ ಇನ್ನೊಂದು ರೂಪದಲ್ಲಿ ಅವರ ಆಡಳಿತೆಗೊಳಗಾದ ರಾಜ್ಯಗಳೇ ವ್ಯಾಪಿಸಿಕೊಂಡಿವೆ. ಅನೇಕ ಶತಮಾನ ಗಳಿಂದ ಅವರು ತಮ್ಮ ಅಧಿಕಾರವನ್ನು ಕಾಪಾಡಿಕೊಂಡು ಬಂದಿರು ವರು. ಬರಗಾಲ, ದರೋಡೆ, ಯುದ್ಧ, ಭೂಕಂಪಗಳಾದವು. ಆದರೂ ಅವರ ಹಿಡಿತ ಸಡಿಲಿಸಿಲ್ಲ. ಆಡಳಿತೆಯಲ್ಲಿ ಅವರು ಪ್ರವೀಣರು. ಸವಿಮಾತುಗಳಿಂದಲೇ ಮರುಳುಮಾಡಿ ಕೊನೆಗೆ ಕೊರಳು ಕೊಯ್ಯುವ ಗಾರುಡಿಗ ಮಂತ್ರ ಅವರದು. ಪ್ರತಿಸ್ಪರ್ಧಿ ಪ್ರಬಲವಾದಾಗ ಅವನಿಗೆ ಮತ್ತೊಬ್ಬ ವೈರಿಯನ್ನು ಎತ್ತಿಕಟ್ಟಿ ಇಬ್ಬರನ್ನೂ ರಸಾತಳಕ್ಕೆ ಮೆಟ್ಟುವ ನರಿತಂತ್ರ ಚೆನ್ನಾಗಿ ಗೊತ್ತು. ತಮಗೆ ಕಷ್ಟಕಾಲ ಬಂದಾಗ ಇಂದ್ರಲೋಕವನ್ನೇ ಕೊಡುವ ವಚನ. ಸಂಕಟಗಳು ಕಳೆದು ಕಾಲು ಭದ್ರವಾದ ಬಳಿಕ ಉಪಾಯದಿಂದ ಹಾರಿಸಿಕೊಳ್ಳುವ ಗತ್ತುಗಾರಿಕೆ. ಬ್ರಿಟನ್ ಜಗತ್ತಿನಲ್ಲಿ ಕಾಲು ಚಾಚಲು ಆರಂಭಿಸಿದಂದಿನಿಂದಲೂ ಇದೇ ವಿದ್ಯೆ. ಆದುದರಿಂದಲೇ ಬ್ರಿಟನದಲ್ಲಿ ಯಾವ ಸರಕಾರ ಬಂದರೂ ಅದರ ವಿದೇಶಿ ಧೋರಣದಲ್ಲಿ ಬದಲಾವಣೆಯಾಗುವುದಿಲ್ಲ. ಡಚ್ ಶಿಷ್ಟಮಂಡಳಕ್ಕೆ ಆ್ಯಟ್ಲೀಯವರು ಮಾಡಿದ ಉಪದೇಶ ಇದೇ. ಹೊಸ ಡಚ್ ಯೋಜನೆಯನ್ನು ಇಂಡೋನೇಶಿಯನ್ನರು ಸ್ವೀಕರಿಸಲು ತಪ್ಪಿದರೆ ಬ್ರಿಟನ್ ಡಚ್ಚರಿಗೆ ಮಿಲಿಟರಿ ಬೆಂಬಲ ಕೊಡುವುದೆಂದೂ ಭರವಸೆ ಕೊಟ್ಟ ಸುದ್ದಿ ಬ್ರಿಟಿಶ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿತು. "ಡಚ್ಚರ ಸಾಮ್ರಾಜ್ಯವನ್ನು ಅವರಿಗೆ ಪುನಃ ಕೊಡಿಸುವುದು ಬ್ರಿಟಿಶ ಸರಕಾರದ ಕರ್ತವ್ಯ" ಎಂದು ಬೆವಿನ್ ನುಡಿದರು. "ಮಹಾಯುದ್ಧದಲ್ಲಿ ಬ್ರಿಟನಿಗೆ ಡಚ್ಚರು ಸಹಾಯ ನೀಡಿದುದರಿಂದ, ಈಗ ಡಚ್ಚರ ಸಾಮ್ರಾಜ್ಯವನ್ನು ರಕ್ಷಿಸುವುದು ಬ್ರಿಟನಿನ ಹೊಣೆ" ಎಂದರು ಆ್ಯಟ್ಲೀ.

## ಬ್ರಿಟಿಶ ಬೆಂಬಲದ ರಹಸ್ಯ

ಇಂಡೋನೇಶಿಯದಲ್ಲಿ ಬ್ರಿಟಿಶರ ಹಕ್ಕು ಹಿತಗಳಿರುವುದರಿಂದಲೇ ಡಚ್ಚರ ಸಾಮ್ರಾಜ್ಯವನ್ನು ರಕ್ಷಿಸಲು ಬ್ರಿಟನ ವಚನಕೊಟ್ಟಿದೆ.

ಡಚ್ಚರು ದುರ್ಬಲರು. ಜನಶಕ್ತಿ ಕಡಿಮೆ. ಮಹಾಯುದ್ಧದಲ್ಲಿ ಸ್ವಾತಂತ್ರ್ಯವನ್ನು ಕಳೆದುಗೊಂಡು ಕಷ್ಟ ನಷ್ಟಗಳನ್ನು ಅನುಭವಿಸಿತು. ಇಂಡೋನೇಶಿಯವನ್ನು ಮೆಟ್ಟಿ ನಿಲ್ಲುವ ಸೈನ್ಯ ಸಂಪತ್ತು, ಸಹಾಯ ಸಲಕರಣೆಗಳ ಬಲವಿಲ್ಲ. ಅದಕ್ಕೆ ಬ್ರಿಟನದ ಸಹಾಯ ಸಹಕಾರ ಅತ್ಯಗತ್ಯ. ಇಂಡೋನೇಶಿಯವನ್ನು 'ಅಡವು' ಮಾಡಲೂ ಡಚ್ಚರೂ ಸಿದ್ಧ. ಯುದ್ಧ ಪೂರ್ವದಲ್ಲೇ ಬ್ರಿಟನ ೧೫ ಕೋಟಿ ಪೌಂಡುಗಳ ಬಂಡವಲು ಸುರಿಸಿದೆ ಈ ವಸಾಹತಿನಲ್ಲಿ. ಅನೇಕ ಎಣ್ಣೆ ಕಣ್ಣೆಗಳು, ರಬ್ಬರ ತೋಟಗಳು, ಸಕ್ಕರೆ ಕಾರ್ಖಾನೆಗಳು ಬ್ರಿಟಿಶರವು. ಈಗ ಯುದ್ಧೋತ್ತರ ಕಾಲದಲ್ಲಿ ಹಸಿದ ಬ್ರಿಟನದ ಕಾರ್ಖಾನೆಗಳಿಗೆ ಹೇರಳ ಕಚ್ಚಾಮಾಲುಗಳು ಬೇಕು. ತಯಾರಿ ಕೈಗಾರಿಕೆಗಳಿಗೆ ಹೊಸ ಹೊಸ ಸಂತೆಗಳು ಸಾವಿರ ಅವಶ್ಯ. ಇಂಡೋನೇಶಿಯ ಬ್ರಿಟಿಶರಿಗೆ ಉತ್ತಮ ಗಿರಾಕಿ. ಇನ್ನು ರಾಜಕೀಯ ದೃಷ್ಟಿಯಿಂದ ನೋಡಿದರೂ ಬ್ರಿಟಿಶರ ಎದೆಗುದಿಗೆ ಒಂದು ಪ್ರಬಲ ಕಾರಣವಿದೆ. ಇಂಡೋನೇಶಿಯ ಸ್ವತಂತ್ರವಾದರೆ, ಆ ಗಾಳಿ ಮಲಯ, ಬ್ರಹ್ಮದೇಶ ಮತ್ತು ಹಿಂದುಸ್ತಾನಗಳಿಗೆ ಬೀಸಬಹುದೆಂದು ಅವರು ಹೆದರುತ್ತಿರುವರು. ಅದಕ್ಕೆ ಅವಕಾಶ ಕೊಡದೆ ಇಂಡೋನೇಶಿಯನ ಸ್ವಾತಂತ್ರ್ಯವನ್ನು ಚಿಗುರಿನಲ್ಲೇ ಚಿವುಟಿ ಬಿಡಲು ಅವರ ಸಾಹಸ. ಕೊನೆಯದಾಗಿ ಜಾಗತಿಕ ರಾಜಕಾರಣವೂ ಇದರಲ್ಲಡಕವಾಗಿದೆ. ಸೋವಿಯೆಟ ಯೂನಿಯನ್ ಈಗ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಪರಿಣಮಿಸಿದೆ ಅದರ ಪ್ರಭಾವ ಪ್ರತಿಷ್ಠೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಸಾಮ್ರಾಜ್ಯವಾದಿಗಳಿಗೆ ಅದನ್ನು ಕಂಡು ಭಯ. ಅದರ ವಿರುದ್ಧ ಪಶ್ಚಿಮರಾಷ್ಟ್ರಗಳ ಮೇಳ ಕಟ್ಟಲು ಬ್ರಿಟಿಶರ ಆತುರ. ಫ್ರಾನ್ಸ, ಬೆಲ್ಜಿಯಂ, ಹಾಲಂಡಗಳ ಮನವೊಲಿಸಲೂ ಅವರ ಇಚ್ಛೆ. ಡಚ್ಚರಿಗೆ ಬ್ರಿಟಿಶರ ಸಹಾಯ ದೊರೆಯಲು ಇವೇ ಮುಖ್ಯ ಕಾರಣಗಳು.

## ರಾಷ್ಟ್ರಸಂಘದಲ್ಲಿ ಚರ್ಚೆ

ಬ್ರಿಟಿಶ್, ಡಚ್ ಹಾಗೂ ಹಿಂದೀ ಸೈನಿಕರು ಇಂಡೋನೇಶಿಯದಲ್ಲಿ ನಡೆಸಿರುವ ದಬ್ಬಾಳಿಕೆಯನ್ನು ಖಂಡಿಸಿ, ರಾಷ್ಟ್ರಸಂಘದ ಕ್ರಿಯಾ

ಸಮಿತಿಯಾಗಿರುವ ಭದ್ರತಾಮಂಡಲವು ಯೋಗ್ಯವಿಚಾರಣೆ ನಡೆಸ ಬೇಕು. ಮತ್ತು ಈ ಯುದ್ಧ ಪರಿಸ್ಥಿತಿಯನ್ನು ಕೊನೆಗಾಣಿಸುವ ಉಪಾಯಗಳನ್ನು ಕೈಕೊಳ್ಳಬೇಕು ಎಂದು ಯುಕ್ರೇನಿಯನ ಪ್ರತಿನಿಧಿ ರಾಷ್ಟ್ರಸಂಘಕ್ಕೆ ಪತ್ರಬರೆದಿದ್ದರು. ಲಂಡನದಲ್ಲಿ ರಾಷ್ಟ್ರಸಂಘದ ಪ್ರಥಮ ಅಧಿವೇಶನ ಕೂಡಿದಾಗಲೇ ಫೆಬ್ರುವರಿ ಎರಡನೇ ವಾರ ಇಂಡೋನೇಶಿಯದ ಪ್ರಶ್ನೆ ಚರ್ಚೆಗೆ ಬಂತು. "ಇಂಡೋನೇಶಿಯನ್ನರು ಯುದ್ಧಾಂತ್ಯದಲ್ಲಿ ತಮಗೆ ಸ್ವಾತಂತ್ರ್ಯ ದೊರೆಯಬಹುದೆಂದು ಆಶಿಸಿದ್ದರು. ಅದು ನಿರಾಶೆಯಾಯಿತು. ಈಗ ಅವರ ರಾಷ್ಟ್ರೀಯ ಚಳವಳಿಯನ್ನೇ ಹತ್ತಿಕ್ಕಲೆತ್ನಿಸಲಾಗಿದೆ." ಎಂದವರುಹೇಳಿ ಅತ್ಯಾಚಾರಗಳ ಸುದ್ದಿಗಳಿಂದ ತುಂಬಿದ ಪತ್ರಿಕೆಗಳ ವರದಿಗಳ ರಾಶಿ ಒಟ್ಟಿದರು. ಬ್ರಿಟಿಶ ಸೈನಿಕರನ್ನು ಹಿಂದಕ್ಕೆ ಕರೆಸಬೇಕೆಂದು ಅವರು ಪ್ರತ್ಯಕ್ಷ ಸೂಚಿಸದೆ ಇದ್ದರೂ ಬ್ರಿಟಿಶ ಮತ್ತು ಹಿಂದೀ ಸೈನಿಕರು ಕೈಹಾಕಿದುದು ರಾಷ್ಟ್ರಸಂಘದ ಸನದಿಗೆ ತೀರ ವ್ಯತಿರಿಕ್ತವಾಗಿದೆಯೆಂದರು. ಪರಿಸ್ಥಿತಿಯನ್ನು ವಿಚಾರಿಸಲು ರಾಷ್ಟ್ರಸಂಘದ ವಿಚಾರಣಾ ಮಂಡಲವನ್ನೂ ಕಳಿಸಬೇಕೆಂದು ಅವರ ವಾದ.

## ಬೆವಿನ್ನರ ವಾಗ್ಜಾಲ

ಬ್ರಿಟನ ಅಪರಾಧಿಯೆಂದು ರಾಷ್ಟ್ರಸಂಘದಲ್ಲಿ ಬೊಟ್ಟು ಮಾಡಿ ತೋರಿಸಿದುದರಿಂದ ಬೆವಿನ್ನರದೆ ರೋಷದಿಂದ ಕುದಿಯುತೊಡಗಿತು. ಜಪಾನಿ ಸೈನಿಕರ ನಿಶ್ಶಸ್ತ್ರೀಕರಣ, ಯುದ್ಧ ಕೈದಿಗಳ ವಿಮೋಚನೆ ಇವೇ ಜಾವಾಕ್ಕೆ ತೆರಳಿದ ಮಿತ್ರರ 'ಉದಾತ್ತ' ಉದ್ದೇಶಗಳೆಂದು ಅವರ ಸೊಲ್ಲು ಪಲ್ಲವಿ. ಮಿತ್ರ ಸೈನಿಕರ ಮೇಲೆ ಗುಂಡು ಹಾರಿಸಿದುದರಿಂದ ಸ್ವರಕ್ಷಣೆಗಾಗಿ ಪ್ರತೀಕಾರ ಉಪಾಯಗಳನ್ನು ಕೈಕೊಂಡರಂತೆ. ಜಪಾನರಿಂದ ಫ್ಯಾಸಿಸ್ಟ ಶಿಕ್ಷಣ ಪಡೆದ ಕೆಲವು ತರುಣರೇ ಈ ತೊಂದರೆಗೆ ಕಾರಣವೆಂದು ಅವರ ಆರೋಪ. ಇಂಡೋನೇಶಿಯಕ್ಕೆ ವಿಚಾರಣೆಮಂಡಲ ಕಳಿಸಿದರೆ ಅಲ್ಲಿಯ ಆಂತರಿಕ ಆಡಳಿತೆಯಲ್ಲಿ (ಡಚ್ಚರ ಆಂತರಿಕ ಆಡಳಿತೆಯಲ್ಲಿ ? ) ಕೈಹಾಕಿದಂತಾಗುವದೆಂದು ಅವರ ಭಯ. ಬ್ರಿಟಿಶ ಸೈನಿಕರು

ಪ್ರವೇಶಿಸಿದುದ್ದರಿಂದ ಶಾಂತಿ ಭದ್ರತೆಗೆ ಗಂಡಾಂತರ ಬಂದಿಲ್ಲವೆಂದು ಅವರ ಬಿನ್ನಾಣದ ನುಡಿ. ಮಾನ್ಯುಲಿಸ್ಕಿಯವರಿಗೆ ಸತ್ಯಸಂಗತಿಯು ಜ್ಞಾನವಿಲ್ಲವೆಂದೂ ಅವರು ಜರೆದರು. ಡಚ್ ಪ್ರತಿನಿಧಿ ಕ್ಲೆಫೆನ್ಸರು ಬೆವಿನ್ನರ ಬೆನ್ನು ಚಪ್ಪರಿಸಿ, ಈ ಭದ್ರತಾ ಮಂಡಲವು ಚರ್ಚಿಸುವ ಪ್ರಶ್ನೆಯೇ ಇದಲ್ಲ; ಚರ್ಚಿಸುವ ಅಗತ್ಯವೂ ಇಲ್ಲ; ಶಾಂತಿ ಭದ್ರತೆಗೆ ಹನಿ ಬಂದಿಲ್ಲವೆಂದರು ವಿಚಾರಣಾಮಂಡಲವು ಅಮೇರಿಕನ ಪ್ರತಿನಿಧಿ ಸ್ಟೆಟಿನಸರಿಗೂ ಒಗ್ಗದೆ ಹೋಯಿತು.

## ವಿಶಿನಸ್ಕಿಯವರ ವಾದ

ರಶಿಯನ ಪ್ರತಿನಿಧಿ ವಿಶಿನಸ್ಕಿಯವರು ಸೂಚನೆಯನ್ನು ಸಮರ್ಥಿಸಿದರು. "ಇಂಡೋನೇಶಿಯನ ಜನತೆಯ ಮೇಲೆ ಯುದ್ಧವನ್ನೇ ಹೂಡಲಾಗಿದೆ. ಇದನ್ನು ಕೊನೆಗಾಣಿಸುವುದು ಅತ್ಯಗತ್ಯ. ಇಲ್ಲದೇ ಇದ್ದರೆ ಯುದ್ಧದ ಬೇಗೆಯು ಜಗದ್ವ್ಯಾಪಿಯಾಗಬಹುದು. ಬ್ರಿಟನ, ರಶಿಯಾ, ಫ್ರಾನ್ಸ, ಚೀನ, ಅಮೇರಿಕಾ ಮತ್ತು ಹಾಲಂಡದ ಪ್ರತಿನಿಧಿಗಳುಳ್ಳ ಒಂದು ವಿಚಾರಣಾ ಸಮಿತಿಯನ್ನು ಕಳಿಸುವುದು ಉಚಿತ. ಜಾವಾಕ್ಕೆ ಬ್ರಿಟನ ವಿಶೇಷ ರಾಯಭಾರಿಯನ್ನು ಕಳಿಸಿದೆ. ಈ ಹಕ್ಕನ್ನು ಇತರ ರಾಷ್ಟ್ರಗಳಿಗೂ ಕೊಡದಿದ್ದರೆ ಅಂತರರಾಷ್ಟ್ರೀಯ ಸಹಕಾರ ಅಷ್ಟೇ ಏಕೆ, ರಾಷ್ಟ್ರ ಸಂಘಕ್ಕೆ ಅಳಿಗಾಲ ನಿಶ್ಚಿತ. ಜಾವಾದ ಪರಿಸ್ಥಿತಿಯಲ್ಲಿ ಕೈ ಹಾಕುವುದು ರಾಷ್ಟ್ರ ಸಂಘದ ಕರ್ತವ್ಯ. ಇಂಡೋನೇಶಿಯನ್ನರ ವಿರುದ್ಧ ಜಪಾನಿ ಸೈನಿಕರನ್ನು ಉಪಯೋಗಿಸಿರುವುದು ಜಪಾನದೊಡನೆ ಮಿತ್ರರಾಷ್ಟ್ರಗಳು ಮಾಡಿಕೊಂಡ ಒಪ್ಪಂದಕ್ಕೆ ವಿರುದ್ಧ. ಯುಕ್ರೇನಿಯದ ಸೂಚನೆ ಡಚ್ ಪ್ರತಿನಿಧಿಗೆ ಸಮ್ಮತವಿಲ್ಲ. ತಾವು ನಡೆಸಿರುವ ದಬ್ಬಾಳಿಕೆ ಇತರರಿಗೆ ಗೊತ್ತಾಗಬಾರದೆಂದು ಅವರ ಇಚ್ಛೆಯಿದ್ದಂತೆ ಕಾಣುತ್ತಿದೆ. ತಮ್ಮ ಧೋರಣ ನ್ಯಾಯವಾಗಿದ್ದರೆ, ಅವರು ಹೆದರುವದೇಕೆ?" ಎಂದು ವಿಶಿನಸ್ಕಿ ಗುಡುಗಿದರು. ಅಂತರರಾಷ್ಟ್ರೀಯ ಶಿಷ್ಟಮಂಡಲ ಕಳಿಸಲು ರಾಷ್ಟ್ರ ಸಂಘಕ್ಕೆ ಅಧಿಕಾರವಿದೆ; ಅದು ಕಳಿಸಬೇಕು ಎಂದೂ ಅವರು ನುಡಿದರು.

## ಆಂತರಿಕ ಪ್ರಶ್ನೆಯಲ್ಲ

ಇಂಡೋನೇಶಿಯದ ಪ್ರಶ್ನೆ ಡಚ್ಚರಿಗೆ ಮಾತ್ರ ಸಂಬಂಧಿಸಿದುದಲ್ಲವೆಂದು ಮಾನ್ಯುಲಿಸ್ಕಿ ಉಸುರಿದರು. ಡಚ್ಚರ ಆಂತರಿಕ ವಿಷಯಗಳಲ್ಲಿ ಕೈ ಹಾಕುತ್ತಿರುವೆನೆಂದು ದೂರುತ್ತಿರುವುದು ಆಶ್ಚರ್ಯದ ಸಂಗತಿ. ಇದು ಡಚ್ಚರ ಆಂತರಿಕ ಪ್ರಶ್ನೆಯಲ್ಲವೆಂದು ನನ್ನ ಮತ. ಜಪಾನಿಯರನ್ನು ಇಂಡೋನೇಶಿಯನ್ನರ ವಿರುದ್ಧ ಬ್ರಿಟಿಶರು ಕಳಿಸಿ ಅಂತರರಾಷ್ಟ್ರೀಯ ಕಾಯದೆ ಮುರಿದಿರುವರು. ಇದು ಯುದ್ಧೋದ್ದೇಶಕ್ಕೆ ಸರಿಹೋಗುವುದಿಲ್ಲ. ಈ ಪದ್ಧತಿಯು ಅಪಾಯಕರ. ಈ ವಿಷಯದಲ್ಲಿ ಭದ್ರತಾ ಮಂಡಲವು ಕೈಹಾಕಬಾರದಂತೆ. ಜಾವಾದಲ್ಲಿ ಯುದ್ಧವು ಪ್ರಜ್ವಲಿಸುತ್ತಿರುವಾಗಲೂ ಭದ್ರತಾ ಮಂಡಲವು ಸುಮ್ಮನೆ ಕುಳಿತರೆ ಅದು ಅಸ್ತಿತ್ವದಲ್ಲಿರುವುದಾದರೂ ಏತಕ್ಕೆ? ಹಳೇ ರಾಷ್ಟ್ರಸಂಘದ ಅನುಭವವೂ ಇದೇ ರೀತಿಯಿತ್ತು. ಸ್ಪೇನದ ಂತಾದವೀ ಕಲಹದ ಪ್ರಶ್ನೆಯೆದ್ದಾಗ ಅದು ಸ್ಪೇನದ ಮನೆ ವಿಷಯವಾದುದರಿಂದ ಅದರಲ್ಲಿ ಕೈ ಹಾಕಬಾರದೆಂದು ರಾಷ್ಟ್ರಸಂಘವು ನಿರ್ಧರಿಸಿತು. ಆದರೆ ಮುಂದೆ ಎರಡು ವರುಷಗಳಲ್ಲಿಯೇ ಜಾಗತಿಕ ಮಹಾಯುದ್ಧವು ಪ್ರಾರಂಭವಾಯಿತೆಂಬುದನ್ನು ಮರೆಯಬಾರದು" ಎಂದವರು ಹೇಳಿದರು.

## ಬ್ರಿಟನ್ ' ನಿರ್ದೋಷಿ "

ಯುಕ್ರೇನಿಯದ ಸೂಚನೆಗೆ ಭದ್ರತಾಮಂಡಲದ ಹನ್ನೊಂದು ಸದಸ್ಯರಲ್ಲಿ ಏಳು ಮತಗಳಾದರೂ ಬೇಕು. ಆದರೆ ಅಷ್ಟು ದೊರೆಯಲಿಲ್ಲ. ಫ್ರಾನ್ಸ, ಅಮೇರಿಕ, ಆಸ್ಟ್ರೇಲಿಯ ಎಲ್ಲ ರಾಷ್ಟ್ರಗಳ ವಿರೋಧ ಆ ಸೂಚನೆಗೆ. ಬ್ರಿಟನ ನಿರ್ದೋಷಿಯೆಂದು ಅವರ ಮತ. ಚೀನದ ವೆಲ್ಲಿಂಗ್ಟನನೂ ಕೂಪ ಮಂಡೂಕ. ಸಮಿತಿಯನ್ನು ಕಳಿಸುವುದಕ್ಕೆ ಅಭ್ಯಂಕರವಿಲ್ಲವೆಂದಷ್ಟೇ ಹೇಳಿದರು. ಗಟ್ಟಿ ಮಾತನಾಡುವ ಧೈರ್ಯವಿಲ್ಲ. ಏಶಿಯದ ರಾಷ್ಟ್ರಗಳಲ್ಲಿ ಭದ್ರತಾಮಂಡಲದಲ್ಲಿ ಚೀನ ಆಸ್ಟ್ರೇಲಿಯಾಗಳಿಗೆ ಸ್ಥಾನ. ಆಸ್ಟ್ರೇಲಿಯವು ಬಿಳಿ ಜನರ ನಾಡು. ನೀರಿಗಿಂತ ರಕುತ ಸಂಬಂಧ ಬಲ. ಡಚ್ ಶಿಬಿರ

ವನ್ನು ಅದು ಬಿಡುವಹಾಗಿಲ್ಲ. ಚೀನವೇ ಸಾಮ್ರಾಜ್ಯವಾದಿಗಳನ್ನು ಭಂಗಿಸಬೇಕಾಗಿತ್ತು. ಆದರೆ ಅದಕ್ಕೆ ಬ್ರಿಟನ ಅಮೇರಿಕೆಗಳ ಸಾಲ, ಸಹಾಯಗಳ ಹಂಗು.

## ಇಜಿಪ್ತದ ಮಧ್ಯಮಾರ್ಗ

ಕೊನೆಗೆ ಇಜಿಪ್ತ ಮಧ್ಯಮಾರ್ಗವೊಂದನ್ನು ಸೂಚಿಸಿತು. ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕಲು ಬ್ರಿಟಿಶರು ತಮ್ಮ ಸೇನೆಯನ್ನು ಉಪಯೋಗಿಸಬಾರದು. ಡಚ್-ಇಂಡೋನೇಶಿಯನ್ ಮಾತುಕತೆ ಒಂದು ವೇಳೆ ಅಯಶಸ್ವಿಯಾದರೆ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಲು ಭದ್ರತಾ ಮಂಡಲಕ್ಕೆ ಅಧಿಕಾರವಿರಬೇಕು ಎಂದದು ಹೊಸ ಗೊತ್ತುವಳಿ ಮಂಡಿಸಿತು. ಈ ಸೂಚನೆ ರಶಿಯದ ಮನಸ್ಸಿಗೂ ಬಂತು. ಈ ಗೊತ್ತುವಳಿ ಸ್ವೀಕರಿಸಲ್ಪಟ್ಟಿತು. ತಾತ್ಕಾಲಿಕವಾಗಿ ಈ ಪ್ರಶ್ನೆಯನ್ನು ಮೂಲೆಗೊತ್ತಿದರು. ಯುಕ್ರೇನಿಯದ ಸೂಚನೆ ಮಾನ್ಯವಾಗಲಿ ಆಗದಿರಲಿ ಅದಕ್ಕೆ ಇಂಡೋನೇಶಿಯ ಹಾಗೂ ಪರಾಧೀನ ಜನ ಋಣಿಗಳು. ಪರತಂತ್ರ ಜನರ ಪ್ರಶ್ನೆ ಅಂತರರಾಷ್ಟ್ರೀಯ ಸ್ವರೂಪ ತಾಳಿದುದು ಇದೇ ಮೊದಲು. ಜಗತ್ತಿನ ಗಮನವೇ ಈಗ ಏಶಿಯದ ಕಡೆ ತಿರುಗುವಂತಾಯಿತು. ಸಾಮ್ರಾಜ್ಯವಾದಿ ಬ್ರಿಟನ ಅಂತರರಾಷ್ಟ್ರೀಯ ನ್ಯಾಯಸ್ಥಾನದಲ್ಲಿ ಅಪರಾಧಿಯಾಗಿ ನಿಂತಿತು. ಅನೇಕ ಶತಮಾನಗಳಿಂದ ಪಾಶ್ಚಾತ್ಯ ಸಾಮ್ರಾಜ್ಯವಾದಿಗಳು ಏಶಿಯದಲ್ಲಿ ರಾಜ್ಯ ರಾಜ್ಯಗಳನ್ನೇ ನುಂಗಿ ಹೊಟ್ಟೆ ಬೆಳಸಿಕೊಂಡರು. ಇದು ಅನ್ಯಾಯ, ಅಪರಾಧ, ಅತ್ಯಾಚಾರ, ಅನೀತಿ, ಅನುರೀವೃತ್ತಿ, ಅಮಾನುಷ ವರ್ತನೆಯೆಂದು ಬೊಟ್ಟುಮಾಡಿ ತೋರಿಸಲು ಯಾರಿಗೂ ಧೈರ್ಯವಿರಲಿಲ್ಲ. ಹಾಗೆ ಹೇಳಿದವರಿಗೆ ಗತಿಗಾಣಿಸಿ ಬಿಡುತ್ತಿದ್ದರು. ಈಗ ಆ ಧೈರ್ಯ ಬಂದುದು ಜಗತ್ತಿನ ಶುಭಚಿಹ್ನೆ. ಏಶಿಯದ ಭಾಗ್ಯೋದಯದ ಕೋಳಿ ಕೂಗಿದಂತೆಯೇ ಸರಿ !

## ಡಚ್ಚರ ಹೊಸ ಯೋಜನೆ

ರಾಷ್ಟ್ರಸಂಘದಲ್ಲಿ ಇಂಡೋನೇಶಿಯದ ಪ್ರಶ್ನೆ ಬಗ್ಗೆ ಚರ್ಚೆ ನಡೆಯುತ್ತಿದ್ದಾಗಲೇ ಡಚ್ ವಾಯಿಸರಾದ ಡಾ. ಮೂಕರು ಹಾಲಂಡದ

ಹೊಸ ಯೋಜನೆಯನ್ನು ಹೇಗ್‌ದಿಂದ ಬಟಾವಿಯದ ವರೆಗೆ ಹೊತ್ತು ತಂದರು. ಮಧ್ಯಸ್ಥಿಕೆ ಮಾಡುವುದಕ್ಕಾಗಿ ಬ್ರಿಟಿಶ ಸರಕಾರವು ಸರ್ ಆರ್ಚಿಬಲ್ಡ್ ಕೆರ್‌ರವರನ್ನು ವಿಶೇಷ ರಾಯಭಾರಿಯನ್ನಾಗಿ ನೇಮಿಸಿ ಇಂಡೋನೇಶಿಯಕ್ಕೆ ಕಳಿಸಿತು. ಈ ಯೋಜನೆಯಲ್ಲಿ ಏಳು ಮುಖ್ಯ ಸೂಚನೆಗಳಿವೆ. ಡಚ್ ಕಾನೂನವೆಲ್ಲ ತದಲ್ಲಿ ಇಂಡೋನೇಶಿಯಕ್ಕೆ "ಸಾಮಂತ ಸ್ವರಾಜ್ಯ" ಸ್ಥಾನಮಾನ ಮೊದಲಿನದು. ಅದನ್ನು ಈಗಲೇ ಮನ್ನಿಸಲು ಡಚ್ಚರು ಸಿದ್ಧತೆ ತೋರಿಸಿರುವರು. ಇನ್ನು, ಇಂಡೋನೇಶಿಯನ್ನರಿಗೆ ಸ್ವಯಂನಿರ್ಣಯ ಅಧಿಕಾರವನ್ನು ಕೊಡಲಾಗಿದೆ. ಆದರೆ ಆ ಅಧಿಕಾರವನ್ನು ಉಪಯೋಗಿಸುವುದು ಈಗಲೇ ಅಲ್ಲ. ಆ ಸಾಮರ್ಥ್ಯ ಈಗಾಗಲೇ ಬಂದಿಲ್ಲವೆಂದು ಡಚ್ಚರ ಅಭಿಪ್ರಾಯ. ಆಶಕ್ತಿ ಬರುವ ವರೆಗಿನ ಕಾಲದಲ್ಲಿ ಒಂದು ತಾತ್ಕಾಲಿಕ ವ್ಯವಸ್ಥೆ ಮಾಡಲು ಡಚ್ಚರ ಸೂಚನೆ. ಈ ತಾತ್ಕಾಲಿಕ ವ್ಯವಸ್ಥೆ ಡಚ್ ವಾಯಿಸರಾಯರ ಅಧೀನ ಮಂತ್ರಿಮಂಡಳ ರಚಿಸುವುದೇ ಆಗಿದೆ. ಡಚ್ ವಾಯಿಸರಾಯರಿಗೆ ವಿಶೇಷಾಧಿಕಾರಗಳೂ ಇವೆ. ಈ ಕಾಲದಲ್ಲಿ ದೇಶದ ಪುನರ್ರಚನೆ, ಆರ್ಥಿಕ ಅಭಿವೃದ್ಧಿ, ನಿರಕ್ಷರತೆಯ ಉಚ್ಚಾಟನೆ ಮುಂತಾದ ದೇಶೋನ್ನತಿಯ ಕಾರ್ಯಗಳನ್ನು ಕೈಕೊಳ್ಳಲಾಗುವುದು. ಈ ತಾತ್ಕಾಲಿಕ ವ್ಯವಸ್ಥೆ ಎಷ್ಟು ದೀರ್ಘಕಾಲ? ಅದು ನಿಶ್ಚಯವಾಗಿ ತಿಳಿದಿಲ್ಲ. ೨೫ ವರುಷಗಳಿರಬಹುದೆಂದು ಶಹರೀರರು ಕೊಟ್ಟ ಒಂದು ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಡಚ್ಚರ ಯೋಜನೆ ಹೆಚ್ಚು ಕಡಿಮೆ ಲಂಡನ ಟಂಕಸಾಲೆಯಲ್ಲಿ ತಯಾರಾದ ನಾಣ್ಯವೇ ಸರಿ. ಬ್ರಿಟಿಶ ಮುತ್ಸದ್ದಿಗಳೊತ್ತಿದ ಮುದ್ರೆ ಎದ್ದು ಕಾಣುತ್ತಿದೆ ಅದರಲ್ಲಿ.

## ಇಂಡೋನೇಶಿಯನ್ನರ ಪ್ರತಿಕ್ರಿಯೆ

ಡಾ. ಮೂಕರು ಪ್ರಜಾರಾಜ್ಯದ ಪ್ರಧಾನಮಂತ್ರಿ ಶಹರೀರರಿಗೆ ಈ ಯೋಜನೆಯನ್ನೊಪ್ಪಿಸಿರುವರು. "ಈಗ ಡಚ್ಚರೇನು ಕೊಡುವರು? ೨೫ ವರುಷಗಳ ಮೇಲಿನ ಮಾತು ಬೇಡ" ಎಂದು ಶಹರೀರರು ಒಮ್ಮೆ ಪತ್ರಿಕೋದ್ಯಮಿಗಳ ಸಭೆಯಲ್ಲಿ ನುಡಿದರು. ಇಂಡೋನೇಶಿಯನ್ನರಿಗೆ ಈಗಾಗಲೇ ಸ್ವಾತಂತ್ರ್ಯ ಬೇಕಾಗಿದೆಯೆಂದು ಆ ಮಾತಿಗೆ ಅರ್ಥವಾಗು

ತ್ತದೆ. ೨೫ ವರುಷಗಳ ಅವಧಿಯು ಬಹಳ ದೀರ್ಘವಾಯಿತೆಂದು ಜನರ ಅಭಿಪ್ರಾಯ. ವಾಯಿಸರಾಯರ ವಿಶೇಷಾಧಿಕಾರದ ಬಗ್ಗೆ ಕೂಡಾ ಇಂಡೋನೇಶಿಯನ್ನರ ಸಂಶಯ. ಒಂದಿಲ್ಲದಿದ್ದರೆ ಇನ್ನೊಂದು ರೂಪದಿಂದ ಡಚ್ ಸಂಕೋಲೆಗಳು ತಪ್ಪುವಂತಿಲ್ಲವೆಂದು ಅವರು ಕಂಡುಕೊಂಡಿರುವರು. ಬಟಾವಿಯದಲ್ಲಿ ನಡೆದ ಮಾತುಕತೆಯು ವಿಫಲವಾಯಿತು. ಕೊನೆಗೆ ಬಿಕ್ಕಟ್ಟನ್ನು ಬಿಡಿಸುವ ಯತ್ನವನ್ನು ಇಲ್ಲಿಗೇ ನಿಲ್ಲಿಸದೆ ಇಂಡೋನೇಶಿಯನ ಶಿಷ್ಟಮಂಡಳವನ್ನು ಹಾಲಂಡಿಗೆ ಆಮಂತ್ರಿಸಿದರು. ಪ್ರಜಾರಾಜ್ಯವು ಅದಕ್ಕೂ ಸಮ್ಮತಿಸಿ ಪ್ರತಿನಿಧಿಗಳನ್ನು ಕಳಿಸಿತು. ಡಚ್ ಅಧಿಕಾರಿಗಳು ಪುನಃ ಬ್ರಿಟಿಶ ಮುಖಂಡರ ಸಲಹೆ ಪಡೆದುಕೊಂಡು ಆ ಮೇಲೆ ಇಂಡೋನೇಶಿಯನ ಶಿಷ್ಟಮಂಡಳದ ಸದಸ್ಯರೊಡನೆ ಮಾತುಕತೆ ಬೆಳೆಸಿದರು. ಅದು ಕೂಡಾ ಯಶಸ್ವಿಯಾಗಿಲ್ಲ. ಇಂಡೋನೇಶಿಯನ್ ಪ್ರಜಾರಾಜ್ಯವನ್ನು ಮನ್ನಿಸಲು ಡಚ್ ಸರಕಾರವು ಇನ್ನೂ ಸಿದ್ಧವಿಲ್ಲ. ಈಗ ಇಂಡೋನೇಶಿಯಾದಲ್ಲಿ ಸಂಯುಕ್ತರಾಜ್ಯ ಪದ್ಧತಿಯನ್ನು ಜಾರಿಗೆ ತರಲು ಡಚ್ಚರು ಮತ್ತೊಂದು ಯೋಜನೆ ತಯಾರಿಸಿದ್ದಾರೆ.

## ಪೂರ್ವೇತಿಹಾಸ

ಹಿಂದುಸ್ತಾನಕ್ಕೂ ಇಂಡೋನೇಶಿಯಕ್ಕೂ ನಿಕಟ ಸಂಬಂಧವುಂಟು. ಸಾವಿರಾರು ವರುಷಗಳ ಹಿಂದೆ ಹಿಂದೀಯರು ಈ ದೇಶಕ್ಕೆ ವಲಸೆ ತೆರಳಿದರು. ಇಂದಿನ ಜನರ ಪೂರ್ವಜರು ಹಿಂದೀಯರು. ಹಿಂದೀಯರು ವಲಸೆ ಹೋದುದು ಸಿರಿ ಸಂಪತ್ತಿನ ಮೋಹದಿಂದಲೇ. ದೇಶ ಬಹಳ ಫಲವತ್ತಾದುದು. ಅಪಾರ ಚಿನ್ನ, ಮುತ್ತು, ರತ್ನ ಅವರಿಗೆ ಲಭಿಸುತ್ತಿತ್ತು. ಇಂಡೋನೇಶಿಯಕ್ಕೆ ಅವರು ಕೊಟ್ಟ ಹೆಸರು "ಸುವರ್ಣ ಭೂಮಿ". ಮಹಾಭಾರತ ಕಾಲದಲ್ಲಿ ಹಿಂದೀಯರು ಜಾವಾದಲ್ಲಿ ಬಂದು ನೆಲೆಸಿದ್ದರೆಂದು ಜಾವಾದ ದಂತಕಥೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ. ಮಹಾಭಾರತ ಕಾಲದ

ಸಖಾ ವಂಶದವರೂ ಗುಳಿಕಟ್ಟಿಕೊಂಡು ಬಂದರಂತೆ. ಕಳಿಂಗ ದೇಶದ ದೊರೆ ೨೦ ಸಾವಿರ ಕುಟುಂಬಗಳನ್ನು ಕಳಿಸಿದನೆಂದು ಇನ್ನೊಂದು ದಂತ ಕಥೆಯೂ ಇದೆ. ಈ ಸಖಾವಂಶದ ಅರಸರು ೪೦೦ ವರುಷಗಳ ವರೆಗೆ ಆಳಿದರು. ಆ ಮೇಲೆ ಅಸ್ತಿನಾ ರಾಜ್ಯ ತಲೆ ಎತ್ತಿತು. ಅವರ ಮೊದಲನೇ ಅರಸ ಪುಲಸಾರ. ಅವನ ಮಗ ವ್ಯಾಸ. ಪಾಂಡುನಾಥ ದೊರೆ ಅವನ ಪುತ್ರ. ಮಹಾಭಾರತದಲ್ಲಿ ಕೂಡಾ ಹಸ್ತಿನಾಪುರ, ಪರಾಶರ, ವ್ಯಾಸ, ಪಾಂಡುರಾಜ ಎಂಬ ಹೆಸರುಗಳಿವೆ. ಅದೇನಿದ್ದರೂ ಕ್ರಿಸ್ತಶಕದ ಆರಂಭದ ಇತಿಹಾಸ ಬಹಳ ತಿಳಿಯಿದೆ. ಕ್ರಿ.ಶ. ೧೩೨ರಲ್ಲಿ ದೇವವರ್ಮ ಅರಸ ಚೀನಕ್ಕೆ ರಾಯಭಾರಿಯನ್ನು ಕಳಿಸಿದ್ದ. ಬೋರ್ನಿಯೋದ ಕುಟೇಯಿ ಜಿಲ್ಲೆಯಲ್ಲಿ ಕೆಲವು ಶಿಲಾಲೇಖಗಳು ಲಭಿಸಿವೆ. ಭಾಷೆ ಸಂಸ್ಕೃತ. ಕೌಂಡಿನ್ಯ ಅರಸನ ಮೊಮ್ಮಗ ಮೂಲವರ್ಮ ‘ ಬಾಹು ಸುವರ್ಣಕ ’ ಯಜ್ಞವನ್ನು ಮಾಡಿ ೨೦ ಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದ ಸಂಗತಿ ಅದರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದು ನಡೆದುದು ಕ್ರಿ. ಶ. ೪ನೇ ಶತಮಾನ ದಲ್ಲಿ. ಅಜಂತಾ ಗುಹೆಗಳಂತೆ ಬೋರ್ನಿಯೋದ ಕೋಟಂಗ ಗುಹೆಯೂ ಜಗತ್ಪ್ರಸಿದ್ಧ. ಶಿವ, ಗಣೇಶ, ನಂದಿ, ಬ್ರಹ್ಮ ಮುಂತಾದವರ ಸುಂದರ ಶಿಲಾಮೂರ್ತಿಗಳಿವೆ ಅಲ್ಲಿ. ಬಾಲಿ ದ್ವೀಪದ ಅರಸರೂ ಕೌಂಡಿನ್ಯ ವಂಶದವರು. ಶುದ್ಧೋದನನ ರಾಣಿ ಬಾಲಿ ರಾಜಪುತ್ರಿ. ಈ ಪೌರಾಣಿಕ ಕಾಲದ ಮಾತು ಒತ್ತಟ್ಟಿಗಿರಲಿ. ಕ್ರಿ. ಶಕವು ಆರಂಭವಾದಾಗಲೂ ಇಂಡೋನೇಶಿಯ ನಾಗರಿಕತೆ ಹೊಂದಿದ ದೇಶವಾಗಿತ್ತು. ಕಲೆ, ಕೈಗಾರಿಕೆ, ಕಾವ್ಯ, ಕಾಳಗ, ರಾಜಕಾರಣ, ರಾಜ್ಯಪರಿಷ್ಕರಣಗಳಲ್ಲಿ ಅವರು ಉಚ್ಚಸ್ಥಿತಿಗೆ ಮುಟ್ಟಿದ್ದರು.

## ಶ್ರೀವಿಜಯ ಸಾಮ್ರಾಜ್ಯ

ಕ್ರಿ. ಶಕ ೪ನೇ ಶತಮಾನದಲ್ಲಿ ಇಂಡೋನೇಶಿಯದಲ್ಲಿ ಶ್ರೀವಿಜಯ ಸಾಮ್ರಾಜ್ಯ ತಲೆ ಎತ್ತಿತು. ೧೪ನೇ ಶತಮಾನದವರೆಗೆ ಅದು ಬಿದ್ದು ಹೋಗಲಿಲ್ಲ. ೪ರಿಂದ ೮ ಶತಮಾನಗಳವರೆಗೆ ಅದರ ವೈಭವದ ಕಾಲ.

ಮತ್ತೆ ಅದು ಕರಗುತ್ತ ಬಂದು ನೆರೆಹೊರೆಯ ಪ್ರಬಲ ಅರಸರ ಸಾಮಂತ ರಾಜ್ಯವಾಗಿ ಉಳಿಯಿತು. ಸುಮಾತ್ರ ದ್ವೀಪದಲ್ಲಿರುವ ಶ್ರೀ ವಿಜಯ (ಇಂದಿನ ಪಾಲೆಂಬಾಂಗ) ಅವರ ರಾಜಧಾನಿ. ಮಲಯಾ, ಬೋರ್ನಿಯೋ, ಜಾವಾದ ಪಶ್ಚಿಮ ಭಾಗ, ಫಿಲಿಪ್ಪಾಯಿನ್ಸದ ದಕ್ಷಿಣ ಪ್ರದೇಶ, ಎಲ್ಲ ವಿಜಯ ಸಾಮ್ರಾಜ್ಯದ ಅಂಗಗಳು. ಶ್ರೀವಿಜಯ ಸಾಮ್ರಾಜ್ಯವು ನೌಕಾಪಡೆ, ವ್ಯಾಪಾರ, ಶಿಕ್ಷಣ ಮುಂತಾದವುಗಳಿಗೆ ಬಹಳ ಪ್ರೋತ್ಸಾಹ ಕೊಡುತ್ತಿತ್ತು. ನೂರಾರು ದ್ವೀಪಗಳಿಂದ ಕೂಡಿದ ಸಾಮ್ರಾಜ್ಯವಾಗಿದ್ದುದರಿಂದ ಅವುಗಳೊಡನೆ ಸಂಬಂಧವಿಟ್ಟುಕೊಳ್ಳಲು ಹಾಗೂ ಅವುಗಳ ರಕ್ಷಣೆ ಮಾಡಲು ನೌಕಾಪಡೆ ಅತಿ ಅವಶ್ಯವೇ ಸರಿ. ವ್ಯಾಪಾರೀ ಹಡಗಗಳನ್ನೂ ಕಟ್ಟುವ ವ್ಯವಸ್ಥೆಯಿದ್ದಿತು.

## ಬುದ್ಧ ಧರ್ಮ

ಶ್ರೀವಿಜಯ ಸಾಮ್ರಾಜ್ಯದ ಕಾಲದಲ್ಲೇ ಎಂದರೆ ೪-೫ನೇ ಶತಮಾನಗಳಲ್ಲೇ ಬುದ್ಧಧರ್ಮ ಇಂಡೋನೇಶಿಯದಲ್ಲಿ ಕಸ್ತೂರಿಯಂತೆ ವ್ಯಾಪಿಸಿತು. ಅಷ್ಟರವರೆಗೂ ಬ್ರಾಹ್ಮಣ ಧರ್ಮಕ್ಕೆ ಪುರಸ್ಕಾರ. ವೈಷ್ಣವ ಮತ್ತು ಶೈವಬ್ರಾಹ್ಮಣ ಧರ್ಮಗಳು ಪ್ರಬಲ. ಬುದ್ಧ ಧರ್ಮದ ಪ್ರಚಾರವಾದಂದಿನಿಂದ ವಿಜಯ ಸಾಮ್ರಾಜ್ಯದಲ್ಲೆಲ್ಲ ಅದೇ ಬೇರೂರಿತು. ಶ್ರೀ ವಿಜಯಪಟ್ಟಣ ಬುದ್ಧ ಧರ್ಮದ ಕೇಂದ್ರವಾಗಿ ಪರಿಣಮಿಸಿತು. ನಲಂದದ ಹಾಗೆ ಶ್ರೀವಿಜಯದಲ್ಲಿ ದೊಡ್ಡ ವಿಶ್ವವಿದ್ಯಾಲಯವೂ ಸ್ಥಾಪಿಸಲ್ಪಟ್ಟಂತೆ ಕಾಣುತ್ತದೆ. ಅಲ್ಲಿದ್ದ ಬುದ್ಧ ವಿದ್ಯಾರ್ಥಿಗಳ ಸಂಖ್ಯೆ ಒಂದು ಸಾವಿರ. ಹಿಂದುಸ್ತಾನಕ್ಕೆ ಧರ್ಮದರ್ಶನಕ್ಕಾಗಿ ತೆರಳುವ ಚೀನಿಯರು ಮತ್ತು ಇಂಡೋನೇಶಿಯನ್ನರು ಶ್ರೀವಿಜಯ ಪಟ್ಟಣದಲ್ಲಿ ಒಂದೆರಡು ವರುಷಗಳವರೆಗೆ ಉಳಿದು ಶಬ್ದವಿದ್ಯ, ಗ್ರಂಥಾಭ್ಯಾಸಗಳನ್ನು ಕಲಿಯುತ್ತಿದ್ದರು. ೭ನೇ ಶತಮಾನದಲ್ಲಿ ನಮ್ಮ ನಲಂದ ವಿಶ್ವವಿದ್ಯಾಲಯದ ಪ್ರೊಫೆಸರ್ ಧರ್ಮಪಾಲ, ವಜ್ರಬೋಧ (ಸಿಲೋನ) ಅಮೋಘವಜ್ರ ಮುಂತಾದವರು ಶ್ರೀವಿಜಯಕ್ಕೆ ತೆರಳಿದ್ದರು.

## ಶೈಲೇಂದ್ರರು

೮ನೇ ಶತಮಾನದಲ್ಲಿ ಶೈಲೇಂದ್ರರು ಸುವರ್ಣ ದ್ವೀಪದ ಒಡೆಯರಾದರು. ಶ್ರೀವಿಜಯ ರಾಜವಂಶದ ಒಂದು ಕುಡಿ ಈ ವಿರಾಟಸ್ವರೂಪ ತಾಳಿತೆಂದೆನ್ನುವವರುಂಟು. ಅದೇನಿದ್ದರೂ ವಿಜಯ ಸಾಮ್ರಾಜ್ಯ ಕ್ಷೀಣಿಸುತ್ತ ಬಂದುದರಿಂದ ಶೈಲೇಂದ್ರರ ಅಧಿಕಾರ ಹೆಚ್ಚಿತು. ಮಲಯದ ಸ್ವಲ್ಪಭಾಗ, ಸುಮಾತ್ರ, ಜಾವಾ ಹಾಗೂ ಇನ್ನಿತರ ಹಲವು ದ್ವೀಪಗಳು ಶೈಲೇಂದ್ರ ರಾಜ್ಯಕ್ಕೆ ಸೇರಿದ್ದುವು. ಕಾಂಬೋಜ, ಚಂಪಾ ( ಇಂಡೋಚೀನ ) ಅರಸರೂ ಶೈಲೇಂದ್ರರ ಸಾಮಂತ ಅರಸರಾಗಿದ್ದರು. ನೂರಾರು ದ್ವೀಪಗಳನ್ನೆಲ್ಲ ಒಂದೇ ಧ್ವಜದಡಿ ಒಟ್ಟುಗೂಡಿಸಿದ ಯಶಸ್ಸು ಈ ವಂಶದ ರಾಜರಿಗೆ ಸಲ್ಲುತ್ತದೆ. ೪೦೦ ವರುಷಗಳವರೆಗೆ ಶೈಲೇಂದ್ರರದೇ ಕಾರಭಾರ. ಚಂಡಿಕಲಶನ ಮತ್ತು ಬಾರಬುದುರ ಬುದ್ಧಗೋಪುರಗಳನ್ನು ಕಟ್ಟಿದುದು ಅದೇ ಕಾಲಕ್ಕೆ. ಆ ಕೆತ್ತನೆ ಕೆಲಸದಲ್ಲಿ ಶಿಲ್ಪಕಲೆ ಪರಿಪೂರ್ಣತೆಯನ್ನು ಹೊಂದಿದೆ. ಈಗಲೂ ಆ ಗುಡಿ ಗೋಪುರದ ಶಿಲ್ಪ ಪ್ರತಿಮೆಗಳನ್ನು ನೋಡಿ ನಾಗರಿಕಜಗತ್ತು ಬೆರಗಾಗುತ್ತದೆ. ಹಳೇಬೀಡು, ವಿಜಯನಗರ, ಮೂಡುಬಿದಿರೆಯ ಬಸದಿಗಳನ್ನು ಕಂಡು ಕಣ್ಣು ಬಿಡುವಂತೆ. ವ್ಯಾಪಾರ, ಶಿಕ್ಷಣ, ನೌಕಾಪಡೆಯ ರಚನೆ ಇವೂ ಬಹಳ ಮುಖ್ಯವಾಗಿದ್ದುವು.

## ಚೋಳರೊಡನೆ ಯುದ್ಧ

ದಕ್ಷಿಣ ಹಿಂದುಸ್ತಾನದಲ್ಲಿ ಪ್ರಬಲಕ್ಕೆ ಬಂದ ಚೋಳರು ಇಂಡೋನೇಶಿಯದ ಮೇಲೆ ದಂಡಯಾತ್ರೆ ನಡೆಸಿದರು. ಯುದ್ಧ ನಡೆದುದು ೧೧ನೇ ಶತಮಾನದಲ್ಲಿ. ಚೋಳ ಅರಸರೂ ದೊಡ್ಡ ನೌಕಾಪಡೆಯನ್ನು ಕಟ್ಟಿದ್ದರು. ಸುವರ್ಣ ದ್ವೀಪಗಳೊಡನೆ ವ್ಯಾಪಾರವೂ ಸಾಗಿತ್ತು. ಶೈಲೇಂದ್ರರೂ ಚೋಳರೂ ಪರಸ್ಪರ ಸ್ನೇಹ ಸೌಹಾರ್ದದಿಂದಲೇ ಇದ್ದರು. ಶೈಲೇಂದ್ರ ದೊರೆ ಚೂಡಾಮಣಿವರ್ಮ ನಾಗಪಟ್ಟಣದಲ್ಲಿ ಒಂದು ಬುದ್ಧವಿಹಾರವನ್ನೂ ಕಟ್ಟಿಸಿದ (೧೦೦೫). ಆದರೆ ಈ ಸ್ನೇಹ ಬಹಳ ಕಾಲ

ಬಾಳದೆ ಹೋಯ್ತು. ರಾಜೇಂದ್ರ ಚೋಳ ದೊಡ್ಡ ನೌಕಾಪಡೆಯನ್ನು ಕಳಿಸಿ ಶೈಲೇಂದ್ರ ರಾಜ್ಯಕ್ಕೆ ಸೇರಿದ್ದ ಮಲಯಾದ ಮೇಲೆ ಪೆಟ್ಟು ಹಾಕಿದ. ದಂಡಯಾತ್ರೆಯು ಮೊದಲು ಕಳಿಂಗ (ಓಡಿಸಾ) ಮತ್ತು ಬಂಗಾಲದ ಕರಾವಳಿ ಪ್ರದೇಶವನ್ನು ಚೋಳರು ಆಕ್ರಮಿಸಿದ್ದರು. ಅದರಿಂದ ಶ್ರೇಷ್ಠ ಬಂದರಗಳೂ ಹಡಗಗಳೂ ದೊರೆತವು ಅವರಿಗೆ. ಚೋಳರ ನೊಗವನ್ನು ಕಿತ್ತೊಗೆಯಲು ಶೈಲೇಂದ್ರರೂ ಒಂದು ಶತಮಾನದ ವರೆಗೆ ಹೋರಾಡಿದರು. ಕೊನೆಗೆ ಚೋಳರೇ ಈ ಅಪಾಯಕರ ಸಾಹಸವನ್ನು ಬಿಟ್ಟುಕೊಟ್ಟರು. ಅದೇನಿದ್ದರೂ ಚೋಳರಿಂದ ಶೈಲೇಂದ್ರರಿಗೆ ಆಘಾತವಾಯಿತು. ಶೈಲೇಂದ್ರ ಸಾಮ್ರಾಜ್ಯ ಜರಿದು ಬೀಳದೆ ಇದ್ದರೂ ಬಲಗುಂದಿ ಕೊನೆಗೆ ಪರಕೀಯರ ಒದೆತಕ್ಕೆ ಅದು ಬಿದ್ದು ಹೋಯಿತು.

## ಜಾವಾದ ಕೆಲವು ತುಂಡರಸರು

ಪುರಾಣವರ್ಮ ದೊರೆ ಪಶ್ಚಿಮ ಜಾವಾದಲ್ಲಿ ೫ ನೇಯ ಶತಮಾನದಲ್ಲೇ ಒಂದು ಚಿಕ್ಕ ರಾಜ್ಯಕಟ್ಟಿ ಆಳುತ್ತಿದ್ದ. ವಿಜಯ ಸಾಮ್ರಾಜ್ಯದ ಕೊನೆಗೆ ಇದು ಶೈಲೇಂದ್ರರ ಸಾಮಂತ ರಾಜ್ಯವಾಗಿಯೇ ಇತ್ತು. ೧೮ ನೇಯ ಶತಮಾನದಲ್ಲಿ ಮಧ್ಯಜಾವಾದ ಮತರಂದಲ್ಲಿ ಮಾತರಂ ರಾಜ್ಯ ಮೆಲ್ಲಗೆ ರೂಪಧರಿಸಿತು. ಸನಾಹ ದೊರೆ ಅದರ ಆಚಾರ್ಯ ಪುರುಷ. ಅವನ ಮಗ ಸಂಜಯ ಬಾಲಿ ಹಾಗೂ ಉಳಿದ ಜಾವಾವನ್ನು ಗೆದ್ದುಕೊಂಡ. ಶೈಲೇಂದ್ರರು ಜಾವಾವನ್ನು ಆಕ್ರಮಿಸಿದರೂ ಕೊನೆಗೆ ಮಾತರಂ ವಂಶದ ಧರ್ಮೋದಯ ಮಹಾಶಂಭು ದೊರೆ ಸ್ವಾತಂತ್ರ್ಯ ಸಂಪಾದಿಸಿದ. ಅವನ ಮಗನೇ ದಕ್ಷೋತ್ತಮ. ಶೈಲೇಂದ್ರವಂಶದ ಸಿಂಧಕ ದೊರೆ ಮರಣಹೊಂದಿದ ಮೇಲೆ ಅವನ ಮಗಳು ಶ್ರೀ ಇಶಾನತುಂಗ ವಿಜಯ ಪಟ್ಟಕ್ಕೆ ಬಂದಳು. ಅವಳ ಮಗ ವೀರಲಂಗನ ಕಾಲದಲ್ಲಿ (೧೦೩೦) ಕಳಿಂಗರು, ಸಿಂಹಳೀಯರು, ಕನ್ನಡಿಗರು, ಚೋಳರು, ಕಾಂಬೋದಿಯನ್ನರು ವ್ಯಾಪಾರಕ್ಕಾಗಿ ಬರುತಿದ್ದರು. ವೀರಲಂಗ ತನ್ನ ರಾಜ್ಯವನ್ನು ತನ್ನಿಬ್ಬರು ಪುತ್ರರಿಗೆ ಹಂಚಿಕೊಟ್ಟ. ಅವರಿಂದ ಕಾದಿರಿ, ಸಿಂಹಸರಿ ತುಂಡುರಾಜ್ಯಗಳು ತಲೆ

ಎತ್ತಿದುವು. ಈ ಚಿಕ್ಕ ಚಿಕ್ಕ ಅರಸರೇ ತಂತಮ್ಮೊಳಗೆ ಬಡಿದಾಡಿಕೊಂಡರು. ಬಲಿಷ್ಠ ರಾಜ್ಯವೊಂದೂ ಇರಲಿಲ್ಲ ಸ್ವಲ್ಪಕಾಲದವರೆಗೆ.

## ಮೊಂಗೋಲರ ದಂಡಯಾತ್ರೆ

ಜಾವಾದ ರಾಜಪುತ್ರಿ ತಾಪಸಿಯನ್ನು ಚಂಪಾಕ್ಕೆ ಲಗ್ನಮಾಡಿ ಕೊಟ್ಟಿದ್ದರು. ಅವಳ ಗಂಡ ೪ ನೇ ಜಯವರ್ಮ ಚೀನದ ಕಬುಲಾಯಿ ಖಾನನ ಸಾಮಂತ ದೊರೆ. ಆದರೆ ಮದುವೆಯಿಂದ ಜಾವಾ ಮತ್ತು ಚಂಪಾ (ಇಂಡೋಚೀನ) ರಾಜ್ಯಗಳ ಸಂಬಂಧ ನೋಡಿ ಕಬುಲಾಯಿ ಖಾನನಿಗೆ ಅಸೂಯೆ. ಜಾವಾ ಕೂಡಾ ತನ್ನ ಸಾರ್ವಭೌಮತ್ವವನ್ನು ಮನ್ನಿಸಬೇಕೆಂದು ಅವನ ಹಟ. ಜಾವಾದ ಕೃತನಾಗರ ದೊರೆ ಅದನ್ನು ಕಿವಿಯಲ್ಲಿ ಹಾಕಿಕೊಳ್ಳಲೇ ಇಲ್ಲ. ಆದರೆ ಕೊನೆಗೆ ಕಬುಲಾಯಿ ಖಾನನ ಕಾಟ ತಾಳಲಾರದೆ ರಾಯಭಾರಿಯ ಮೂಗು ಕೊಯ್ದು ಅಪಮಾನ ಮಾಡಿ ಕಳಿಸಿದ. ಕಬುಲಾಯಿಖಾನ ಕಿಡಿಕಿಡಿಯಾದ. ಜಾವಾದ ಮೇಲಿನ ದಂಡಯಾತ್ರೆಗೆ ಅಪಾರ ಸಿದ್ಧತೆ ನಡೆಸಿದ. ದೇಶದಲ್ಲಿ ಕಾದಿರಿ ಮತ್ತು ಕೃತನಾಗರನ ಮಂತ್ರಿಗಳೇ ಒಳಸಂಚು ಹೂಡಿ ಅರಸನ ಕೊಲೆ ಮಾಡಿದರೂ ಕಬುಲಾಯಿಖಾನನ ಸಿಟ್ಟು ತಣಿಯಲಿಲ್ಲ. ೧೨೯೩ ರಲ್ಲಿ ಅವನ ಸೈನಿಕರು ನೌಕಾಪಡೆಯ ಮೂಲಕ ತುಬಾನ ಮತ್ತು ಸೌರಬಾಯಗಳಲ್ಲಿಳಿದರು. ಕೃತನಾಗರನ ಕೊಲೆ ಮಾಡಿಸಿದ ಕಾದಿರಿ ಮತ್ತೆ ರಾಜ್ಯ ಸ್ಥಾಪಿಸಲೆತ್ನಿಸಿದ. ಜಯತುಂಗ ಚೀನಿಯರನ್ನು ಪ್ರತಿಭಟಿಸಿ ಪ್ರಾಣವನ್ನು ಕಳೆದುಕೊಂಡ. ಚೀನಿಯರು ಸ್ವಲ್ಪಬಳಲಿ ಬೆಂಡಾದ ಕಾಲಕ್ಕೆ ಸರಿಯಾಗಿ ಕೃತನಾಗರನ ಅಳಿಯ ಶ್ರೀವಿಜಯ ಅವರ ಮೇಲೇರಿ ಹೋದ. ದಂಡೆತ್ತಿ ಬಂದ ೨೪ ನೇ ದಿನವೇ ಕಬುಲಾಯಿಖಾನನ ಸೈನಿಕರು ಸ್ವದೇಶಕ್ಕೆ ಹಿಂತೆರಳಿದರು.

## ಮದಜಾಪಾಹಿತ ಸಾಮ್ರಾಜ್ಯ

ಮಾವನ ಕೊಲೆಗಡುಕನು ಅಳಿದುದರಿಂದಲೂ ವಿದೇಶೀಯರು ಹೊರಟುಹೋದುದರಿಂದಲೂ ಶ್ರೀವಿಜಯ ಸ್ವಲ್ಪ ನಿಶ್ಚಿಂತನಾದ. ತನ್ನ ಮದಜಾಪಾಹಿತ ರಾಜ್ಯದ ಸಂಘಟನೆ ಕಾರ್ಯದಲ್ಲೂ ಅವನಿಗೆ

ಯಶದೊರೆಯಿತು. ಮದಜಾಪಾಹಿತ ಅವನ ರಾಜಧಾನಿ. ಪಟ್ಟಾಭಿಷೇಕ ಮಹೋತ್ಸವದಲ್ಲಿ ಅವನು ಜಯವರ್ಧನನೆಂಬ ಹೆಸರನ್ನಿಟ್ಟುಕೊಂಡ. ಕೃತನಾಗರನ ನಾಲ್ಕು ಪುತ್ರಿಯರನ್ನು ಅವನು ವಿವಾಹವಾಗಿದ್ದ. ಮೂವರಿಗೆ ಮಕ್ಕಳಾಗಲಿಲ್ಲ. ಕೊನೆಯವಳಿಂದ ರಾಜಪುತ್ರಿಯರಿಬ್ಬರು ಜನಿಸಿದರು. ಜಯವರ್ಧನನು ಮಲಯಾ ರಾಜನ ದ್ವಿತೀಯ ಪುತ್ರಿ ಇಂದ್ರೇಶ್ವರಿಯನ್ನೂ ಮದುವೆಯಾದನು. ಅವಳಲ್ಲಿ ಹುಟ್ಟಿದವನೇ ಜಯನಾಗರ. ರಾಜಪುತ್ರನ ಬಾಲ್ಯದಲ್ಲೇ ಅರಸು ಮಡಿದುದರಿಂದ ರಾಣಿ ಗಾಯತ್ರಿದೇವಿ ರಾಜ್ಯಸೂತ್ರವನ್ನು ಹಿಡಿದಳು ಜಯನಾಗರನು ವಯಸ್ಸಿಗೆ ಬಂದ ಬಳಿಕ ತುಬಾನ, ನಂಬಿ, ಕುಟಿ ಮುಂತಾದ ಕಡೆ ದಂಗೆಗಳಾದುವು. ಆದರೆ, ಮದಜಾಹಿತ ಸಾಮ್ರಾಜ್ಯವನ್ನು ಅಲುಗಿಸಲಾಗಲಿಲ್ಲ. ಗಜಮಧ ಜಯನಾಗರನ ಬಹಳ ಸಮರ್ಥ ಮಂತ್ರಿ. ಮಲಯಾ ಹಾಗೂ ಇಂಡೋನೇಶಿಯದ ದ್ವೀಪಗಳಲ್ಲಿ ಜಯನಾಗರನ ಧ್ವಜ ಹಾರಾಡುತಿತ್ತು. ಸಯಾಂ, ಅಯೋಧ್ಯ, ಚಂಪ ಅರಸರು ಜಯನಾಗರನ ಮಿತ್ರರಾಗಿದ್ದರು. ೧೪ ನೇ ಶತಮಾನದಲ್ಲಿ ಬಹಳ ವೈಭವದಿಂದ ಈ ರಾಜ್ಯ ಮೆರೆದಿತು. ಜಂಬೂದ್ವೀಪ, ಕಾಂಬೋಜ, ಚೀನ, ಯವನ, ಕರ್ನಾಟಕ, ಗೌಡ ಮತ್ತು ಸಯಾಂ ದೇಶಗಳಿಂದ ವ್ಯಾಪಾರಿಗಳೂ, ಪಂಡಿತರೂ, ಧರ್ಮಪ್ರಚಾರಕರೂ ಮದಜಾಪಾಹಿತಗೆ ಬಂದು ಹೋಗುತಿದ್ದರು. ಕಂಚಿಯ ಬುಧಾದಿತ್ಯ ಕವಿ ಮದಜಾಪಾಹಿತ ದೊರೆಯ ಭೋಗ ಭಾಗ್ಯವಿಲಾಸ ವೈಭವಗಳನ್ನು ವರ್ಣಿಸಿ ಮಹಾಕಾವ್ಯವೊಂದನ್ನು ಬರೆದ. ಆದರೆ ಕೊನೆಗೆ, ಅರಸು ಮಕ್ಕಳಲ್ಲೇ ಅಂತಃಕಲಹವಾದುದರಿಂದ ಮದಜಾಪಾಹಿತ ಸಾಮ್ರಾಜ್ಯ ಕುಸಿಯಿತು. ವೈಭವ ಕಳೆದುಕೊಂಡಮೇಲೂ ತುಂಡರಸರಾಗಿ ಸ್ವಲ್ಪಕಾಲದವರೆಗೆ ಆಳಿದರು. ಗಿರೀಂದ್ರವರ್ಧನ ರಣವಿಜಯ ಜಾವಾದ ಕೊನೆಯ ಹಿಂದೂ ಅರಸ.

## ಮುಸ್ಲಿಮರ ಪ್ರಾಬಲ್ಯ

ಸುವರ್ಣಭೂಮಿಯಲ್ಲಿ ಹಿಂದೂ ಆಳಿಕೆ ಕೊನೆಗೊಂಡುದುದು ಮುಸ್ಲಿಮರಿಂದ. ಮೊಟ್ಟಮೊದಲು ಸುಮಾತ್ರದ ಪೆರ್ಲಾಕ (೧೨೦೨) ದಲ್ಲಿ ಚಿಕ್ಕ

ಚಿಕ್ಕ ಮುಸ್ಲಿಂ ಪಾಳೆಯಗಾರರು ತಲೆ ಎತ್ತಿದರು. ಅದೇ ಬೆಳೆದು ಬಂದು ಸುಲ್ತಾನ ಮಾಲಿಕ್ ಜಾಹರ್ ಸುಮಾತ್ರದಲ್ಲಿ ಚಿಕ್ಕ ರಾಜ್ಯ ಸ್ಥಾಪಿಸಿದ. (೧೩೪೫) ಮುಂದೆ ಮಲಾಯಾದಲ್ಲಿ ಮಲಕ್ಕಾ ಮುಸ್ಲಿಂ ರಾಜ್ಯ ಬೆಳಕಿಗೆ ಬಂದಿತು. ಸುಮಾತ್ರಾ, ಜಾವಾ ಹಾಗೂ ಇನ್ನಿತರ ದ್ವೀಪಗಳ ಬಂದರಗಳಲ್ಲಿ ಮತಾಂತರ ಕಾರ್ಯವು ಭರದಿಂದ ಸಾಗಿತು. ಹಿಂದುಗಳೇ ಬಹುಜನ ಈ ಧರ್ಮಾನುಯಾಯಿಗಳಾದರು. ಕಾಲಕ್ರಮೇಣ ಉಳಿದ ದ್ವೀಪಗಳಲ್ಲೂ ಮುಸ್ಲಿಂ ತುಂಡರಸರು ಪ್ರಬಲರಾದರು. ಜಾವಾದ ಹಿಂದೂ ಅರಸರೂ ಮುಸ್ಲಿಮರೊಡನೆ ಲಗ್ನಸಂಬಂಧ ಬೆಳೆಸಿದುದರಿಂದಲೂ ರಾಜವಂಶದವರು ಇಸ್ಲಾಂ ಧರ್ಮವನ್ನು ಪುರಸ್ಕರಿಸಿದುದರಿಂದಲೂ ಸ್ವೀಕರಿಸಿದುದರಿಂದಲೂ ಬಹಳ ಬೇಗ ಈ ಧರ್ಮ ವ್ಯಾಪಿಸಿತು. ರಾಜದರ್ಬಾರಿನಲ್ಲಿ ಮುಸ್ಲಿಮರ ಪ್ರಭಾವ ವಿಶೇಷವಾದಾಗ ಅವರು ಅರಸನನ್ನು ತಳ್ಳಿಹಾಕಿದರು. ಮದಜಾಪಾಹಿತ ರಾಜ್ಯ ಬಿದ್ದುಹೋದುದು ಹೀಗೆ. ಕೊನೆಯ ಹಿಂದೂ ದೊರೆ ಗಿರೀಂದ್ರವರ್ಧನನು ಅಧಿಕಾರಕಾಂಕ್ಷಿಗಳಾದ ತನ್ನ ಮುಸ್ಲಿಂ ಬಂಧು ಬಳಗದೊಡನೆ ಹೋರಾಡಿದ. ಅವನಿಗೆ ಸೋಲಿನ ಮೇಲೆ ಸೋಲೊದಗಲು ಕೊನೆಗೆ ೧೫೨೨ರಲ್ಲಿ ಜಾವಾ ತ್ಯಜಿಸಿ ಬಾಲಿ ದ್ವೀಪಕ್ಕೆ ಹೊರಟು ಹೋದನು. ೧೬ನೇ ಶತಮಾನದ ಆರಂಭದಲ್ಲಿ ಬಾಲಿ ಬಿಟ್ಟು ಉಳಿದೆಲ್ಲ ದ್ವೀಪಗಳಲ್ಲಿ ಮುಸ್ಲಿಮರೇ ಬಲಿಷ್ಠರಾದರು.

## ಸ್ವತಂತ್ರ ಬಾಲಿ

ಮದಜಾಪಾಹಿತ ಸಾಮ್ರಾಜ್ಯದ ಅವನತಿಯಿಂದ ಒಂದೂವರೆ ಸಾವಿರ ವರುಷಗಳವರೆಗಿನ ಹಿಂದೂ ನಾಗರಿಕತೆ ಸಂಸ್ಕೃತಿಗಳಿಗೆ ದೊಡ್ಡ ಪೆಟ್ಟು ಬಿದ್ದಿತು. ಆದರೆ ಅದು ಸಂಪೂರ್ಣ ಅಳಿದು ಹೋಗಲಿಲ್ಲ. ಬಾಲಿದ್ವೀಪ ಅದರ ಭದ್ರ ಕೋಟೆಯಾಗಿ ಪರಿಣಮಿಸಿತು. ಜಾವಾದಿಂದ ರಾಜವಂಶದವರೂ, ಶ್ರೀಮಂತರೂ, ಧರ್ಮಾಭಿಮಾನಿಗಳೂ ಬಾಲಿಗೆ ತೆರಳಿದರು. ಈಗಲೂ ಬಾಲಿ ಹಿಂದೂ ದ್ವೀಪವಾಗಿಯೇ ಉಳಿದಿದೆ. ಬಹುಜನ ಹಿಂದುಗಳೇ. ಅಖಿಲ ಇಂಡೋನೇಶಿಯ ಮುಸ್ಲಿಮರ ವಶವಾದರೂ ಬಾಲಿ ದ್ವೀಪಕ್ಕೆ ಅದರ ಗಾಳಿ ಬೀಸದೆ ಇದ್ದುದೇ ದೊಡ್ಡ

ಆಶ್ಚರ್ಯ. ಜಾವಾದ ಸಂಸ್ಕೃತಿ ಬಾಲಿಗೆ ಪೋಷಕವಾಗಿದ್ದರೂ ಬಾಲಿಯ ನಾಗರಿಕತೆ ಮೊದಲಿನಿಂದಲೂ ಸ್ವತಂತ್ರವಾದುದೇ. ಸುಮಾತ್ರ ಜಾವಾ ಗಳಂತೆ ಬಾಲಿ ದ್ವೀಪದಲ್ಲೂ ಅನೇಕರು ರಾಜ್ಯ ಕಟ್ಟಿ ಆಳಿದ್ದರು. ಅದರ ಮೊದಲಿನ ಅರಸ ಉಗ್ರಸೇನ. ಕ್ರಿಸ್ತ ಶಕ ೯೧೫ ರಲ್ಲಿ ಅವನು ಆಳಿದ. ಶೈಲೇಂದ್ರರು, ಮದಜಾಪಾಹಿತರು ಬಾಲಿಯನ್ನು ಆಕ್ರಮಿಸಿದರೂ ಕೊನೆಗೆ ಬಾಲಿ ಸ್ವಾತಂತ್ರ್ಯ ಸಂಪಾದಿಸಿತು. ೧೮ನೇ ಶತಮಾನದ ಕೊನೆ ಯಲ್ಲಿ ಡಚ್ಚರು ಬಾಲಿಗೆ ನುಗ್ಗಿದರು. ಸಂಪೂರ್ಣ ವಶಪಡಿಸಿಕೊಳ್ಳಲು ಅವರಿಗೆ ಒಂದೆರಡು ನೂರು ವರುಷಗಳು ಹಿಡಿದುವು.

---

## ( ಭಾಗ ೩ )


# ಬ್ರಹ್ಮದೇಶ (ಬರ್ಮಾ)

---

## ದೇಶ ಮತ್ತು ಜನ

---

ಬ್ರಿಟಿಶರ ಬಂಧನದಿಂದ ಬಳಲುತ್ತಿರುವ ಬ್ರಹ್ಮದೇಶ ನಮ್ಮ ಪೂರ್ವದಿಕ್ಕಿನಲ್ಲಿರುವ ನೆರೆಕರೆಯ ನಾಡು. ಬಂಗಾಲ ಮತ್ತು ಆಸಾಂ ಪ್ರಾಂತಗಳಿಗೆ ಅದು ತಾಗಿಕೊಂಡಿದೆ. ಚಿತಗಾಂಗ, ಇಂಫಾಲ ಮತ್ತು ಮಣಿಪುರಗಳ ಹೆಬ್ಬಾಗಿಲುಗಳನ್ನು ದಾಟಿದರೆ, ಬ್ರಹ್ಮದೇಶಕ್ಕೆ ಪ್ರವೇಶಿ ಸಿದಂತೆಯೇ ಸರಿ. ಮದ್ರಾಸ, ವಿಶಾಖಪಟ್ಣ, ಕಲಕತ್ತ ಬಂದರ ಗಳಿಂದ ಹಡಗಗಳನ್ನೇರಿ ಬ್ರಹ್ಮದೇಶದಲ್ಲಿಳಿಯಲೂ ಸಾಧ್ಯ. ಬಂಗಾಲ ಸಮುದ್ರದ ತೆರೆಗಳು ದಕ್ಷಿಣ ಬ್ರಹ್ಮದೇಶದ ಕರಾವಳಿ ತಡಿಯನ್ನು


ಹಿಂದುಸ್ತಾನ
ಚೀನ
ಮಂಡಾಲೆ
ಬ್ರಹ್ಮದೇಶ
ಸಯಾಂ
ರಂಗೂನ
ಬಂಗಾಲ ಕೊಲ್ಲಿ

ತಬ್ಬಿಕೊಳ್ಳುತ್ತಿವೆ. ಒಮ್ಮೆ ಬ್ರಹ್ಮದೇಶದಲ್ಲಿ ಕಾಲಿಟ್ಟರೆ ಮುಂದೆ, ಚೀನ, ಥಾಯಿಲಂಡ, ಇಂಡೋಚೀನಗಳಿಗೂ ಕಾಲು ಚಾಚಲು ಶಕ್ಯ. ಬ್ರಹ್ಮದೇಶದ ಪೂರ್ವ ಗಡಿನಾಡಿನಲ್ಲಿ ಈ ರಾಜ್ಯಗಳಿರುವುದರಿಂದ ಅಂಥ ಅನುಕೂಲತೆಯಿದೆ.

## ಅಕ್ಕಿ ರಾಜ್ಯ

ಬ್ರಹ್ಮದೇಶ ಅಂಗೈ ಅಗಲದ ರಾಜ್ಯ. ನಕ್ಷೆಯಲ್ಲಿ ಹಾಗೆ ಕಾಣಿಸುತ್ತದೆ. ಆದರೆ ಅದು ಬಹಳ ವಿಶಾಲವಾದ ಭೂಮಿ. ವಿಸ್ತಾರ, ೨ ಲಕ್ಷ ೬೨ ಸಾವಿರ ಚದರ ಮೈಲುಗಳು. ಕಗ್ಗಾಡುಗಳ ನಾಡು. ದೇಶದ ಉತ್ತರಭಾಗದಲ್ಲಿ ಪರ್ವತಗಳು. ತಲೆ ಎತ್ತಿನಿಂತ ಈ ಬೆಟ್ಟಗಳ ಶಿಖರಗಳು ಮುಗಿಲು ಚುಂಬಿಸುತ್ತಿವೆ. ಆ ಬೆಟ್ಟಗಳ ನಡುವೆ ರಮಣೀಯವಾದ ಕಣಿವೆಗಳು. ಈ ಭಾಗದಲ್ಲಿ ಮಳೆ ವಿಶೇಷ ವಾಗಿರುವುದರಿಂದ ಘನ ಅರಣ್ಯಗಳೂ ಬೆಳೆದಿವೆ. ಹುಲಿ, ಆನೆ, ಮೊಸಳೆ ಮತ್ತು ಇನ್ನಿತರ ಕಾಡುಮೃಗಗಳಿಂದ ತುಂಬಿದ ಪ್ರದೇಶ. ಈ ಕಾಡುಗಳಲ್ಲಿ ತೇಗು ಮತ್ತು ಇನ್ನಿತರ ಶ್ರೇಷ್ಠ ಮರಗಳು ದೊರೆ ಯುತ್ತಿವೆ. ವರುಷಂಪ್ರತಿ ಎರಡೂವರೆ ಲಕ್ಷ ಕ್ಯೂಬಿಕ್ ಟನ್‌ಗಳನ್ನು ವಿದೇಶಗಳಿಗೆ ಕಳಿಸುತ್ತಾರೆ. ಸೀಕೆಕಾಯಿ, ಮರದೆಣ್ಣೆ, ಮೆಣಸು (pepper) ಏಲಕ್ಕಿ, ಆನೆ ದಂತ ಮುಂತಾದ ಕಾಡಿನ ಉತ್ಪತ್ತಿಯೂ ಧಾರಾಳ. ಈ ಅರಣ್ಯದಿಂದ ಸ್ವಲ್ಪ ದಕ್ಷಿಣಕ್ಕೆ, ಎಂದರೆ ಮಧ್ಯ ಭಾಗಕ್ಕೆ ಇಳಿದುಬಂದರೆ, ಅಲ್ಲಿ ಮಳೆಕಡಿಮೆ. ಹತ್ತಿ, ನೆಲಗಡಲೆ, ಜೋಳಗಳನ್ನು ಜನ ಬೆಳೆಸುವರು. ದಕ್ಷಿಣ ಬ್ರಹ್ಮದೇಶವು ಇರಾವದಿ ನದಿಯ ತಪ್ಪಲು ಭೂಮಿ. ಅಲ್ಲಿ ಅಕ್ಕಿಯ ಬೇಸಾಯ. ಒಕ್ಕಲು ತನಕ್ಕೆ ಈ ಭಾಗವು ಪ್ರಸಿದ್ಧ. ಯುದ್ಧಪೂರ್ವದಲ್ಲಿ ಪ್ರತಿವರುಷ ಬ್ರಹ್ಮದೇಶದಲ್ಲಿ ೬೦ ಲಕ್ಷ ಟನ್ ಅಕ್ಕಿಯ ಉತ್ಪಾದನೆಯಾಗುತ್ತಿತ್ತು. ಅದರಲ್ಲಿ ಬ್ರಹ್ಮೀಜನರಿಗೆ ೩೦ ಲಕ್ಷ ಟನ್ ಸಾಕಾಗುತಿತ್ತು. ಉಳಿದ ೩೦ ಲಕ್ಷ ಟನ್ ಉಳಿಕೆ ಕಾಳುಗಳೆಲ್ಲ ನೆರೆಕರೆಯ ದೇಶಗಳಿಗೆ. ಹೆಚ್ಚಾಗಿ ಹಿಂದುಸ್ತಾನವೇ ಬ್ರಹ್ಮದೇಶದ ಅಕ್ಕಿಗೆ ದೊಡ್ಡ ಗಿರಾಕಿ. 'ರಂಗೂನ ಅಕ್ಕಿ' ಎಂದು ನಮ್ಮ ಜನ ಹೇಳುತ್ತಿರುವುದು ಇದೇ

ಅಕ್ಕಿಯನ್ನು. ರಂಗೂನ, ಬ್ರಹ್ಮದೇಶದ ಹೆಸರಾದ ಬಂದರ. ಅಲ್ಲಿಂದ ಅಕ್ಕಿಯನ್ನು ಆಮದು ಮಾಡುತ್ತಿರುವುದರಿಂದ 'ರಂಗೂನ ಅಕ್ಕಿ' ಎಂದು ಹೆಸರು ಬಿದ್ದಿದೆ ಅದಕ್ಕೆ. ಸರ್ವಸಾಮಾನ್ಯವಾಗಿ ಬ್ರಹ್ಮದೇಶವು ಅಕ್ಕಿ ರಾಜ್ಯ.

## ಖನಿಜಗಳು

ಬ್ರಹ್ಮದೇಶದಲ್ಲಿ ಖನಿಜಗಳು ಅಷ್ಟು ವಿಶೇಷವಿಲ್ಲ. ಕಬ್ಬಿಣದ ಕಣಿಗಳೇ ಕಡಿಮೆ. ಕಲ್ಲಿದ್ದಲು ಇಲ್ಲವೆಂದರೂ ಸಲ್ಲುವುದು ಸೀಸ, ತವರ, ತಾಮ್ರ, ಬೆಳ್ಳಿ ಮುಂತಾದವು. ದೊರೆಯುತ್ತವೆ. ೧೯೩೭ರಲ್ಲಿ ೭೬½ ಸಾವಿರ ಟನ್ ಸೀಸ, ೬೬೨೩ ಟನ್ ಟಿನ್, ೭೩೫೫೩ ಟನ್ ಜಿಂಕ್, ೭೭೫೦ ಟನ್ ತಾಮ್ರ, ೨೫೪೨೬ ಟನ್ ಕಬ್ಬಿಣ 'ಮೊದಲಾದ ಖನಿಜಗಳನ್ನು ಭೂಗರ್ಭದಿಂದ ಮೇಲಕ್ಕೆತ್ತಿರುವರು. ಆದರೆ ಇವೆಲ್ಲಕ್ಕಿಂತ ಬ್ರಹ್ಮ ದೇಶವು ಪೆಟ್ರೋಲ ಮತ್ತು ಚಿಮಣಿ ಎಣ್ಣೆಗಳಿಗೆ ಹೆಸರಾದುದು. ೧೯೩೭ ರಲ್ಲಿ ಬ್ರಿಟಿಶರು ೨೭ ಕೋಟಿ ಗ್ಯಾಲನ್ ಪೆಟ್ರೋಲಿಯಂ ಎಣ್ಣೆಯನ್ನು ಹೀರಿರುವರು ಭೂಮಿಯಿಂದ. ಇದಲ್ಲದೆ ಉಪ್ಪಿನ ಬೆಟ್ಟಗಳೂ ಬ್ರಹ್ಮ ದೇಶದಲ್ಲಿ ಕಾಣಸಿಕ್ಕಿವೆ. ವಜ್ರ, ವೈಢೂರ್ಯಗಳಿಗೂ ಕಡಿಮೆಯಿಲ್ಲ. ೧೯೩೪ ರಲ್ಲಿ ಬ್ರಹ್ಮದೇಶದಲ್ಲಿ ಚಿಕ್ಕಪುಟ್ಟ ೧೦೧೯ ಕಾರ್ಖಾನೆಗಳಿದ್ದುವು. ಅವುಗ ಳಲ್ಲಿ ದುಡಿಯುತ್ತಿದ್ದ ಕೂಲಿಕಾರರ ಸಂಖ್ಯೆ ೮೬ ಸಾವಿರ. ಕಬ್ಬಿಣ ಮತ್ತು ಕಲ್ಲಿದ್ದಲುಗಳ ಕೊರತೆ ಔದ್ಯೋಗೀಕರಣಕ್ಕೆ ದೊಡ್ಡ ಅಡೆತಡೆ. ಬ್ರಿಟಿ ಶರು ಅದಕ್ಕೆ ಅವಕಾಶವನ್ನೂ ಕೊಟ್ಟಿರುವುದಿಲ್ಲ.

## ಬ್ರಹ್ಮೀ ಜನ

ದೇಶವೇನೋ ದೊಡ್ಡದು. ಆದರೆ ಅದಕ್ಕೆ ತಕ್ಕಂತೆ ಜನಸಂಪತ್ತಿಲ್ಲ. ಒಟ್ಟು ಪ್ರಜೆಗಳ ಸಂಖ್ಯೆ ಒಂದೂವರೆ ಕೋಟಿ. ಇವರಲ್ಲಿ ೯೦ ಲಕ್ಷ ಬ್ರಹ್ಮೀಯರು. ಕರೆನರು ಹನ್ನೆರಡು ಲಕ್ಷ. ಶಾನರು ಹತ್ತು ಲಕ್ಷ. ಚಿನ್ನರು ಮೂರು ಲಕ್ಷ ಮತ್ತು ಕಚಿನ್ನರು ಒಂದೂವರೆ ಲಕ್ಷ. ಇವರೆಲ್ಲ ಬ್ರಹ್ಮೀ ಕುಲದವರೇ. ಇವರಲ್ಲದೆ ಒಂದೂವರೆ ಲಕ್ಷ ಚೀನಿಯರು, ಒಂದು

ಲಕ್ಷ ಇಂಡೋ-ಬ್ರಹ್ಮೀಯರು, ೧೦ ಲಕ್ಷ ಹಿಂದೀಯರು, ಎಂಟು ಸಾವಿರ ಯುರೋಪಿಯನ್ನರು, ೧೭ ಸಾವಿರ ಆಂಗ್ಲೋ-ಇಂಡಿಯನ್ನರೂ ವಾಸಿಸುತ್ತಿರುವರು.

## ಭಾಷೆ ಭೂಷಣ

ಬಹು ಸಂಖ್ಯಾಕರಾದಬ್ರಹ್ಮೀ ಜನ ಇಂಡೋ-ಮೊಂಗೋಲಿಯನ್ನರ ವಂಶ. ಚೀನಕ್ಕೆ ದಂಡೆತ್ತಿಬಂದ ಮೊಂಗೋಲರು ಬ್ರಹ್ಮದೇಶಕ್ಕೂ ನುಸುಳಿದ್ದರು. ಇಂದಿನ ಬ್ರಹ್ಮೀಯರು ಅವರ ಕುಲೋದ್ಭವರು. ಆದುದರಿಂದಲೇ ಸ್ವಲ್ಪ ಚೀನಿ ಜನರಂತೆ ಅವರ ರೂಪವಿವೆ. ಚೀನಿಯರಂತೆ ಕುಳ್ಳರಲ್ಲ ಭಾಷೆ ಕೂಡಾ ಭಿನ್ನ. ಚೀನಿ ತಿಬೇತಿ ನುಡಿಗಳು ಕೂಡಿದ ಒಂದು ಮಿಶ್ರ ಭಾಷೆ ಬ್ರಹ್ಮೀಯರದ್ದು. ಉಡುಗೆ ತೊಡುಗೆ ಕೂಡಾ ವಿಲಕ್ಷಣ. ಹೆಣ್ಣು ಗಂಡು ಎಲ್ಲ ಬಣ್ಣ ಬಣ್ಣದ ಲುಂಗಿಗಳನ್ನು ಬಿಗಿದುಕೊಳ್ಳುವರು. ಅದರ ಮೇಲೊಂದು ಅಂಗಿ. ಗಂಡಸರು ತಲೆಗೊಂದು ದೊಡ್ಡ ಕರವಸ್ತ್ರ ಕಟ್ಟಿಕೊಳ್ಳುವರು. ಹೆಣ್ಣುಮಕ್ಕಳು ತಲೆಬಾಚಿ ಮುಡಿ ಕಟ್ಟಿಕೊಳ್ಳುವರು. ವೇಷಭೂಷಣಗಳಲ್ಲಿ ಬ್ರಹ್ಮೀಜನ ಆಡಂಬರ ಪ್ರಿಯರಲ್ಲ. ಸಜ್ಜನರು. ದೈವ ಭಕ್ತರು. ಬೌದ್ಧ ಧರ್ಮಾನುಯಾಯಿಗಳು. ಎಲ್ಲಿ ನೋಡಿದರೂ ಬ್ರಹ್ಮದೇಶದಲ್ಲಿ ಬೌದ್ಧ ಭಿಕ್ಷುಗಳು ಕಣ್ಣಿಗೆ ಬೀಳುತ್ತಾರೆ. ಬ್ರಹ್ಮೀ ಜನರಿಗೆ ಅವರ ಮೇಲೆ ಭಾರೀ ಗೌರವ. ಈ ಬೌದ್ಧರ ದೇವಾಲಯಗಳಿಗೆ ಬ್ರಹ್ಮದೇಶದಲ್ಲಿ "ಪಗೋಡ" ಗಳೆಂದೆನ್ನುವರು. ಈ ಪಗೋಡಗಳೇ ಅವರ ಯಾತ್ರಾಸ್ಥಳ. ಪುಣ್ಯಕ್ಷೇತ್ರ. ಶ್ವೇ ಪಗೋಡ ಅತ್ಯಂತ ದೊಡ್ಡದು. ಈ ಗುಡಿಯ ಶಿಖರವು ೩೭೦ ಅಡಿ ಎತ್ತರವಿದೆ. ಭಕ್ತರು ಹಿಂದುಸ್ತಾನದಲ್ಲಿ 'ದುಡ್ಡು ದುಗ್ಗಾಣಿ ಕಾಣಿಕೆ ಹಾಕಿದರೆ ಬ್ರಹ್ಮೀಯರಲ್ಲಿ ಶ್ರೀಮಂತರು ಬಂಗಾರದ ತಗಡುಗಳನ್ನು ತಂದು ಪಗೋಡಗಳಿಗೆ ಅಂಟಿಸುವರು. ಶ್ವೇ ಪಗೋಡದ ಕೆಳಭಾಗವೆಲ್ಲ ಬಂಗಾರದ ತಗಡುಗಳಿಂದ ಮುಚ್ಚಲ್ಪಟ್ಟಿದೆ.

## ಹಿಂದೀಯರು

ದಕ್ಷಿಣ ಆಫ್ರಿಕ ಮಲಯಾಗಳಂತೆ ಬ್ರಹ್ಮದೇಶದಲ್ಲಿರುವ ಹಿಂದೀಯರ ಪರಿಸ್ಥಿತಿಯೂ ತೃಪ್ತಿಕರವಿಲ್ಲ. ಹತ್ತುಲಕ್ಷ ಹಿಂದೀಯರಲ್ಲಿ ಬಹು

ಜನ ಬ್ರಹ್ಮದೇಶದ ಕಣಿಗಳಲ್ಲಿ ಹೊಲಗಳಲ್ಲಿ ದುಡಿವ ಕೂಲಿಕಾರರು. ಅಲ್ಲೇ ಮನೆ ಮಾರು ಕಟ್ಟಿಕೊಂಡು ವಾಸಿಸಿರುವರು. ಅನೇಕರಿಗೆ ವ್ಯಾಪಾರವೇ ಜೀವನವೃತ್ತಿ. ಆದರೆ ಹಿಂದೀಯರು ಆಸ್ತಿಪಾಸ್ತಿಯನ್ನು ಕೊಂಡುಕೊಳ್ಳುತ್ತಿರುವುದರಿಂದ ಬ್ರಹ್ಮೀ ಜನರ ಅಸಂತೋಷಕ್ಕೆ ಪಾತ್ರರಾಗಿದ್ದಾರೆ. ೧೯೩೯ ರಲ್ಲಿ ಕೆಳ ಬ್ರಹ್ಮದೇಶದ ಅಕ್ಕಿ ಹೊಲಗಳಲ್ಲಿ ನೂರಕ್ಕೆ ೪೧ ಮತ್ತು ಉತ್ತರಭಾಗದ ಗದ್ದೆಗಳಲ್ಲಿ ನೂರಕ್ಕೆ ೬೮ ಹಿಂದೀ ಚೆಟ್ಟಿಯಾರರಿಗೆ ಸೇರಿದ್ದುವು. ಒಟ್ಟು ಐವತ್ತು ಕೋಟಿ ರೂ.ಗಳ ಬಂಡವಲನ್ನು ಚೆಟ್ಟಿಯಾರರು ಬ್ರಹ್ಮದೇಶದಲ್ಲಿ ಸುರಿಸಿರುವರು. ಇದು ಬ್ರಹ್ಮೀ ಜನರ ಕಣ್ಣನ್ನು ಕುಕ್ಕುತ್ತಿದೆ. ಅದೇನಿದ್ದರೂ ಬ್ರಹ್ಮದೇಶದ ಕೈಗಾರಿಕ, ವ್ಯಾಪಾರಗಳನ್ನು ಬೆಳೆಸಿದವರು ಹಿಂದೀಯರು. ರಸ್ತೆಗಳನ್ನು ಕಡಿದವರು ಅವರು. ಕಣಿಗಳನ್ನು ಅಗೆದವರೂ ಹಿಂದೀ ಕೂಲಿಕಾರರು. ಘೋರ ಅರಣ್ಯಗಳನ್ನು ತರಿದು ಕಾಡನ್ನು ನಾಡು ಮಾಡಿದ ಸಾಹಸವೂ ಅವರದ್ದೇ. ಹೀಗಿದ್ದರೂ ಜಪಾನರು ದಂಡೆತ್ತಿ ಬಂದಾಗ ಹಿಂದೀಯರು ಬಹಳ ಕಷ್ಟನಷ್ಟಗಳಿಗೊಳಗಾದರು. ಬ್ರಹ್ಮೀಯರೂ ಹಿಂದೀಯರ ಮೇಲೆ ತಿರುಗಿಬಿದ್ದರು. ಮನೆ, ಮಾರು ಸರ್ವಸ್ವಗಳನ್ನು ಕಳೆದುಕೊಂಡು ಸಾವಿರಾರು ಹಿಂದೀ ನಿರಾಶ್ರಿತರು ಕಾಲ್ನಡಿಗೆಯಲ್ಲೇ ಬಾಡಿ ಬೆಂದರು. ಅನೇಕರು ಹಸಿವು ನೀರಡಿಕೆಗಳನ್ನು ತಾಳಲಾರದೆ ದಾರಿಯಲ್ಲಿ ಬಿದ್ದರು. ಆಸಾಂ, ಬಂಗಾಲಗಳ ಹೆದ್ದಾರಿ ಘೋರವಾದುದು. ಅಳಿದುಳಿದ ೪೫ ಸಾವಿರ ಹಿಂದೀಯರು ಹಿಂದುಸ್ತಾನಕ್ಕ ಪ್ರವೇಶಿಸಲು ಸಮರ್ಥರಾದರು.

## ಹಿಂದೀಯರ ರಕ್ಷಣೆ

ಕೆಲವು ಸಾವಿರ ಜನ ಓಡಿ ಬಂದರೂ ಲಕ್ಷಗಟ್ಟಲೆ ಮಂದಿ ಬ್ರಹ್ಮದೇಶದಲ್ಲೇ ಉಳಿದರು. ಮೊದಲು ಅವರ ಜೀವ, ಜೀವನ, ಜೀವಿತಗಳಿಗೆ ಗಂಡಾಂತರ ಬಂದರೂ ಆಝಾದ ಹಿಂದ ಸರಕಾರವು ಸ್ಥಾಪಿಸಲ್ಪಟ್ಟ ಮೇಲೆ ಆ ಪ್ರಶ್ನೆ ಬಗೆಹರಿಯಿತು. ಬ್ರಹ್ಮದೇಶದಲ್ಲಿರುವ ಹಿಂದೀಯರ ಸಂರಕ್ಷಣೆಗಾಗಿ ಆಝಾದ ಹಿಂದ ಫೌಜ ಅಮೋಘ ಸೇವೆ ಸಲ್ಲಿಸಿದೆ. ಅದರ ಹುಟ್ಟು ಬೆಳವಣಿಗೆಗಳು ಅತ್ಯದ್ಭುತ. ಅದು ಸ್ಥಾಪಿಸಲ್ಪಟ್ಟ ಮೇಲೆ

ಹಿಂದೀಯರಲ್ಲಿದ್ದ ಹತಾಶೆ ಅಳಿಯಿತು. ಉತ್ಸಾಹ ಉಕ್ಕೇರಿ ಬಂತು. ಬ್ರಹ್ಮೀಯರೂ ಸ್ವಲ್ಪ ಸ್ನೇಹದಿಂದಿರತೊಡಗಿದರು. ಹಿಂದೀ ವಿರೋಧ ದಂಗೆಯಿಲ್ಲ. ದರೋಡೆಯಿಲ್ಲ. ಕೊಲೆಯಿಲ್ಲ. ವಿವಾದವನ್ನು ಆಝಾದ ಹಿಂದ ಸರಕಾರವೇ ಪರಿಹರಿಸುತ್ತಿತ್ತು. ಬ್ರಹ್ಮದೇಶದಲ್ಲಿದ್ದ ಹಿಂದೀಯರಲ್ಲಿ ನೂರಕ್ಕೆ ೯೦ ಜನ ನೇತಾಜಿಗೆ ಬೆಂಬಲ ಕೊಟ್ಟಿದ್ದರು. ಜಪಾನರು ಹೊರಟುಹೋದ ಮೇಲೆ ಬ್ರಿಟಿಶರು ಪ್ರವೇಶಿಸಲು ಸ್ವಲ್ಪಕಾಲ ಹಿಡಿಯಿತು. ಆ ಮಧ್ಯಕಾಲದಲ್ಲಿ ಬ್ರಹ್ಮದೇಶದ ಅನೇಕ ನಗರಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿದವರು ಹಿಂದೀಯರೇ. ಇಲ್ಲದೇ ಇರುತ್ತಿದ್ದರೆ ಬ್ರಹ್ಮೀ ಜನರ ಆಸ್ತಿ ಜೀವ ಸುರಕ್ಷಿತವಿರುತ್ತಿದ್ದಿಲ್ಲ.

## ಹಿಂದೀಯರ ಭವಿತವ್ಯ

ಯುದ್ಧದಿಂದ ಬ್ರಹ್ಮದೇಶಕ್ಕೆ ಬಹಳ ಹಾನಿ ಸಂಭವಿಸಿದೆ. ರಂಗೂನ ನಗರವು ಹಾಳು ಹಂಪೆ. ವಾಹನಸೌಕರ್ಯಗಳಿಲ್ಲ· ದೇಶದಲ್ಲಿ ರೇಲ್ವೆ ರಸ್ತೆಗಳು ನಾಶವಾಗಿವೆ. ಎಲ್ಲ ವಸ್ತುಗಳ ಬೆಲೆ ಏರಿರುವುದು. ನೋಟುಗಳ ಅತಿ ಪ್ರಸರಣ. ನಿರುದ್ಯೋಗದ ಭೀತಿ. ಬ್ರಹ್ಮದೇಶದ ಪುನರ್ರಚನೆಗೆ ೪೦೦ ಕೋಟಿ ರೂ. ಗಳಾದರೂ ಬೇಕು. ಹದಿನೈದು ವರುಷಗಳಾದರೂ ಅತಿ ಅವಶ್ಯ. ಇಂಥ ದುಸ್ಥಿತಿಯಲ್ಲಿ ಜೀವನ ನಡೆಸುವುದು ಹಿಂದೀಯರಿಗೆ ಕಷ್ಟವೆನಿಸಿದೆ· ಇನ್ನೊಂದೆಡೆ, ಬ್ರಹ್ಮದೇಶದಲ್ಲಿ ರಾಷ್ಟ್ರೀಯ ಜಾಗೃತಿ ಪ್ರಬಲವಾಗಿರುವುದರಿಂದ ಹಿಂದೀ ಪ್ರಶ್ನೆಯೂ ಜಟಿಲವಾಗುತ್ತ ಬಂದಿದೆ. ಹಿಂದೀಯರು ಶೋಷಣೆಕಾರರೆಂದು ಬ್ರಹ್ಮೀಯರ ತಿರಸ್ಕಾರ. ಬ್ರಹ್ಮದೇಶದಲ್ಲಿ ಹಿಂದೀಯರಿಗೆ ಸ್ವಾಗತವಿಲ್ಲದೇ ಇದ್ದರೆ ಹಿಂದೀಯರು ತಮ್ಮ ವಿಶೇಷ ಹಕ್ಕುಹಿತಗಳಿಗಾಗಿ ಹೋರಾಡುವುದೂ ಸಮಂಜಸವಲ್ಲ. ಬ್ರಹ್ಮದೇಶದಲ್ಲೇ ಹುಟ್ಟಿ ಬೆಳೆದ ಹಿಂದೀಯರು ಬ್ರಹ್ಮದೇಶದ ನಾಗರಿಕರಾಗುವುದು ಲೇಸು. ಬ್ರಹ್ಮೀಜನಾಂಗದೊಡನೆ ಮಿಲನವಾಗುವುದೂ ಉಚಿತ. ಬ್ರಹ್ಮದೇಶವೇ ತಮ್ಮ ತಾಯ್ನಾಡೆಂದು ಅವರು ತಿಳಿದುಕೊಳ್ಳಬೇಕಾಗಿದೆ. ಆದರೆ ಸ್ವದೇಶಕ್ಕೆ ಹಿಂತೆರಳಲು ಬಯಸುವ

ಹಿಂದೀಯರಿಗೆ ಬ್ರಹ್ಮೀ ಸರಕಾರವು ಪರಿಹಾರ ಕೊಟ್ಟುಕಳಿಸುವುದು ಲೇಸು. ಹಿಂದೀ ಪ್ರಶ್ನೆಯ ಮೂಲಕ ಹಿಂದುಸ್ತಾನವು ನೆರೆಕರೆಯಲ್ಲಿರುವ ಬ್ರಹ್ಮದೇಶದೊಡನೆ ದ್ವೇಷ ಕಟ್ಟಿಕೊಳ್ಳುವಂತಾಗಬಾರದು.

---

## ಬ್ರಿಟಿಶರ ಸಂಕೋಲೆ

---

ಬ್ರಹ್ಮದೇಶ ಬ್ರಿಟಿಶರ ನೊಗದ ಭಾರದಿಂದ ಕುಸಿದು ಕುಗ್ಗಿದೆ. ೧೬೧೨ರಲ್ಲೇ ಈಸ್ಟ ಇಂಡಿಯಾ ಕಂಪನಿಯು ಏಜಂಟರು ಪ್ರೋಂ ನಗರಕ್ಕೆ ನುಸುಳಿದ್ದರು. ಕಂಪನಿಯು ಕೆಲವು ಚಿಕ್ಕ ಚಿಕ್ಕ ಕಾರ್ಖಾನೆಗಳನ್ನು ಸ್ಥಾಪಿಸಿತ್ತು. ಆದರೆ ರಾಜ್ಯಾಭಿಲಾಷೆ ಹಿಡಿದ ಬ್ರಿಟಿಶರು ಬ್ರಹ್ಮದೇಶದ ಆಕ್ರಮಣಕ್ಕೆ ತೊಡಗಿದರು. ಒಮ್ಮೆ ೧೮೨೬ ಇನ್ನೊಮ್ಮೆ ೧೮೫೨ ಹಾಗೂ ಕೊನೆಗೆ ೧೮೮೬ ಹೀಗೆ ಮೂರುಸಲ ಬ್ರಹ್ಮದೇಶದ ವಿರುದ್ಧ ಯುದ್ಧ ಹೂಡಿ ಒಂದೊಂದೇ ತುಂಡನ್ನು ಕಡಿದುಕೊಂಡರು. ಕೊನೆಯ ಯುದ್ದದಲ್ಲಿ ಥೀಬಾ ದೊರೆಯನ್ನು ತಳ್ಳಿಹಾಕಿ ಇಡೀ ದೇಶವನ್ನೇ ತಮ್ಮ ಬುಟ್ಟಿಯೊಳಗೆ ತುಂಬಿಸಿಕೊಂಡರು. ಬ್ರಹ್ಮದೇಶ ಸಂಪೂರ್ಣ ಬ್ರಿಟಿಶರ ಪಾಲಾಯಿತು.

### ೧೯೩೫ನೆಯ ಕಾಯದೆ

೧೯೨೩ ರರ ವರೆಗೆ ಬ್ರಹ್ಮದೇಶಕೊಬ್ಬ ಲೆಫ್ಟನೆಂಟ ಗವರ್ನರರನ್ನು ನೇಮಿಸಿದ್ದರು. ಸರ್ವಸಾಧಾರಣವಾಗಿ ಅವನದು ಒಂದು ರೀತಿಯ ಮಿಲಿಟರಿ ಆಡಳಿತೆಯೇ. ಆದರೆ, ೧೯೧೯ ನೇ ಹಿಂದುಸ್ತಾನ ಕಾಯದೆಯನ್ವಯ ೧೯೨೩ರರಲ್ಲಿ ಬ್ರಹ್ಮದೇಶವು ಹಿಂದುಸ್ತಾನದ ಒಂದು ಪ್ರಾಂತವೆಂದುಕಲ್ಪಿಸಿ ಹಿಂದೀ ಘಟನೆಗೆ ಜೋಡಿಸಿದರು. ಬ್ರಹ್ಮದೇಶಕ್ಕೊಬ್ಬ ಗವರ್ನರನನ್ನೂ ನೇಮಿಸಲಾಯಿತು- ಆದರೆ ಬರ್ಮೀ ಜನರ ರಾಷ್ಟ್ರೀಯ ಚಳವಳಿಯು ಪ್ರಬಲವಾದಂತೆ ಹಿಂದುಸ್ತಾನದಿಂದ ಬ್ರಹ್ಮದೇಶವನ್ನು ಪ್ರತ್ಯೇಕಿಸುವ ಅವಶ್ಯಕತೆ ಬಿತ್ತು. ಅದರಂತೆ ೧೯೩೫ನೇ ಕಾಯದೆಯನ್ವಯ ಬ್ರಹ್ಮದೇಶ

ವನ್ನು ಪ್ರತ್ಯೇಕಿಸಿದರು. ೧೯೩೭ರಲ್ಲಿ ಹಿಂದುಸ್ತಾನದೊಡನಿದ್ದ ಘಟನಾತ್ಮಕ ಸಂಬಂಧ ತಪ್ಪಿತು. ಬ್ರಹ್ಮದೇಶದ ಗವರ್ನರರು ಸಾರ್ವಭೌಮ ಸರಕಾರದ ಪರವಾಗಿ ಆಡಳಿತೆ ನಡೆಸಿರುವರು. 'ಭಾರತ ಮಂತ್ರಿ"ಗಳಿಗೆ ಅವರು ಹೊಣೆ.

## ಮೂರು ವಿಭಾಗಗಳು

ಬ್ರಹ್ಮದೇಶದ ಆಡಳಿತೆಯ ವಿಷಯದಲ್ಲಿ ಬ್ರಿಟಿಶರು ಹಿಂದುಸ್ತಾನದಲ್ಲಿ ಕೈಕೊಂಡ ಧೋರಣವನ್ನೇ ಪಾಲಿಸಿರುವರು. ಬ್ರಿಟಿಶ (೧) ಸಂರಕ್ಷಣೆಗೊಳಗಾದ ಪ್ರದೇಶ, (೨) ಗವರ್ನರರ ಅಧಿಕಾರಕ್ಕೊಳಗಾದ ಭಾಗ, (೩) ಮತ್ತು ಸಂಸ್ಥಾನಗಳು ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಿರುವರು. (ನಕ್ಷೆ ನೋಡಿರಿ). ಬಂಗಾಲ, ಆಸಾಂ ಗಡಿಪ್ರದೇಶದಲ್ಲಿರುವ ಚಿನ್ ಪರ್ವತ ಪ್ರದೇಶ, ಅರಾಕಾನ, ಮತ್ತು ಉತ್ತರ ಬ್ರಹ್ಮದೇಶದ ಹುಕವಂಗ ಕಣಿವೆ ( ಮಿತಿಕಿಯಾನಾ ಭಾಗ ) ಬ್ರಿಟಿಶರ ಪ್ರತ್ಯಕ್ಷ ಆಡಳಿತೆಗೊಳಗಾಗಿದೆ. ಈ ಭಾಗದಲ್ಲೆಲ್ಲ ಪ್ರಾಂತಿಕ ಸ್ವಾಯತ್ತತೆಯಿಲ್ಲ. ಆ ಜನ ಕಾಡು ಜನರಂತೆ ನಾಗರಿಕತೆ ಹೊಂದಿಲ್ಲವರಲ್ಲವೆಂದು ಬ್ರಿಟಿಶರ ಮಾತು. ಇನ್ನು ಸಂಸ್ಥಾನಗಳ ಸಂಖ್ಯೆ ೩೪. ಪೂರ್ವ ಬ್ರಹ್ಮದೇಶದಲ್ಲಿ ಇವು ೫೮ ಸಾವಿರ ಚ. ಮೈಲುಗಳಷ್ಟು ಭೂಭಾಗವನ್ನು ವ್ಯಾಪಿಸಿವೆ. ಶಾನ ಸಂಸ್ಥಾನಗಳೆಂದು ಹೆಸರು ಇವಕ್ಕೆ. ಹಿಂದುಸ್ತಾನದ ನರೇಂದ್ರರಷ್ಟು ಅಧಿಕಾರ ಸ್ಥಾನಮಾನವೂ ಇಲ್ಲ ಇವರಿಗೆ. ಎಲ್ಲ ಬ್ರಿಟಿಶರ ಕೈಕೊಂಬೆಗಳು. ಉಳಿದ ಬ್ರಹ್ಮದೇಶದಲ್ಲಿ ಬ್ರಿಟಿಶ ಗವರ್ನರರ ಅಧಿಕಾರ. ಸೆನೆಟ್ ಮತ್ತು ಪ್ರಜಾಪ್ರತಿನಿಧಿ ಸಭೆಗಳೆಂದು ಎರಡು ಶಾಸನ ಸಭೆಗಳನ್ನು ರಚಿಸಿರುವುದಾದರೂ ಅವುಗಳ ಗತಿ ಹಿಂದುಸ್ತಾನದಲ್ಲಿರುವ ವಿಧಿಮಂಡಳ ಮತ್ತು ಪ್ರಾಂತಿಕ ಶಾಸನ ಸಭೆಗಳಂತೆಯೇ ಆಗಿದೆ. ಶಾಸನ ಅಧಿಕಾರವೇನೂ ಇಲ್ಲ. ಗವರ್ನರರು ಈ ಶಾಸನ ಸಭೆಗಳಿಗೆ ಹೊಣೆಗಾರರಾಗಿಲ್ಲ. ಗವರ್ನರರು ತಮ್ಮ ತಾಳಕ್ಕೆ ತಕ್ಕ ಮೇಳಕಟ್ಟುವವರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳುವರು. ಈ ಮಂತ್ರಿಗಳು ಪ್ರಜಾಪ್ರತಿನಿಧಿಗಳಲ್ಲ. ಜನಕ್ಕೆ ವಿಶ್ವಾಸವೂ ಇಲ್ಲ.

## ಜಪಾನದ ಕಡೆ ಆಕರ್ಷಣೆ

ಬ್ರಿಟಿಶರನ್ನು ನಂಬಿದ ಅನೇಕ ಬ್ರಹ್ಮೀ ಮುಖಂಡರು ನಿರಾಶೆ ಹೊಂದಿದರು. ಮತ್ತು ಏಶಿಯಾವು ಏಶಿಯನ್ನರಿಗೆಂಬ ಜಪಾನದ ಹಾದಿನಿಂದ ಆಕರ್ಷಿಸಲ್ಪಟ್ಟರು. ದೇಶದ ಸ್ವಾತಂತ್ರ್ಯ ಸಾಧಿಸಲು ಹಲವರು ಜಪಾನದ ಸಹಾಯವನ್ನು ಪಡೆಯಲು ಬಯಸಿ ಅದಕ್ಕಾಗಿ ಯತ್ನಿಸತೊಡಗಿದರು. ಜಪಾನವೂ ಅವರಿಗೆ ಧನ, ಜನ, ಸಹಾಯ ಸಲಕರಣೆಗಳ ಸಹಾಯ ನೀಡುವ ಭರವಸೆ ಕೊಟ್ಟು ಅವರನ್ನು ತನ್ನ ಕಡೆ ಒಲಿಸಿಕೊಳ್ಳಲು ಹವಣಿಸಿತು. ರಾಷ್ಟ್ರೀಯ ಕ್ರಾಂತಿಕಾರಕ ಪಕ್ಷ (ಎನ್. ಆರ್. ಪಿ) ವೊಂದನ್ನು ರಚಿಸಲು ಸಹಾಯ ನೀಡಿದರು. ಬ್ರಹ್ಮೀ ಸ್ವಾತಂತ್ರ್ಯ ಸೇನೆಯೊಂದನ್ನು ಗುಪ್ತವಾಗಿ ಕಟ್ಟಲು ಈ ದೇಶಪ್ರೇಮಿಗಳಿಗೆ ಪ್ರೋತ್ಸಾಹವನ್ನಿತ್ತರು. ಅನೇಕ ಬ್ರಹ್ಮೀ ರಾಷ್ಟ್ರೀಯ ತರುಣರನ್ನು ರಹಸ್ಯವಾಗಿ ಕರೆದೊಯ್ದು ಫೋರ್ಮೋಸಾ ದ್ವೀಪ, ಜಪಾನಗಳಲ್ಲಿ ಅವರಿಗೆ ಮಿಲಿಟರಿ ತರಬೇತಿ ಕೊಟ್ಟಿತು. ಜಪಾನರ ಸಹಾಯ ಪಡೆಯಲು ಯತ್ನಿಸಿದವರಲ್ಲಿ ಡಾ. ಬಾಮಾರವರ ಹೆಸರು ಪ್ರಾಮುಖ್ಯ. ಬ್ರಹ್ಮದೇಶದ ಪ್ರಧಾನ ಮಂತ್ರಿಗಳಾಗಿದ್ದ ಅವರು ೧೯೩೯ರಲ್ಲಿ ರಾಜೀನಾಮೆಯನ್ನು ಕೊಟ್ಟರು. ಆ ಮೇಲೆ ಮುಖ್ಯಮಂತ್ರಿಯ ಹೊಣೆ ಹೊತ್ತ ಯೂ ಸಾರವರ ಮೇಲೂ ಜಪಾನಿ ಪರ ಆರೋಪವನ್ನು ಬ್ರಿಟಿಶರು ಹೊರಿಸಿರುವರು. ಬ್ರಹ್ಮದೇಶದ ಸ್ವಾತಂತ್ರ್ಯದ ಬಗ್ಗೆ ಬ್ರಿಟಿಶ ಸರಕಾರದೊಡನೆ ಮಾತುಕತೆ ನಡೆಸಲು ತೆರಳಿದ್ದ ಡಾ. ಯೂ ಸಾರವರನ್ನು ಬ್ರಿಟಿಶರು ಬಂಧಿಸಿ ಉಗಾಂಡಾ (ಆಫ್ರಿಕ) ದಲ್ಲಿ ಸ್ಥಾನಬದ್ಧತೆಯಲ್ಲಿಟ್ಟರು. ಚರ್ಚಿಲ್ ಮತ್ತು ಯೂ ಸಾರವರೊಳಗೆ ಭಿನ್ನಾಭಿಪ್ರಾಯವಾಗಿತ್ತಂತೆ.

## ಜಪಾನಿ "ಸ್ವಾತಂತ್ರ್ಯ"

ಆಂಗ್ಲೋ-ಅಮೇರಿಕನ್ನರ ವಿರುದ್ಧ ಯುದ್ಧ ಹೂಡಿದ ಜಪಾನರು ೧೯೪೨ ನೇ ಮಾರ್ಚ ತಿಂಗಳೊಳಗೆ ಅಖಿಲ ಬ್ರಹ್ಮದೇಶವನ್ನು ವಶಪಡಿಸಿಕೊಂಡರು. ಬ್ರಿಟಿಶ ಗವರ್ನರರೂ ಅವರನ್ನೇ ನಂಬಿಕೊಂಡಿದ್ದ ಅನೇಕ ಬ್ರಹ್ಮೀ ಮುಖಂಡರೂ ಹಿಂದುಸ್ತಾನಕ್ಕೆ ಓಡಿಬಂದರು. ಕೆಲವರು ಜಪಾನ

ರೊಡನೆ ಕೂಡಿಕೊಂಡರು. ಜಪಾನರೊಡನೆ ‘ ಸಹಕರಿಸಿದ ’ ವರಲ್ಲಿ ಡಾ. ಬಾ ಮಾ ದೊಡ್ಡ ಮುಖಂಡ. ಡಾ. ಬಾ ಮಾ ಬ್ರಹ್ಮದೇಶದಲ್ಲಿ ಸರಕಾರವನ್ನು ಸ್ಥಾಪಿಸಿದರು. ಬ್ರಹ್ಮೀಯರಿಗೆ “ ಸ್ವಾತಂತ್ರ ” ಕೊಟ್ಟಿರುವೆವೆಂದೂ ಜಪಾನರು ಘೋಷಿಸಿದರು. ಜಪಾನದೊಡನೆ ಡಾ. ಬಾ ಮಾರವರ ‘ ಸ್ವತಂತ್ರ ’ ಸರಕಾರ ಒಪ್ಪಂದವನ್ನು ಮಾಡಿಕೊಂಡಿತ್ತಂತೆ. ಆಂತರಿಕ ಆಡಳಿತೆಯ ಸಂಪೂರ್ಣ ಹೊಣೆ ಅಧಿಕಾರವನ್ನು ಬಿಟ್ಟುಕೊಡಲಾಗಿತ್ತೆಂದು ಜಪಾನರು ಹೇಳುತ್ತಿದ್ದರು. ಬ್ರಿಟಿಶರು ಇಷ್ಟು ‘ ಪ್ರಗತಿಪರ ’ ಧೋರಣವನ್ನು ವಹಿಸಿರಲಿಲ್ಲವೆಂದು ಹಲವು ಬ್ರಹ್ಮೀ ಜನರ ದೂರು. ಯುದ್ಧಕಾಲದಲ್ಲಿ ಬ್ರಹ್ಮೀ ಜನರ ವಿಶ್ವಾಸವನ್ನು ಗಳಿಸಲು ಜಪಾನರು ಈ ಧೋರಣವನ್ನು ತಾಳಿರಲೂ ಸಾಕು. ಯುದ್ಧದಲ್ಲಿ ಜಪಾನಿಗೆ ಜಯ ದೊರೆಯುತ್ತಿದ್ದರೆ ಅದು ಕೊನೆಗೆ ಬ್ರಹ್ಮದೇಶದಿಂದ ಗಂಟುಮೂಟೆ ಕಟ್ಟಿಕೊಂಡು ಹೊರಡುತ್ತಿತ್ತೇ? ಶೃಂಖಲೆಗಳಲ್ಲಿ ಬಿಗಿಯುವ ಕರಾರುಗಳನ್ನು ಹಾಕದೇ ಇರುತ್ತಿತ್ತೇ? ಏನು ಮಾಡುತ್ತಿತ್ತೋ? ಆ ವಿಷಯದಲ್ಲಿ ಭಿನ್ನಾಭಿಪ್ರಾಯಗಳನ್ನು ಕೊಡುವ ರಾಜಕಾರಣಿಗಳಿಗೆ ಕಡಿಮೆಯಿಲ್ಲ. ಏನಿದ್ದರೂ ಬ್ರಿಟಿಶರಂತೆ ಜಪಾನರೂ ಸಾಮ್ರಾಜ್ಯವಾದಿಗಳು. ಕಳೆದ ಅರ್ಧ ಶತಮಾನದ ಜಪಾನಿ ಇತಿಹಾಸವೇ ಅದಕ್ಕೆ ಸಾಕ್ಷಿ. ಸಾಮ್ರಾಜ್ಯಾಭಿಲಾಷೆಯಿಲ್ಲದೇ ಇರುತ್ತಿದ್ದರೆ ಕೋರಿಯಾ, ಚೀನ ಮೊದಲಾದ ದೇಶಗಳಿಗೆ ಜಪಾನ ದಂಡೆತ್ತಿ ಹೋಗುತ್ತಿದ್ದಿಲ್ಲ. ಕೊನೆಕೊನೆಗೆ ಬ್ರಹ್ಮೀ ದೇಶಪ್ರೇಮಿಗಳೂ ಹತಾಶರಾಗಿ ಜಪಾನಿ ವಿರುದ್ಧ ಚಟುವಟಿಕೆಯನ್ನು ನಡೆಸತೊಡಗಿದರು. ಬ್ರಹ್ಮದೇಶದಲ್ಲಿ ಜಪಾನರ ಸೋಲಿಗೆ ಈ ದೇಶಪ್ರೇಮಿಗಳ ಪ್ರತಿಭಟನೆಯೂ ಒಂದು ಕಾರಣವೆಂದು ಬ್ರಿಟಿಶ ಅಧಿಕಾರಿಗಳು ಒಪ್ಪಿಕೊಂಡರು.

## ದೇಶಪ್ರೇಮಿಗಳು

ಬ್ರಹ್ಮೀ ದೇಶಪ್ರೇಮಿಗಳನ್ನು ಸಂಘಟಿಸಿದವರು ಜನರಲ್ ಆಂಗ ಸಾಂಗರು. ಮಾರ್ಶಲ್ ಟಿಟೋನಂತೆ ಅವರ ಕೀರ್ತಿ ಹಬ್ಬಿದೆ ಬ್ರಹ್ಮದೇಶದಲ್ಲಿ. ಆಂಗ ಸಾಂಗ ಯುದ್ಧಮಂತ್ರಿ. ವಿದ್ಯಾರ್ಥಿ ಯೂನಿಯನ್ನದ

ಅಧ್ಯಕ್ಷ. ಫ್ಯಾಸಿಸ್ಟ ವಿರೋಧಿ ಸಂಸ್ಥೆಯ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿ ರುವರು. ಸ್ವಾತಂತ್ರ್ಯ ಪ್ರೇಮಿ. ಜಪಾನರು ಸ್ವಾತಂತ್ರ್ಯ ಕೊಡುವ ರೆಂಬ ಭರವಸೆ ತಪ್ಪಿತು. ಬ್ರಿಟಿಶರಂತೆ ಜಪಾನರ ಮೇಲೂ ದ್ವೇಷ ಬೆಳೆ ಯಿತು. ಜಪಾನರು ಸೋಲುವ ಪರಿಸ್ಥಿತಿ ಬಂದ ಕೂಡಲೇ ಆಂಗ ಸಾಂಗರ ಸೇನೆ ಶ್ವೇಪಗ್ಗೋಡದಲ್ಲಿ ರಾತ್ರಿ ಸಭೆಗೂಡಿತು. ಮರುದಿನ ಆ ಸೇನೆಯು ಸುಳಿವೇ ಹತ್ತಲಿಲ್ಲ. ಪೇಗು, ಇರಾವದಿ, ಟಾಂಟಬಿನ್ ಮೊದಲಾದ ಕಡೆ ಜಪಾನರೊಡನೆ ಆಂಗ ಸಾಂಗರ ಸೇನೆಯುದ್ಧ ಮಾಡುತ್ತಿತ್ತು. ಬ್ರಿಟಿಶರು ನುಗ್ಗಿದಾಗ ಅನೇಕ ನಗರಗಳೂ ಹಳ್ಳಿಗಳೂ ದೇಶಪ್ರೇಮಿಗಳ ವಶವಾಗಿ ದ್ದುವು. ಆದರೂ ಬ್ರಿಟಿಶ ಸಂಕೋಲೆಗಳು ತಪ್ಪಲಿಲ್ಲವಲ್ಲ !

## ಮತ್ತೆ ಬ್ರಿಟಿಶರು

ಜಪಾನ ಶರಣು ಹೋದುದರಿಂದ ಮತ್ತೆ ಬ್ರಿಟಿಶರು ಬ್ರಹ್ಮದೇಶಕ್ಕೆ ಪ್ರವೇಶಿಸಿದರು. ಜಪಾನರು ದಂಡೆತ್ತಿ ಬಂದಾಗ ಪಲಾಯನ ಮಾಡಿದ ಗವರ್ನರರಾದ ,ಸರ್ ಡಾರ್ಮನ ಸ್ಮಿಥ್‌ರವರಿಗೇ ಪುನಃ ಪಟ್ಟ ಕಟ್ಟಲಾ ಗಿದೆ. ಹಿಂದೆ ಮಾಡಿದ ತಪ್ಪುಗಳಿಂದ ಕೂಡಾ ಬ್ರಿಟನ್ ಹೊಸ ಪಾಠವನ್ನು ಕಲಿತಂತೆ ಕಾಣುವುದಿಲ್ಲ. ಬ್ರಹ್ಮದೇಶಕ್ಕೆ ನುಗ್ಗಿದ ಕೂಡಲೇ ಬ್ರಿಟಿಶರು ಸಂಪೂರ್ಣ ಸ್ವಾತಂತ್ರ್ಯವನ್ನು ಸಾರಿ ಬ್ರಹ್ಮೀಯರ ವಿಶ್ವಾಸವನ್ನು ಸಂಪಾ ದಿಸಬೇಕಾಗಿತ್ತು. ಸ್ವತಂತ್ರ ಬ್ರಹ್ಮೀ ಸರಕಾರದೊಡನೆ ರಾಜಕೀಯ ಆರ್ಥಿಕ ಮತ್ತು ವ್ಯಾಪಾರೀ ಒಪ್ಪಂದಗಳನ್ನು ಮಾಡಿಕೊಂಡು ಬ್ರಿಟನ ತನ್ನ ಹಕ್ಕು ಹಿತಗಳನ್ನು ಸಂರಕ್ಷಿಸಿಕೊಳ್ಳಬಹುದಿತ್ತು. ಹೋಗಲಿ, ಸಂಪೂರ್ಣ ಸ್ವಾತಂತ್ರ್ಯವಲ್ಲದೇ ಇದ್ದರೆ, ಸಾಮಂತ ಸ್ವರಾಜ್ಯ (ಡೊಮೀನಿ ಯನ ಸ್ಟೇಟಸ್) ಸ್ಥಾನಮಾನವನ್ನಾದರೂ ಮನ್ನಿಸದೇ ಇದ್ದುದು ಬ್ರಿಟ ನದ ಮಹಾಪರಾಧ ಅವರ ಬದಲು ಹಳೆಯ ಪ್ರತಿಗಾಮಿ ಗವರ್ನರ ನನ್ನು ನೇಮಿಸಲಾಗಿದೆ. ಅವರ ಅಧೀನ ಬ್ರಿಟಿಶರ ರಾಗಕ್ಕೆ ಸರಿಯಾಗಿ ಶ್ರುತಿ ಹಿಡಿಯುವವರ ಮಂತ್ರಿಮಂಡಳ. ಹಿಂದಿನದೇ ಧೋರಣ. ಇದ ರಿಂದ ಆಂಗ ಸಾಂಗ ಹಾಗೂ ಇನ್ನಿತರ ದೇಶಪ್ರೇಮಿಗಳು ಕೆರಳಿರುವರು. ಪ್ರಜಾ ಸ್ವಾತಂತ್ರ್ಯ ಲೀಗ್ ಈಗಾಗಲೇ ಅಸಮಾಧಾನದಿಂದ ಕುದಿಯು

ತ್ತಿದೆ. ಮಂತ್ರಿಮಂಡಳದಲ್ಲಿದ್ದ ಯೂಸಾರವರ ಮಿಯೋಚಿತ್ ಪಕ್ಷದ ಮೂವರು ಸದಸ್ಯರು ರಾಜೀನಾಮೆ ಕೊಟ್ಟಿರುವರು. ರಾಷ್ಟ್ರೀಯ ಆಂದೋಲನ ಯಾವ ಗಳಿಗೆಯಲ್ಲಾದರೂ ಸ್ಫೋಟವಾಗಬಹುದು.

## ಪ್ರಾಚೀನ ಬರ್ಮಾ

ಬರ್ಮಾ ಕೂಡಾ ಹಿಂದುಸ್ತಾನದ ಪ್ರಾಚೀನ ವಸಾಹತು. ಹಿಂದುಸ್ತಾನಕ್ಕೆ ಅದು ತಾಗಿಕೊಂಡಿರುವುದರಿಂದ ನೆಲ ಜಲಮಾರ್ಗಗಳಿಂದ ಹಿಂದೀಯರು ಕ್ರಿಸ್ತಪೂರ್ವದಲ್ಲೇ ವಲಸೆಹೋದರು. ಶಾಕ್ಯ ವಂಶಕ್ಕೆ ಸೇರಿದ ರಾಜಕುಮಾರ ಅಭಿರಾಜನು ಉತ್ತರ ಬರ್ಮಾಕ್ಕೆ ದಂಡೆತ್ತಿ ಹೋದ ಸಂಗತಿ ಬರ್ಮೀ ಜನಪದ ಸಾಹಿತ್ಯದಲ್ಲಿದೆ. ಅಭಿರಾಜನು ಸಂಕಿಶ (ಇಂದಿನ ಟಾಗಂಗ) ನಗರವನ್ನು ಕಟ್ಟಿದ. ದೇಶದ ಉತ್ತರ ಭಾಗದಲ್ಲಿದ್ದ ಪ್ಯೂ, ಕರೆನ ಮತ್ತು ಮ್ರಮ್ಮ ಪಂಗಡಗಳಿಗೆ ಸೇರಿದ ಜನರೂ ದಕ್ಷಿಣದಲ್ಲಿದ್ದ ಮೋನರು ಅಥವಾ ತಲಿಂಗರೂ ಹಿಂದೂ ಪ್ರಭಾವಕ್ಕೆ ಒಳಗಾದರು. ಹಿಂದೀಯರು ಸಾಗರದ ಅಲೆಗಳಂತೆ ತಂಡೋಪತಂಡವಾಗಿ ಪದೇ ಪದೇ ಬಂದುದರಿಂದ ದೇಶೀ ಜನ ಅವರೊಳಗೆ ಮಿಲನವಾಗದೆ ಗತ್ಯಂತರವಿರಲಿಲ್ಲ. ದೇಶೀ ಪಂಗಡಗಳೊಳಗೆ ಪ್ಯೂ ಮತ್ತು ಮ್ರಮ್ಮರು ಸ್ವಲ್ಪ ಪ್ರಬಲ ಜನ. ಧೀರರು. ಇವರು ಒಂದೇ ಜನಾಂಗದ ಎರಡು ಕುಲ. ಪ್ಯೂ ಜನರಿಗಿಂತ ಮೋನರು ಅಥವಾ ತಲಿಂಗರು ಸ್ವಲ್ಪ ಸುಸಂಸ್ಕೃತರು. ಆದರೆ ಕೊನೆಗೆ ಮ್ರಮ್ಮರು ಉಳಿದೆಲ್ಲ ಪಂಗಡಗಳನ್ನು ಸದೆಬಡಿದು ತಾವೇ ಪ್ರಬಲರಾದರು. ಮ್ರಮ್ಮರ ದೇಶವಾದುದರಿಂದ ಬ್ರಹ್ಮದೇಶವೆಂದು ಹೆಸರಾಯಿತು ನಾಡಿಗೆ.

### ಶ್ರೀಕ್ಷೇತ್ರ

ಕ್ರಿಸ್ತಶಕ ನೂರರಿಂದ ಏಳನೇ ಶತಮಾನದ ವರೆಗೆ ಬರ್ಮಾದಲ್ಲಿ ಪ್ಯೂ ಜನರ ರಾಜ್ಯಗಳು ಮೆರೆದುವು. ಇವುಗಳಲ್ಲೆಲ್ಲ ಶ್ರೀಕ್ಷೇತ್ರ

(ಇಂದಿನ ಪ್ರೋಂ) ರಾಜ್ಯ ದೊಡ್ಡದು. ಜಯಚಂದ್ರವರ್ಮ, ಹರಿವಿಕ್ರಮ, ಸೂರ್ಯವಿಕ್ರಮ, ಪ್ರಭುವರ್ಮ ಮೊದಲಾದ ರಾಜರು ಶ್ರೀಕ್ಷೇತ್ರದಲ್ಲಿ ಆಳಿದರು. ಹಿಂದುಸ್ತಾನದ ಪೂರ್ವದಲ್ಲಿ ಶ್ರೀಕ್ಷೇತ್ರವೇ ಅತ್ಯಂತ ಬಲಿಷ್ಠವಾಗಿತ್ತೆಂದು ಚೀನಿ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಯುನ್ನಾನದಲ್ಲಿ ಥಾಯಿ ರಾಜ್ಯ ಸ್ಥಾಪಿಸಲ್ಪಟ್ಟ ಮೇಲೆ ಅವರು ಪ್ಯೂ ದೇಶದ ಮೇಲೆ ದಂಡೆತ್ತಿ ಬಂದರು (ಕ್ರಿ. ಶ. ೭೫೪). ಪ್ಯೂ ದೊರೆ ಒಪ್ಪಂದ ಮಾಡಿಕೊಂಡು ಥಾಯಿ ರಾಜನಿಗೆ ಕಪ್ಪಕಾಣಿಕೆಗಳನ್ನು ಕೊಡಲೊಪ್ಪಿದ. ಪ್ಯೂ ಅರಸು ಚೀನಕ್ಕೂ ರಾಯಭಾರಿಯನ್ನು ಕಳಿಸಿ ಕೊಟ್ಟಿದ್ದ. ಪ್ಯೂ ರಾಜ್ಯ, ರಾಜಧಾನಿ, ಅರಸರು, ನಾಗರಿಕತೆಗಳನ್ನು ಚೀನಿ ಪುರಾಣ ಗ್ರಂಥಗಳಲ್ಲಿ ವಿವರಿಸಲಾಗಿದೆ. ಪ್ಯೂ ಅರಸ "ಮಹಾರಾಜ". ರಾಜಧಾನಿಯ ಗೋಡೆಯ ಸುತ್ತಳತೆ ೨೭ ಮೈಲು. ಅವರ ಜೀವನ ಪ್ರೇಮಮಯ. ಮರಣದಂಡನೆಯಿದ್ದಿರಲಿಲ್ಲ. ಬೇಡಿ, ಸಂಕೋಲೆಗಳನ್ನು ತೊಡಿಸುವ ಶಿಕ್ಷೆಯೂ ಇರಲಿಲ್ಲ. ನಯ, ವಿನಯ ಸಂಪನ್ನ ಜನ ಅವರು. ಮಾನಮರ್ಯಾದೆ, ಸಭ್ಯತನಗಳಿಗೆ ಬೆಲೆ. ಅವರ ನಾಣ್ಯಗಳೂ ಚಿನ್ನ ಬೆಳ್ಳಿಯವು. ಸ್ತ್ರೀಯರು ತಲೆ ಬಾಚಿ ಹೆರಳು ಹಾಕುತ್ತಿದ್ದರು ಮತ್ತು ಮನೆಯಿಂದ ಹೊರಗೆ ಹೊರಟಾಗ ಪ್ರತಿಯೊಬ್ಬರೂ ಕೈಯಲ್ಲೊಂದು ಬೀಸಣಿಕೆ ಒಯ್ಯುತ್ತಿದ್ದರು. ಪ್ಯೂ ಜನರ ನಾಗರಿಕತೆ ಬಹಳ ಘನವಾಗಿತ್ತು. ಆದರೆ ದುರದೃಷ್ಟದಿಂದ ಒಂಬತ್ತನೇ ಶತಮಾನದಲ್ಲಿ ಪ್ಯೂ ರಾಜ್ಯ ನಾಶವಾಯಿತು. ಥಾಯಿ ಜನರು ಜಯಿಸಿದರೆಂದೂ ಮೋನರು ಗೆದ್ದುಕೊಂಡರೆಂದೂ ಇತಿಹಾಸ ಕಾರರು ಒಂದೊಂದು ವಿಧ ಹೇಳುತಿದ್ದಾರೆ. ಅದೇನಿದ್ದರೂ ಒಂಬತ್ತನೇ ಶತಮಾನವಾದ ಮೇಲೆ ಅದರ ಕೀರ್ತಿ ಕರಗಿತು. ಬೇರೆ ಜನರೊಡನೆ ಅವರು ಸಮರಸರಾಗಿ ಹೋದರು.

## ವೈಶಾಲಿ

ಪ್ಯೂ ರಾಜ್ಯದೊಂದಿಗೆ ತಲೆ ಎತ್ತಿ ಬಾಳಿದ, ಇನ್ನೊಂದು ರಾಜ್ಯ ವೈಶಾಲಿ. ಆರಾಕಾನದಲ್ಲಿ ಅದು ಬೆಳಕಿಗೆ ಬಂದಿತು. ಎಂಟರಿಂದ

ಹತ್ತನೇ ಶತಮಾನಗಳ ವರೆಗೆ ಅದರ ವೈಭವದ ಕಾಲ. ಅದರ ಮೊದಲೇ ಆರಾಕಾನದಲ್ಲಿ ರಾಮಾವತಿ, ಧನ್ಯವತಿ ಕುಂಡು ರಾಜ್ಯಗಳಿದ್ದುವು. ಆದರೆ ಕೀರ್ತಿ ಹೊಂದಿದುದು ವೈಶಾಲಿಯೇ ಸರಿ. ಕಾಶಿಯ ರಾಜಕುಮಾರನೊಬ್ಬನು ಆರಾಕಾನಕ್ಕೆ ಬಂದು ರಾಮಾವತಿ ರಾಜ್ಯ ಕಟ್ಟಿದ. ಈ ರಾಜವಂಶೀಯರು ಟ.ಗಂಗ ರಾಜವಂಶದೊಂದಿಗೆ ವಿವಾಹ ಸಂಬಂಧ ಬೆಳೆಸಿದರು. ವೈಶಾಲಿ ರಾಜ್ಯ ಸ್ಥಾಪಿಸಿದವರೂ ಅದೇ ವಂಶಕ್ಕೆ ಸೇರಿದವರೆಂದು ಇತಿಹಾಸಕಾರರ ಅಭಿಪ್ರಾಯ. ವೈಶಾಲಿಯಲ್ಲಿ ಧರ್ಮಚಂದ್ರ, ನೀತಿಚಂದ್ರ, ವೀರಚಂದ್ರ. ಬಾಲಚಂದ್ರ, ದೇವಚಂದ್ರ, ಪ್ರೀತಿಚಂದ್ರ, ಮಹಾವೀರ, ಧರ್ಮಶೂರ, ಆನಂದಚಂದ್ರ ಮೊದಲಾದ ಅನೇಕ ರಾಜರು ರಾಜ್ಯವಾಳಿದ ಶಿಲಾಲೇಖನಗಳು ಈಗ ದೊರೆತಿವೆ. ಈ ರಾಜರ ಕಾಲದ ಚಿನ್ನದ ನಾಣ್ಯಗಳು ಲಭಿಸಿವೆ ಈ ಅರಸರು ಬ್ರಾಹ್ಮಣರಿಗೆ ಭೂದಾನ ಮಾಡಿದುದು, ಬುದ್ಧ ವಿಹಾರ ಗಳನ್ನು ಕಟ್ಟಿಸಿದುದು, ರಸ್ತೆ ಬಾವಿಗಳನ್ನು ಕಡಿಸಿದುದು ಕೂಡಾ ವಿವರಿಸಲ್ಪಟ್ಟಿವೆ. ಹತ್ತನೇ ಶತಮಾನದಲ್ಲಿ ವೈಶಾಲಿ ಅವನತಿ ಹೊಂದಿದರೂ ತುಂಡರಸರು ರಾಜ್ಯವಾಳುತ್ತ ಬಂದರು.

## ಮ್ರಮ್ಮರ ಒಡೆತನ

ಹನ್ನೊಂದನೆ ಶತಮಾನದ ಆರಂಭದಲ್ಲಿ ಮ್ರಮ್ಮರು ದೇಶದಲ್ಲಿ ತಮ್ಮ ಒಡೆತನವನ್ನು ಸ್ಥಾಪಿಸಿದರು. ಅವರು ಹೇಗೆ ಅಧಿಕಾರಕ್ಕೆ ಬಂದ ರೆಂಬುದು ಸ್ಪಷ್ಟವಾಗಿಲ್ಲ. ಉತ್ತರಬರ್ಮಾದಲ್ಲಿ ಪ್ಯೂಜನರು ಅಬಲರಾಗುತ್ತ ಬಂದಂತೆ ಸ್ಥಾನಮಾನ ಗಳಿಸಲು ಮ್ರಮ್ಮರಿಗೆ ಅವಕಾಶ ದೊರೆಯಿತೋ ಏನೋ! ಒಂಬತ್ತು ಮತ್ತು ಹತ್ತನೇ ಶಮಾನಗಳಲ್ಲಿ ಮ್ರಮ್ಮರು ತಂಡೋ ಪತಂಡವಾಗಿ ನುಗ್ಗಿದರು. ಮ್ರಮ್ಮರು ಟಿಬೇತು-ದ್ರಾವಿಡ ಮಿಶ್ರ ಜನಾಂಗ ಈ ಕುಲದ ಜನ ಮೊದಲು ಬಹ್ಮಪುತ್ರ ನದಿಯ ತಪ್ಪಲು ಭೂಮಿಯಲ್ಲಿ ವಾಸಿಸುತಿದ್ದರೆಂದು ಹೇಳುವವರೂ ಉಂಟು. ಪ್ಯೂ ಜನರಂತೆ ಮ್ರಮ್ಮರು ಅಷ್ಟು ನಾಗರಿಕ ಕುಲವಲ್ಲ. ಸ್ವತಂತ್ರ ಲಿಪಿ ಮತ್ತು ಸಾಹಿತ್ಯ ಕೂಡಾ ಇದ್ದಿಲ್ಲ ಅವರಿಗೆ. ಪರಾಜಿತರಾದ ಮೋನರ ಭಾಷೆ, ಸಾಹಿತ್ಯ, ಧರ್ಮಗ

ಳನ್ನೇ ಅವರು ಸ್ವೀಕರಿಸಿದರಂತೆ. ಪಾಗಣ ಬ್ರಹ್ಮರ ರಾಜಧಾನಿ. ಆಗ ಅದಕ್ಕೆ ಅರಿಮರ್ಧನಪುರವೆಂದೂ ಹೆಸರಿತ್ತು. ೧೦೧೦ರಲ್ಲಿ ರಾಜ್ಯಾಭಿಷಕ್ತನಾದ ಅನಿರುದ್ಧ ದೊರೆ ಬರ್ಮಾದ ದೊಡ್ಡ ಅರಸ. ಸಣ್ಣ ಪಾಗಣ ರಾಜ್ಯವನ್ನು ವಿಸ್ತರಿಸಿ, ಸಾಮ್ರಾಜ್ಯವನ್ನು ಕಟ್ಟಿದ ಯಶಸ್ಸು, ಸಾಹಸ ಅವನದ್ದು. ಬರ್ಮಾದ ಐಕ್ಯವನ್ನು ಸಾಧಿಸಿ ಅದು ಅತ್ಯಂತ ಬಲಿಷ್ಠ ರಾಷ್ಟ್ರವಾಗುವಂತೆ ಮಾಡಿದ ಬಲ್ಮೆ ಕೂಡಾ ಅನಿರುದ್ಧನದೇ. ಒರಬು ಬ್ರಹ್ಮ ಜನರನ್ನು ಸುಸಂಸ್ಕೃತರನ್ನಾಗಿ ಮಾಡಿ ಅನಿರುದ್ಧ ಅಜರಾಮರ ಕೀರ್ತಿ ಗಳಿಸಿದ.

## ಅನಿರುದ್ಧ

ಅನಿರುದ್ಧ ರಾಜ್ಯವಾಳುತ್ತಿದ್ದಾಗ ಉತ್ತರ ಬರ್ಮಾದಲ್ಲಿ ಆರಿ ಜನರ ವರ್ಚಸ್ಸು ಬಹಳವಿದ್ದಿತ್ತು. ಆರಿ ಜನ ಕ್ರಾಂತಿಕಾರರು. ಬುದ್ಧನ ಹಾಗೂ ಶಕ್ತಿಯ ಉಪಾಸಕರು. ತಲೆಗೂದಲು ಮತ್ತು ಗಡ್ಡ ಬೆಳಸುತಿದ್ದರು. ಕರಿ ಅಂಗಿ. ಮದ್ಯಪ್ರಿಯರು. ಅಶ್ವಾರೋಹಿಗಳಾಗಿದ್ದ ಇವರು ಯುದ್ಧ ಕಲಾ ನಿಪುಣರು. ಮಹಾಯಾನ ಬೌದ್ಧ ಧರ್ಮ ಪ್ರತಿಪಾದಿಗಳೆಂದು ವಾದಿಸುತ್ತಿದ್ದರೂ ಸ್ವಲ್ಪ ನಾಸ್ತಿಕವಾದಿಗಳೇ. ಅನಿರುದ್ಧನಿಗೆ ಅವರ ಬೋಧನೆ ರುಚಿಸಲಿಲ್ಲ. ಅರಹಾನನೆಂಬ ಬೌದ್ಧ ಬ್ರಾಹ್ಮಣನು ನಿಜವಾದ ಧರ್ಮ ರಹಸ್ಯವನ್ನು ಬೋಧಿಸಲು ಅನಿರುದ್ಧನು ಅದಕ್ಕೆ ಮನಸೋತ. ಅರಸನಿಂದ ಪ್ರೋತ್ಸಾಹ ದೊರೆತಕೂಡಲೇ ಅರಹಾನನು ಮೋನ್ ದೇಶದಿಂದ ಇನ್ನೂ ಅನೇಕ ಭಿಕ್ಷುಗಳನ್ನು ಕರೆಸಿಕೊಂಡ. ಆರಿಜನರವಿರುದ್ಧ 'ಧರ್ಮಯುದ್ಧ'ವೇ ನಡೆಯಿತು. ಅನಿರುದ್ಧನ ಬೆಂಬಲದಿಂದ ಅರಹಾನನು ಆರಿ ಜನರ ಅಧಿಕಾರವನ್ನು ಅಡಗಿಸಲು ಸಮರ್ಥನಾದ. ಅನಿರುದ್ಧನಿಗೆ ಈಗ ಬೌದ್ಧ ಧರ್ಮ ಗ್ರಂಥಗಳು ಬೇಕಾದುವು. ಥಾಟನದಲ್ಲಿದ್ದ ಮೋನ ಅರಸನಿಂದ ಪಡೆದುಕೊಳ್ಳಲು ಅರಹಾನ ತಿಳಿಸಿದ. ಮೋನ ರಾಜನು ಅನಿರುದ್ಧನ ವಿನಂತಿಯನ್ನು ಮನ್ನಿಸದೆ ರಾಜದೂತರನ್ನು ಅವಮಾನಗೊಳಿಸಿದ. ಅನಿರುದ್ಧನು ಇದರಿಂದ ರೇಗಿ ಥಾಟನ ರಾಜ್ಯದ ಮೇಲೆ ದಂಡೆತ್ತಿ ಹೋದ. ಸೆಲ್ಲಿದೆ ಮನುಹಾ ದೊರೆಯನ್ನು ಸೋಲಿಸಿ, ಚಿನ್ನದ ಬೇಡಿಗಳನ್ನು ಅವನ ಕೈಗೆ ತೊಡಿಸಿ ಪಾಗಣಕ್ಕೆ ಕರೆದು ತಂದ. ಬೌದ್ಧ ಗ್ರಂಥಗಳೂ ಅವನಿಗೆ

ದೊರೆತವು. ಮೂವತ್ತೆರಡು ಬಿಳಿ ಆನೆಗಳಲ್ಲಿ ಅನಿರುದ್ಧ ಪಾಗಣಕ್ಕೆ ಬೌದ್ಧ ಗ್ರಂಥಗಳನ್ನು ಹೊರಿಸಿದ. ಮಾರ್ಗಮಧ್ಯೆ ಪ್ಯೂ ರಾಜಧಾನಿಯಾಗಿದ್ದ ಶ್ರೀಕ್ಷೇತ್ರದ ಕೋಟೆಯ ಗೋಡೆಯನ್ನು ಒಡೆದು ಬಹಳ ಅಮೂಲ್ಯವಾದ ಗ್ರಂಥಗಳನ್ನು ಪಾಗಣಕ್ಕೆ ತಂದ.

## ಏಕಚಕ್ರಾಧಿಪತಿ

ಆ ಮೇಲೆ ಅನಿರುದ್ಧನು ಉತ್ತರ ಆರಾಕಾನಕ್ಕೆ ನುಗ್ಗಿ ಅಲ್ಲಿಯ ಅರಸನನ್ನು ಸೋಲಿಸಿದ. ಆರಾಕಾನಕ್ಕೆ ಬಂದ ಅನಿರುದ್ಧ ಚಿತಗಾಂಗ ಜಿಲ್ಲೆಗೂ ಕಾಲು ಚಾಚಿದನಂತೆ. ಆದರೆ ಹಿಂದುಸ್ಥಾನದ ಗಡಿದಾಟಿ ಬಂದ ಅವನ ಸೇನೆಗೆ ಜಯ ಲಭಿಸಿದಂತೆ ಕಾಣುವುದಿಲ್ಲ. ಮುಂದೆ, ಬರ್ಮಾದ ಪರಮ ವೈರಿ ಥಾಯಿ ರಾಜನ ವಿರುದ್ಧ ಅನಿರುದ್ಧ ಯುದ್ಧ ಸಾರಿದ. ಆದರೆ ಕೊನೆಗೆ ಇತ್ತಂಡದವರೂ ಒಪ್ಪಂದ ಮಾಡಿಕೊಂಡರು. ಯುದ್ಧದಿಂದ ಹಿಂದಿರುಗುತಿದ್ದಾಗ ಅನಿರುದ್ಧನ ಸೇನೆ ಶಾನ ಸಂಸ್ಥಾನಗಳಿಗೂ ಪ್ರವೇಶಿಸಿತು. ಆ ಭಾಗದಲ್ಲಿದ್ದ ಅರಸರೂ ಪಾಗಣದ ಸಾಮಂತರಾಜರಾಗಲೊಪ್ಪಿ ಅನಿರುದ್ಧನಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸಿದರು. ಅನಿರುದ್ಧನು ಶಾನ ಸಂಸ್ಥಾನದ ರಾಜಪುತ್ರಿಯನ್ನು ಮದುವೆಯಾದ. ಹಿಂದುಸ್ಥಾನದ ರಾಜಪುತ್ರಿ ಪಂಚಕಲ್ಯಾಣಿಯನ್ನೂ ಅನಿರುದ್ಧ ವಿವಾಹವಾದ. ಪಂಚಕಲ್ಯಾಣಿ ಬರ್ಮಾಕ್ಕೆ ಬಂದು ರಾಜನೊಡನೆ ಪ್ರೇಮ ಬೆಳೆಸಿದಳು. ಇದನ್ನು ವರ್ಣಿಸುವ ಅನೇಕ ಕಥೆಗಳು ಇನ್ನೂ ಬರ್ಮೀ ಹಳ್ಳಿ ಜನರಿಗೆ ಗೊತ್ತಿವೆ. ದಂಡೆತ್ತಿ ಹೋದಲ್ಲೆಲ್ಲ ಅನಿರುದ್ಧನಿಗೆ ಜಯ. ಸ್ವಲ್ಪ ಸಮಯದೊಳಗಾಗಿ ಅನಿರುದ್ಧ ಅಖಿಲ ಬರ್ಮಾದ ಚಕ್ರಾಧಿಪತಿಯಾದ. ದೇಶದ ರಾಜಕೀಯ ಐಕ್ಯದ ಕೀರ್ತಿ ಅವನಿಗೇ ಸಲ್ಲುತ್ತದೆ.

## ಬೌದ್ಧ ಧರ್ಮ ರಕ್ಷಕ

ಅನಿರುದ್ಧನ ಕೀರ್ತಿ ದೇಶವಿದೇಶಗಳಿಗೆ ವ್ಯಾಪಿಸಿತು. 'ಬೌದ್ಧ ಧರ್ಮ ರಕ್ಷಕ 'ನೆಂದು ಎಲ್ಲರೂ ಅವನನ್ನು ಕೊಂಡಾಡಿದರು. ಲಿಪಿ, ಭಾಷೆ, ಸಾಹಿತ್ಯಗಳಿಗೆ ಚೇತನಸ್ವರೂಪ ದೊರೆತುದರಿಂದ ಮ್ರಮ್ಮ ಜನರೂ

ಅನಿರುದ್ಧನನ್ನು ಅತಿಯಾಗಿ ಪ್ರೀತಿಸಿದರು. ಮ್ರಮ್ಮರಿಗೆ ಸ್ವತಂತ್ರ ಲಿಪಿ, ಸಾಹಿತ್ಯಗಳಿರಲಿಲ್ಲ. ಅವರು ಮೋನರಿಂದ ಅವುಗಳನ್ನು ಪಡೆದುಕೊಂಡರು. ಮೋನ ರಾಜ್ಯ ನಶಿಸಿದರೂ ಮ್ರಮ್ಮರ ಆಳಿಕೆಯಲ್ಲಿ ಒಂದು ರೀತಿಯಲ್ಲಿ ಮೋನರ ಸಂಸ್ಕೃತಿಯು ಚಿಗುರಿತೆಂದೂ ಹೇಳಬಹುದು. ಈ ರೀತಿಯಾಗಿ ಪರಾಜಿತ ಜನರ ಲಿಪಿ, ಭಾಷೆ, ಸಂಸ್ಕೃತಿ ಗೆದ್ದವರಮೇಲೆ ಪ್ರಭಾವ ಬೀರಿದುದು ವಿರಳ. ಇತಿಹಾಸದಲ್ಲಿ ಅಂಥ ಘಟನೆಗಳು ಕಡಿಮೆ. ಹೀನಯಾನ ಬುದ್ಧ ಧರ್ಮಕ್ಕೆ ಅನಿರುದ್ಧನು ಬಹಳ ಪ್ರೋತ್ಸಾಹವಿತ್ತ. ಬೌದ್ಧ ಗೋಪುರ, ವಿಹಾರ, ಮಠಗಳನ್ನೂ ರಚಿಸಿದ. ಶ್ವೇ ಪಗೋಡವನ್ನು ಅನಿರುದ್ಧನೇ ಕಟ್ಟಿಸಿದ. ಅನೇಕ ಶತಮಾನಗಳು ಉರುಳಿದರೂ ಶ್ವೇ ಪಗೋಡ ಅಳಿಯದೆ ಈಗಲೂ ತಲೆಎತ್ತಿ ನಿಂತಿದೆ. ಶೋಭಿಸುತ್ತಿದೆ. ಜಗತ್ತಿನ ರಮಣೀಯ ಕಟ್ಟಡಗಳಲ್ಲಿ ಇದೂ ಒಂದು. ಶ್ವೇ ಪಗೋಡದ ರಚನೆಯ ವಿಷಯದಲ್ಲಿ ಮನೋಹರ ಕಥೆಯೊಂದುಂಟು. ದಕ್ಷಿಣ ಹಿಂದುಸ್ತಾನದ ಚೋಳರು ಸಿಲೋನಿನ ಮೇಲೆ ದಂಡೆತ್ತಿ ಹೋದಾಗ ಸಹಾಯ ನೀಡಬೇಕೆಂದು ಸಿಲೋನಿನ ದೊರೆ ಅನಿರುದ್ಧನಿಗೆ ಬೇಡಿಕೊಂಡ. ಅದಕ್ಕಾಗಿ ಅನಿರುದ್ಧನು ಸಿದ್ಧತೆ ನಡೆಸುತ್ತಿದ್ದಾಗಲೇ ಚೋಳರಿಗೆ ಸೋಲೊದಗಿದ ವಾರ್ತೆ ಮುಟ್ಟಿತು. ಹೀಗಿದ್ದರೂ ಯುದ್ಧದಿಂದ ಸಿಲೋನಿಗೆ ಅಪಾರ ಹಾನಿಸಂಭವಿಸಿತು. ಧರ್ಮಗ್ರಂಥಳನ್ನು ಭಿಕ್ಷುಕಗಳನ್ನು ಕಳಿಸಿದರೆ ಉಪಕಾರವೆಂದು ಸಿಲೋನ್ ಮೊರೆಯಿಟ್ಟಿತು. ಸಿಲೋನಿನಲ್ಲಿದ್ದ ಬುದ್ಧದೇವನ ಹಲ್ಲನ್ನು ಕೊಟ್ಟರೆ ವಿನಂತಿಯನ್ನು ಮನ್ನಿಸುವೆನೆಂದ ಅನಿರುದ್ಧ. ಸಿಲೋನದ ದೊರೆ ಅದೇ ಆಕಾರದ ಹಲ್ಲೊಂದನ್ನು ಕಳಿಸಿಕೊಟ್ಟ. ಚಿನ್ನದ ಸಂಪುಟದಲ್ಲಿ ಆ ಹಲ್ಲನ್ನು ಹಡಗದ ಮೂಲಕ ತರಿಸಿದರು. ಹಡಗವು ಇರಾವದಿ ನದಿಗೆ ಪ್ರವೇಶಿಸಿ, ಪಾಗಣದ ವರೆಗೂ ಬಂದಿತು. ಆಗ ಅನಿರುದ್ಧನೇ ಕುತ್ತಿಗೆಯವರೆಗೆ ನದಿ ನೀರಲ್ಲಿಳಿದು ಆ ಸಂಪುಟವನ್ನು ಹೊತ್ತು ತಂದ. ಆ ಹಲ್ಲಿನ ಪ್ರತಿಷ್ಠೆಗಾಗಿ ಶ್ವೇಪಗೋಡ. ಅನಿರುದ್ಧನ ಕಾಲದಲ್ಲಿ ಅದರ ರಚನೆ ಪರಿಪೂರ್ಣವಾಗಲಿಲ್ಲ. ಅವನ ಮಗ ಕಿಯಾಂಜಿತ ಆ ಕೆಲಸವನ್ನು ಮುಗಿಸಿದ. ಕಿಯಾಂಜಿತನು ಹಿಂದುಸ್ತಾನದಿಂದ ಶಿಲ್ಪಿಗಳನ್ನು ಕರೆಸಿ ಪಾಗಣದಲ್ಲಿ ಆನಂದ ಬುದ್ಧ ದೇವಾಲ

ಯವನ್ನೂ ಇನ್ನಿತರ ೫೦ ಪಗೋಡಗಳನ್ನೂ ಕಟ್ಟಿಸಿದ. ಕಿಯಾಂಜಿತನು ಬುದ್ಧ ಗಯಾದಲ್ಲಿದ್ದ ದೇವಾಲಯವನ್ನೂ ದುರಸ್ತಿಗೊಳಿಸಿ ಅದನ್ನು ಅಲಂಕರಿಸಲು ಹಡಗದಲ್ಲಿ ವಜ್ರ ವೈಢೂರ್ಯಗಳನ್ನು ಮುತ್ತು ರತ್ನಗಳನ್ನು ಕಳಿಸಿದ. ಕಿಯಾಂಜಿತನ ಪ್ರಭಾವಕ್ಕೆ ಮನಸೋತ ದಕ್ಷಿಣ ಹಿಂದುಸ್ತಾನದ ಚೋಳ ದೊರೆ ಬುದ್ಧಾವಲಂಬಿಯಾದ ಮತ್ತು ತನ್ನ ಮಗಳನ್ನು ಮದುವೆ ಮಾಡಿಕೊಟ್ಟ.

## ಮೊಂಗೋಲರ ದಂಡಯಾತ್ರೆ

ಕಿಯಾಂಜಿತನ ತರುವಾಯ, ಅಲಾಂಗಸಿತ, ನಾರದ, ನರಸಿಂಹ ಮೊದಲಾದ ರಾಜರು ಪಟ್ಟಕ್ಕೆ ಬಂದರು. ಇದೇ ವಂಶದ ನರಸಿಂಹಪತಿ ರಾಜನ ಕಾಲಕ್ಕೆ ಎಂದರೆ ೧೨೭೪ ರಲ್ಲಿ ಬರ್ಮಾಕ್ಕೆ ಗಂಡಾಂತರ ಬಂತು. ನರಸಿಂಹಪತಿ ಸುಖಲೋಲ. ಸ್ತ್ರೀಮೋಹ ಅವನಿಗೆ ವಿಶೇಷ. ಮೂರು ಸಾವಿರ ವೇಶ್ಯೆಯರನ್ನಿಟ್ಟುಕೊಂಡಿದ್ದೇನೆಂದು ಹೇಳುತ್ತಿದ್ದನಂತೆ. ಬಹಳ ಬಿಂಕದ ಕೋಳಿ. ಸಂಕಟಕಾಲದಲ್ಲಿ ದೇಶವನ್ನು ರಕ್ಷಿಸಲು ಇಂಥ ಅರಸ ಅಸಮರ್ಥನೇ ಸರಿ. ಏಕೆಂದರೆ ಪ್ರಜೆಗಳಿಗೆ ಅವನ ಮೇಲೆ ಭಕ್ತಿ, ವಿಶ್ವಾಸ, ನಿಷ್ಠೆ ಅಷ್ಟಕಷ್ಟೆ. ಅದರಂತೆ ಬರ್ಮಾದ ಪಾಡು ಪಟ್ಟಾಯಿತು. ೧೨೭೩ರಲ್ಲಿ ಕುಬಲಾಯಿಖಾನನು ಯುನ್ನಾನ್ ಪ್ರಾಂತವನ್ನು ಆಕ್ರಮಿಸಿದ. ತನ್ನ ಪ್ರಭುತ್ವವನ್ನು ಮನ್ನಿಸಬೇಕೆಂದು ಬರ್ಮೀ ಅರಸನೆಡೆಗೆ ದೂತರನ್ನು ಕಳಿಸಿದ. ನರಸಿಂಹಪತಿ ಆ ದೂತರ ಕೊಲೆ ಮಾಡಿಸಿದ. ಕುಬಲಾಯಿಖಾನ್ ಮುಯ್ಯಿ ತೀರಿಸಿಕೊಳ್ಳಲಿಲ್ಲ. ಆದರೆ ನಾಲ್ಕು ವರುಷಗಳ ಮೇಲೆ ನರಸಿಂಹಪತಿ ಉತ್ತರ ಬರ್ಮಾದಲ್ಲಿದ್ದ ಕುಬಲಾಯಿಖಾನನ ಸಾಮಂತ ಪಾಳೆಯಗಾರನ ರಾಜ್ಯದ ಮೇಲೆ ಏರಿಹೋದ. ಬರ್ಮೀ ಸೇನೆಗೆ ಸೋಲೊದಗಿದರೂ ಮತ್ತೊಮ್ಮೆ ಅದು ದಾಳಿ ಮಾಡಿತು. ಈ ಸಲವೂ ಜಯ ದೊರೆಯಲಿಲ್ಲ. ಅಷ್ಟೇ ಅಲ್ಲ, ಬರ್ಮೀ ಸೇನೆಗಾದ ನಷ್ಟ ಅಪಾರ. ಅರಸನ ಈ ಧೋರಣದಿಂದ ಪ್ರಜೆಗಳೂ ಅಸಮಾಧಾನದಿಂದ ಕುದಿಯುತ್ತಿದ್ದರು. ರಾಜಮನೆತನದಲ್ಲೂ ದ್ವೇಷದ ಜ್ವಾಲೆ ಉರಿಯುತ್ತಿತ್ತು. ನರಸಿಂಹಪತಿ ದಿಕ್ಕುಗೆಟ್ಟು ಪಾಗಣವನ್ನು ತೊರೆದು ಪಲಾಯನ ಮಾಡಿದ.

ಅವನನ್ನು ಹಿಂಬಾಲಿಸಿದ ವೈರಿಗಳು ಅವನ ಕೊರಳು ಕೊಯ್ದರು. ಅರಸನ ಕೊಲೆಯ ಸುದ್ದಿ ಮುಟ್ಟಿದ ಕೂಡಲೇ ಮೊಂಗೋಲರು ದಂಡಯಾತ್ರೆಗೆಸಿದ್ಧರಾದರು. ದೂತರ ಕೊಲೆ, ನರಸಿಂಹಪತಿಯ ದಾಳಿಗಳಿಂದ ಅವರ ಹೃದಯದಲ್ಲಿ ಹುದುಗಿದ್ದ ದ್ವೇಷವು ಬುಗ್ಗೆಂದು ಪ್ರಜ್ವಲಿಸಿತು. ಪಾಗಣದ ಸೊಕ್ಕನ್ನು ಅಡಗಿಸಲು ಇದೇ ಸುಸಂದರ್ಭವೆಂದು ತಿಳಿದು ಮೊಂಗೋಲರು ಬರ್ಮಾಕ್ಕೆ ನುಗ್ಗಿದರು. ಪಾಗಣವು ತತ್ತರಿಸಿ ತಾರ್ತಾರರ ಕಾಲ ಪಾದದಡಿ ಬಿದ್ದುಹೋಯಿತು. ಅನಿರುದ್ಧನು ಸ್ಥಾಪಿಸಿದ ರಾಜ್ಯಕ್ಕೆ ೨೫೦ ವರುಷಗಳ ಮೇಲೆ ಈ ದುರ್ಗತಿ ಬಂತು. ಮೊಂಗೋಲರ ಪೆಟ್ಟಿಗೆ ಜರಿದು ಬಿದ್ದ ಬರ್ಮೀ ರಾಜ್ಯವು ಮತ್ತೆ ಮೊದಲಿನಂತೆ ಅಖಂಡವಾಗಿ ಉಳಿಯಲಿಲ್ಲ. ಅನೇಕ ತುಂಡರಸರು ಅಲ್ಲಲ್ಲಿ ರಾಜ್ಯ ಕಟ್ಟಿಕೊಂಡು ಆಳತೊಡಗಿದರು. ಅವರ ಗೋಣು ಮುರಿದು ರಾಜ್ಯವನ್ನು ಆಕ್ರಮಿಸಲು ಪಾಶ್ಚಾತ್ಯರಿಗೆ ಬಹಳ ಸುಲಭವಾಯಿತು.

## ಹಿಂದುಸ್ತಾನದ ಋಣ

ಬರ್ಮಾ ಇಂದು ಪ್ರತ್ಯೇಕವಾಗಿರುವುದಾದರೂ ಅನೇಕ ವಿಷಯಗಳಲ್ಲಿ ಹಿಂದುಸ್ತಾನಕ್ಕೆ ಅದು ಋಣಿ. ಬರ್ಮಾದಲ್ಲಿ ಹಿಂದೀ ಸಂಸ್ಕೃತಿಯ ಪ್ರಭಾವ ವಿಶೇಷವಾಗಿದೆ. ವಲಸೆ ತೆರಳಿದ ಹಿಂದೀಯರು ಅನೇಕ ಸ್ಥಳಗಳಿಗೆ ಹಿಂದುಸ್ತಾನದ ಸ್ಥಳಗಳ, ನಗರಗಳ ಹೆಸರುಗಳನ್ನೇ ಕೊಟ್ಟರು. ಬರ್ಮಾದಲ್ಲಿ ಅವಂತಿ, ವಾರಣಾಸಿ, ಉತ್ಕಲ, ದ್ವಾರಾವತಿ, ಗಾಂಧಾರ ಮೊದಲಾದ ನೂರಾರು ಹೆಸರುಗಳಿವೆ. ಬೌದ್ಧ ಧರ್ಮ ತುಂಗೆಯಂತೆ ಹರಿದು ಬಂದ ಮೇಲೆ ಬ್ರಾಹ್ಮಣ ಸಂಸ್ಕೃತಿ, ಪ್ರಭಾವ ಕರಗುತ್ತ ಬಂತು. ಬುದ್ಧ ಗ್ರಂಥಗಳನ್ನು ಪಾಲಿ ಭಾಷೆಯಲ್ಲೇ ಬರೆಯುತ್ತಿದ್ದರು. ಬರ್ಮೀಯರು ಈ " ದೇವಭಾಷೆ " ಯನ್ನು ಜನಭಾಷೆಯನ್ನಾಗಿಯೇ ಸ್ವೀಕರಿಸಿದರು. ಪಾಲಿ ಭಾಷೆಗೆ ಜನರಿಂದ ಬಹಳ ಪ್ರೋತ್ಸಾಹ ದೊರೆತು ಅದೇ ಸರ್ವತೋಮುಖವಾಗಿ ಬೆಳೆಯತೊಡಗಿತು. ಬರ್ಮಾದಂತೆ ಈ ಭಾಷೆ ಚೆನ್ನಾಗಿ ಬೇರೆ ಯಾವ ದೇಶದಲ್ಲೂ ಪ್ರಗತಿ ಹೊಂದಲಿಲ್ಲ. ಪಾಲಿ ಸಾಹಿತ್ಯ ಬರ್ಮೀ ಜನರ ಮನಸ್ಸನ್ನು ಸೂರೆಗೊಂಡಿದೆ. ಒರಟು, ಬರ್ಬರ ಮ್ರಮ್ಮ

ರನ್ನು ಅದು ಸಾಧು ಸಜ್ಜನರನ್ನಾಗಿ ಮಾಡಿದೆ. ಹಿಂದುಸ್ತಾನದಿಂದ ಹರಿದು ಬಂದ ಈ ಪಾಲಿ ಭಾಷೆಯ ಗಂಗೆಯಲ್ಲಿ ಬರ್ಮೀ ಜನ ಮಿಂದು ಮುಳುಗಿ ತೇಲಿ ಓಲಾಡಿ ಸುಸಂಸ್ಕೃತರಾಗಿದ್ದಾರೆ ಈ ಋಣವೇ ದೊಡ್ಡದು. ಇನ್ನು ಶಿಲ್ಪಕಲೆ, ಕೈಗಾರಿಕೆ ಮೊದಲಾದವುಗಳಲ್ಲೂ ಬರ್ಮಾ ಹಿಂದುಸ್ತಾನದ ಶಿಷ್ಯ. ಪಾಗಣದಲ್ಲಿರುವ ಸಾವಿರಾರು ಬುದ್ಧ ಗುಡಿ ಗೋಪುರಗಳನ್ನು ಕಂಡವರಿಗೆ ಅದು ಗೊತ್ತಾಗದಿರದು.

---

## ( ಭಾಗ ೪ )

# ಥಾಯಿಲಂಡ (ಸಯಾಂ)

---

## ಪ್ರಜಾಪ್ರಭುತ್ವ

---

ಆಗ್ನೇಯ ಏಶಿಯದಲ್ಲಿ ಥಾಯಿಲಂಡ ಒಂದೇ ಸ್ವತಂತ್ರ ರಾಷ್ಟ್ರ. ಹದಿಮೂರನೆಯ ಶತಮಾನದಿಂದಲೂ ಅದು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿದೆ. ಹಸಿದ ಯುರೋಪಿಯನ್ ತೋಳಗಳು ಈ ಬಂಗಾರ ಭೂಮಿಯನ್ನು ಹರಿದು ತಿನದೇ ಇದ್ದುದು ಒಂದು ದೊಡ್ಡ ಆಶ್ಚರ್ಯವೇ ಸರಿ. ಬಹುಭಾಗವು ಘೋರ ಅರಣ್ಯಗಳಿಂದ ತುಂಬಿರುವುದರಿಂದ ಥಾಯಿಲಂಡಿಗೆ ನುಗ್ಗಲು ಪಾಶ್ಚಾತ್ಯರು ಸಮರ್ಥರಾಗಲಿಲ್ಲವೇನೋ! ಥಾಯಿಲಂಡಿನ ನೆರೆಹೊರೆಯಲ್ಲಿ ಬ್ರಿಟಿಶ ಮತ್ತು ಫ್ರೆಂಚರು ಕಲಹದಲ್ಲಿ ತಲ್ಲೀನರಾಗಿದ್ದುದರಿಂದಲೂ ಈ ದೇಶದ ಸ್ವಾತಂತ್ರ್ಯಕ್ಕೆ ಭಂಗಬರಲಿಲ್ಲವೆಂದು ಕಾರಣ ಕೊಡುವವರುಂಟು. ಬ್ರಿಟಿಶರ ಅಧೀನವಿರುವ ಬರ್ಮಾ ಮತ್ತು ಮಲಯಾ ಹಾಗೂ ಫ್ರೆಂಚರ ವಶವಿರುವ

ಇಂಡೋಚೀನ ಇವುಗಳ ನಡುವೆ ಇತ್ತಂಡದವರಿಗೂ ಒಂದು ಮಧ್ಯ ರಾಷ್ಟ್ರ (buffer state) ಅವಶ್ಯವಿತ್ತು. ಆದುದರಿಂದ ಥಾಯಿಲಂಡ್ ಹೇಗೋ ಬದುಕಿಕೊಂಡಿತು.

## ಹಿಂದೂ ವಸಾಹತು

ಮೊನ್ನೆ ಮೊನ್ನೆಯ ವರೆಗೆ ಥಾಯಿಲಂಡಿಗೆ ಸಯಾಂ ಎಂದು ಹೆಸರಿತ್ತು. ೧೯೩೯ ರಲ್ಲಿ ಸರಕಾರದ ಆಜ್ಞೆಯನ್ವಯ 'ಸಯಾಂ' ಪದದ ಬದಲು 'ಥಾಯಿಲಂಡ' ಹೆಸರೇ ಬಳಕೆಯಲ್ಲಿ ಬಂತು. 'ಥಾಯಿ' ಎಂದರೆ ಸ್ವತಂತ್ರರು ಎಂದರ್ಥ. 'ಥಾಯಿ' ಜನರಿರುವ ದೇಶ 'ಥಾಯಿ ಲಂಡ'. ಆದರೆ ಕ್ರಿ. ಶ. ಹದಿಮೂರನೆಯ ಶತಮಾನದ ವರೆಗೆ ದೇಶದಲ್ಲಿ ಥಾಯಿ ಜನರ ಪ್ರಭುತ್ವವಿರಲಿಲ್ಲ; ಅದರ ಒಂದು ಸಾವಿರ ವರುಷಗಳ ಮೊದಲೇ ವಲಸೆ ಬಂದಿದ್ದ ಹಿಂದುಗಳು ದೇಶದ ವಿವಿಧ ಭಾಗಗಳಲ್ಲಿ ವಾಸಿಸುತ್ತಿದ್ದರು. ಕ್ರಿ. ಶ. ಒಂದೆರಡನೆಯ ಶತಮಾನದಲ್ಲೇ ಹಿಂದುಗಳು ಥಾಯಿಲಂಡಿಗೆ ಗುಳಿಕಟ್ಟಿಕೊಂಡು ಬಂದರು. ಪ್ರಾ ಪಾಥೊಂ, ಪೊಂಗ ತುಕ್‌ಗಳಲ್ಲಿ ದೊರೆತ ಪ್ರಾಚೀನ ಅವಶೇಷಗಳಿಂದ ಹಾಗೆ ತರ್ಕಿಸಲಡ್ಡಿ ಯಿಲ್ಲ- ಗುಪ್ತರ ಕಾಲದ ಹಿಂದೂ ಮತ್ತು ಬೌದ್ಧ ದೇವತೆಗಳ ಮೂರ್ತಿ ಗಳೂ ಥಾಯಿಲಂಡಿನ ಅನೇಕ ಕಡೆಗಳಲ್ಲಿ ದೊರೆತಿವೆ. ಕಾಲಕ್ರಮೇಣ ವಲಸೆ ಬಂದ ಹಿಂದೀಯರು ಸಣ್ಣ ಸಣ್ಣ ರಾಜ್ಯಗಳನ್ನು ಕಟ್ಟಿದರು. ಕ್ರಿ. ಶ. ೬೩೮ ರಿಂದ ಅಸ್ತಿತ್ವಕ್ಕೆ ಬಂದ ದ್ವಾರಾವತಿ ರಾಜ್ಯವು ಮಾತ್ರ ಕಾಂಬೋದಿಯದಿಂದ ಬಂಗಾಲದ ವರೆಗೆ ವ್ಯಾಪಿಸಿತ್ತು. ಸಾಧಾರಣ ಹತ್ತು ಶತಮಾನಗಳ ವರೆಗೆ ಈ ರಾಜ್ಯದ ಒಡೆತನವಿತ್ತು. ಆದರೆ ಕಾಂಬೋಜ ರಾಜ್ಯವು (ಇಂಡೋಚೀನ) ಪ್ರಬಲವಾದ ಮೇಲೆ ಆ ಅರಸರು ಥಾಯಿಲಂಡಿಗೆ ಕಾಲು ಚಾಚಿದರು ಮತ್ತು ದೇಶವು ಸಂಪೂರ್ಣ ಅವರ ವಶವಾಯಿತು. ಹದಿಮೂರನೇ ಶತಮಾನದ ವರೆಗೆ ಥಾಯಿಲಂಡ ಕಾಂಬೋಜದ ಮುಂಗ ಮುಷ್ಠಿಯಲ್ಲೇ ಸಿಲುಕಿತ್ತು. ಆದರೆ ಅಂದಿನಿಂದ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಲು ಥಾಯಿ ಜನರು ಸಮರ್ಥರಾದರು. ಥಾಯಿ ರಾಜ್ಯ ತಲೆ ಎತ್ತುವ ವರೆಗೂ ಹಿಂದೀ ನಾಗರಿಕತೆಯು ಈ ದೇಶದಲ್ಲಿ ಜ್ವಾಜ್ವಲ್ಯಮಾನವಾಗಿತ್ತೆಂದು ಖಚಿತವಾಗುತ್ತದೆ. ಹಿಂದೀ

ಧರ್ಮ, ಭಾಷೆ, ಲಿಪಿ, ಸಾಹಿತ್ಯಗಳೆಲ್ಲ ಜನಜೀವನದ ಮೇಲೆ ಬಹಳ ಪ್ರಭಾವ ಬೀರಿದ್ದುವು. ಅದರ ಛಾಯೆಯನ್ನು ಈಗಲೂ ಕಾಣಲು ಸಾಧ್ಯ.

## ಥಾಯಿ ಜನರ ಪ್ರಾಬಲ್ಯ

ಥಾಯಿ ಜನ ಮೊಂಗೋಲಿಯನ್ನರು. ಚೀನಿಯರ ಒಂದು ಕುಲ. ದಕ್ಷಿಣ ಮತ್ತು ಆಗ್ನೇಯ ಚೀನದಲ್ಲಿ ವಾಸಿಸುತ್ತಿದ್ದ ಈ ಜನ ಮೆಲ್ಲಮೆಲ್ಲಗೆ ಇನ್ನೂ ದಕ್ಷಿಣಕ್ಕೆ ಇಳಿದು ಬಂದು ಮನೆಮಾರು ಕಟ್ಟಿಕೊಂಡು ನೆಲೆಸಿದರು. ಎಂಟನೆಯ ಶತಮಾನದೊಳಗೆ ಯುನ್ನಾನ ಅವರ ವಶವಾಯಿತು. ಇರಾವದಿ ನದಿಯವರೆಗೂ ಅವರು ನುಸುಳಿದರು. ಯುನ್ನಾನದಲ್ಲಿ ಮುಂದೆ ಆರು ಶತಮಾನಗಳವರೆಗೆ ಅವರದೇ ಒಡೆತನ. ಅದರಂತೆ ಥಾಯಿಲಂಡ ಕೂಡಾ ಈ ಥಾಯಿ ಜನರಿಂದ ತುಂಬಿತು. ಹದಿಮೂರನೆಯ ಶತಮಾನ ದಲ್ಲಿ ಇಂದ್ರಾದಿತ್ಯ ದೊರೆ ಥಾಯಿಲಂಡಿನಲ್ಲಿ ಸುಖೋದಯ ರಾಜ್ಯ ಸ್ಥಾಪಿಸಿದ. ಕಾಂಬೋಜ ಅರಸರ ವಿರುದ್ಧ ಹೂಡಿದ ದಂಗೆಯಲ್ಲಿ ಯಶ ದೊರೆತುದುದರಿಂದ ರಾಜ್ಯಕಟ್ಟಲು ಶಕ್ಯವಾಯಿತು ಇಂದ್ರಾದಿತ್ಯನಿಗೆ. ಅವನ ಮಕ್ಕಳು ಬರ್ಮಾದ ಪೇಗು ಹಾಗು ಮಲಯಾದ ಕೆಲವು ಭಾಗ ಗಳನ್ನು ಆಕ್ರಮಿಸಿ ರಾಜ್ಯ ವಿಸ್ತರಿಸಿದರು. ಇಂದ್ರಾದಿತ್ಯನ ಮಗ ರಾಮ ಕಾಮಹೆಂಗ ದೊರೆ ಕೀರ್ತಿಶಾಲಿ. ರಾಜ್ಯವನ್ನು ಬಲಗೊಳಿಸಿದ, ವಿಸ್ತರಿ ಸಿದ ಸಾಹಸ ಅವನದ್ದು. ಥಾಯಿ ಭಾಷೆಗೆ ಸುಧಾರಿಸಿದ ಲಿಪಿಯನ್ನು ಕೊಟ್ಟವನೂ ಅವನೇ. ಅಲ್ಲಿಯವರೆಗೆ ಕಾಂಬೋಜದಲ್ಲಿದ್ದ ಲಿಪಿಯನ್ನೇ ಉಪಯೋಗಿಸಲಾಗುತಿತ್ತು. ರಾಮ ಕಾಮಹೆಂಗನ ಲಿಪಿಯೇ ಈಗ ರಾಷ್ಟ್ರಭಾಷೆಯ ಲಿಪಿಯಾಗಿ ಪರಿಣಮಿಸಿದೆ. ರಾಮ ಕಾಮಹೆಂಗನ ತರುವಾಯ ಹಲವು ಅರಸರು ಆಳಿದರೂ ರಾಜ್ಯ ಕರಗುತ್ತ ಬಂದಿತು. ಥಾಯಿಲಂಡಿನಲ್ಲಿದ್ದ ಉತೊಂಗ ಅರಸನು ಸುಖೋದಯ ರಾಜ್ಯವನ್ನು ಗೆದ್ದುಕೊಂಡ. 'ಅಯೋಧ್ಯಾ' ಅವನ ರಾಜಧಾನಿ. ಈ ರಾಜ್ಯವು ಕೊನೆಗೆ ಬ್ರಹ್ಮದೇಶದವರೆಗೂ ವ್ಯಾಪಿಸಿತು. ಆದರೆ ಬರ್ಮೀಯರು ದಂಡೆತ್ತಿ ಬಂದು ಅಯೋಧ್ಯಾ ನಗರವನ್ನು ನಾಶಮಾಡಿದುದರಿಂದ ಬಾಂಗ ಕಾಕ್‌ಗೆ ರಾಜಧಾನಿಯನ್ನು ಸ್ಥಳಾಂತರಿಸಿದರು.

## ಚಕ್ರಿವಂಶ

೧೭೮೨ರಿಂದ ಥಾಯಿಲಂಡಿನಲ್ಲಿ ಚಕ್ರಿವಂಶದವರ ಚಕ್ರಾಧಿಪತ್ಯ. ಅವರಲ್ಲಿ ಪರಮ ಇಂದ್ರ ಮಹಾಕುಲೋತ್ತುಂಗ ಕರ್ಣ ಅರಸನ ಹೆಸರು ಅಜರಾಮರ. ೧೮೬೮ ರಿಂದ ೧೯೧೦ರ ವರೆಗೆ ಆಳಿದ ಈ ದೊರೆ ದೊಡ್ಡ ಜ್ಞಾನಿ. ನವನಾಗರಿಕತೆಯ ಗಾಳಿ ಬೀಸುವಂತೆ ಥಾಯಿಲಂಡಿನ ಬಾಗಿಲು ತೆರೆದ ಮಹಾನುಭಾವನು ಇವನೇ. ವಿದೇಶಗಳೊಡನೆ ಸ್ನೇಹ ಸಂಬಂಧ ಬೆಳೆಸಿದ. ವಿದೇಶಿ ತಜ್ಞರನ್ನು ಕರೆಸಿಕೊಂಡು ದೇಶದ ಪುನರ್ರಚನೆ ಮಾಡ ಲೆತ್ನಿಸಿದ. ರೇಲ್ವೆ ರಸ್ತೆ, ತಂತಿ, ಟೆಲಿಫೋನ್, ಟಪ್ಪಾಲು ವ್ಯವಸ್ಥೆ ಯಾದುದೂ ಅದೇ ಕಾಲಕ್ಕೆ. ಹಳಸಿದ ಹಳೇ ಸಂಪ್ರದಾಯಗಳ ಸಂಕೋಲೆಗಳನ್ನು ಮುರಿದು ಆಧುನಿಕತೆಯ ಸಂಸ್ಕಾರ ಥಾಯಿಲಂಡಿಗೆ ಕೊಟ್ಟವನು ಪರಮ ಇಂದ್ರ ದೊರೆ. ಹಿಂದುಳಿದ ದೇಶವನ್ನು ಪ್ರಗತಿಪರ ರಸ್ತೆಯಲ್ಲಿ ಎಳೆದುಕೊಂಡು ಹೋದ ಸಾಹಸ, ಧೈರ್ಯ ಎಲ್ಲ ಅವನದು. ಈ ರಾಜನಿಗೆ ೮೨ ರಾಣಿಯರಿದ್ದರಂತೆ. ಅವರಿಂದ ೭೭ ಮಕ್ಕಳು ಜನಿಸಿದರು. ಅವರ ವಂಶಜರ ರಾಜಕುಟುಂಬಗಳೇ ಥಾಯಿಲಂಡಿನಲ್ಲಿ ಬೆಳೆದು ಬಂದಿವೆ.

## ಆನಂದ

ಪರಮ ಇಂದ್ರನ ಮಗ ಶ್ರೀಧ್ವಾನು. ೧೯೧೦ರಿಂದ ೧೯೨೫ರ ವರೆಗೆ ಇವನು ಸಿಂಹಾಸನವನ್ನೇರಿದ. ಈ ದೊರೆಯೂ ದೊಡ್ಡ ಪಂಡಿತ. ಪ್ರತಿಭಾಶಾಲಿ ಕವಿ. ಶೇಕ್ಸಪಿಯರನ ನಾಟಕಗಳನ್ನು ಭಾಷಾಂತರಿಸಿದ. ಸ್ವತಂತ್ರ ನಾಟಕಗಳನ್ನು ಬರೆದು ತಾನೇ ಪಾತ್ರವಹಿಸಿ, ಅಭಿನಯಿಸಿದ. ಅವನಾನಂತರ ಅವನ ತಮ್ಮನ ಮಗ ಮಹಿಧೋಲ ಪಟ್ಟಕ್ಕೆ ಬರಬೇಕಾಗಿತ್ತು. ಮಹಿಧೋಲ. ಅದಕ್ಕೊಪ್ಪದೆ ಹಾರ್ವರ್ಡ ವಿಶ್ವವಿದ್ಯಾಲಯಕ್ಕೆ ತೆರಳಿದ ಮತ್ತು ನ್ಯೂಯಾರ್ಕ ಆಸ್ಪತ್ರೆಯಲ್ಲಿದ್ದ ಥಾಯಿ ದಾದಿಯೊಬ್ಬಳನ್ನು ಮದುವೆಯಾದ. ಆ ಕಾರಣದಿಂದ ಮಹಿಧೋಲನ ಮಗ ಪ್ರಜಾಧಿಪೋಕನಿಗೆ ರಾಜ್ಯಾಭಿಷೇಕವಾಯಿತು. ೧೯೩೨ರಲ್ಲಿ ಥಾಯಿಲಂಡಿನಲ್ಲಿ ಮಹಾಕ್ರಾಂತಿಯುಂಟಾದುದರಿಂದ ಪ್ರಜಾಧಿಪೋಕ ಅರಸು ೧೯೩೫ರಲ್ಲಿ ರಾಜೀನಾಮೆ ಕೊಟ್ಟನು. ಅಂದಿನಿಂದ ಮಹಿಧೋಲನ ಮಗ ಆನಂದ

ಪಟ್ಟಾಧಿಕಾರಿ. ೧೯೨೫ರಲ್ಲಿ ಜನಿಸಿದ ಆನಂದನ ಅಭ್ಯಾಸ ನಡೆದುದು ಸ್ವಿಜರ್ಲಂಡಿನಲ್ಲಿ. ಅವನ ಹೆಸರಲ್ಲಿ ರೀಜೆಂಟರ ಮಂಡಲವೊಂದು ರಾಜ್ಯ ಕಾರಭಾರ ನಡೆಸುತ್ತಿತ್ತು. ೧೯೪೬ರರ ಆರಂಭದಲ್ಲಿ ಆನಂದ ರಾಜ್ಯ ಸೂತ್ರವನ್ನು ಹಿಡಿದುಕೊಂಡ.

## ೧೯೩೨ರ ಕ್ರಾಂತಿ

೧೯೩೨ ರಲ್ಲಿ ಥಾಯಿಲಂಡಿನಲ್ಲಿ ಮಹಾಕ್ರಾಂತಿಯು ಕಹಳೆ ಮೊಳಗಿತು. ರಾಜವಂಶೀಯರ, ಶ್ರೀಮಂತರ ಮತ್ತು ಚೀನೀಯರ ದಬ್ಬಾಳಿಕೆಯನ್ನು ಸಹಿಸದ ಜನ ಬಂಡಾಯ ಹೂಡಿದರು. ಈ ಕ್ರಾಂತಿಯಲ್ಲಿ ಭಾಗವಹಿಸಿದವರು ಹೆಚ್ಚಾಗಿ ವಿದ್ಯಾರ್ಥಿಗಳು ಮತ್ತು ಸೇನಾಧಿಕಾರಿಗಳು. ಬಂಡಾಯ, ಕ್ರಾಂತಿಗಳೆಂದಾಗ ಕೊಲೆ, ಕದನ, ಕಲಹ, ರಕುತ ಪಾತಗಳ ಚಿತ್ರಗಳೇ ನಮ್ಮ ಕಣ್ಣು ಮುಂದೆ ಕಟ್ಟಿದಂತಾಗುವದು. ಆದರೆ ಥಾಯಿಲಂಡಿನಲ್ಲಿ ಅಂಥದ್ದೇನೂ ನಡೆಯಲಿಲ್ಲ. ವಿದ್ಯುಚ್ಛಕ್ತಿ ಕೇಂದ್ರ, ರೇಲ್ವೆ, ತಂತಿ, ಟೆಲಿಫೋನ್, ಸರಕಾರಿ ಕಛೇರಿ, ಮುಂತಾದವುಗಳನ್ನು "ದಂಗೆಖೋರರು" ಆಕಸ್ಮಿಕವಾಗಿ ಆಕ್ರಮಿಸಿದರು. ಮತ್ತು ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟುಕೊಡಬೇಕೆಂದು ಅರಸನಿಗೆ ಆಹ್ವಾನ (ಅಲ್ಟಿಮೇಟಂ) ಕಳಿಸಿಕೊಟ್ಟರು. ಪ್ರಜಾಧಿಪೋಕ್ ದೊರೆ, ಸ್ವಾರ್ಥ ಅಧಿಕಾರದ ದುರ್ಮೋಹಗಳಿಗೆ ಒಳಗಾಗಿ ಅದನ್ನು ಸಂರಕ್ಷಿಸಿಕೊಳ್ಳಲು ಬಯಸಲಿಲ್ಲ. 'ಬಂಡಾಯ' ವನ್ನು ಅಪ್ಪಳಿಸಲೂ ಅವನು ಯತ್ನಿಸಲಿಲ್ಲ. ಕ್ರಾಂತಿಕಾರರ ಕರಾರುಗಳಿಗೆ ಶಿರಬಾಗಿದ. ಹನಿ ರಕುತ ಬೀಳದೆ ಕ್ರಾಂತಿಯು ಕಾಳಿ ಒಲಿದಳು. ಅವರು ತಯಾರಿಸಿದ ರಾಜ್ಯಘಟನೆಯೂ ಮನ್ನಿಸಲ್ಪಟ್ಟಿತು.

## ೧೯೩೩

೧೯೩೩ರಲ್ಲಿ ಕ್ರಾಂತಿಕಾರರ ಶಿಬಿರದಲ್ಲೇ ಒಡಕುಂಟಾಯಿತು. ಅಧಿಕಾರ ಅಪಹರಣದ ಯತ್ನ ಮತ್ತೆ ನಡೆದು ಅದು ಅಯಶಸ್ವಿಯಾಯಿತು. ಹೊಸ ರಾಜ್ಯಘಟನೆಯನ್ವಯ, ಮುಖ್ಯ ಮಂತ್ರಿಯ ಹೊಣೆ ಹೊತ್ತಿದ್ದ ಮನೋಪಕರ್ಣರವರು ಪೆನಾಂಗಕ್ಕೆ ಪಲಾಯನ ಮಾಡಿದರು. ಕರ್ನಲ್

ಪಹೋಲ್ ಪ್ರಧಾನಮಂತ್ರಿಗಳಾದರು. ಈ ಹೊಸ ಸರಕಾರವನ್ನು ಉರುಳಿಸಲು ಪುನಃ ಪ್ರತಿಕ್ರಾಂತಿಯು ಒಳಸಂಚು ನಡೆಯಿತು. ಶ್ರೀಮಂತರೂ ಜಮೀನ್ದಾರರೂ ಅದರಲ್ಲಿ ಭಾಗವಹಿಸಿದರು. ರಾಜಕುಮಾರ ಬೊಬರಾದಜೇಯವರೇ ಅದರ ನಾಯಕರು. ಆದರೆ ಅವರ ದುರದೃಷ್ಟದಿಂದ ಒಳಸಂಚುಗಾರರ ಬೇಳೆ ಬೇಯಲಿಲ್ಲ. ಪ್ರತಿ ಕ್ರಾಂತಿಯನ್ನೆಬ್ಬಿಸಿದವರನ್ನು ಸರಕಾರವು ಹಿಡಿದು ಮರಣ ಶಿಕ್ಷೆ ವಿಧಿಸಿತು. ಆಗ ಪ್ರಜಾಧಿಪೋಕ್ ದೊರೆ ಲಂಡನಿನಲ್ಲಿದ್ದರು. ಮರಣ ದಂಡನೆಗೆ ಸಹಿ ಹಾಕಲು ಅವರು ನಿರಾಕರಿಸಿದರು. ಕೊನೆಗೆ ಸರಕಾರವೇ ಕೆಲವರನ್ನು ಗುಂಡಿಕ್ಕಿತು. ದೇಶದಲ್ಲಿ ಮತ್ತೊಂದು ರಾಜ್ಯಘಟನೆಯನ್ನು ಜಾರಿಗೆ ತಂದರು. ಅದನ್ನು ಮನ್ನಿಸುವುದಿದ್ದರೆ ಅರಸರನ್ನು ಗೌರವಿಸುವುದಾಗಿ ಸರಕಾರವು ತಿಳಿಸಿದರೂ ಪ್ರಜಾಧಿಪೋಕ್ ದೊರೆಗೆ ವಿಶ್ವಾಸವುಂಟಾಗಲಿಲ್ಲವೇನೋ ? ರಾಜ್ಯತ್ಯಾಗಕ್ಕೆ ಅದೂ ಒಂದು ಕಾರಣವಿರಬಹುದು.

## ಪ್ರಜಾಪ್ರಭುತ್ವ

ಥಾಯಿಲಂಡಿನಕ್ರಾಂತಿಯನ್ನು ರಶಿಯದ ಅಕ್ಟೋಬರರಾಜ್ಯಕ್ರಾಂತಿಗೆ ಸರಿಹೋಲಿಸಲು ಶಕ್ಯವಿಲ್ಲ. ಆದರೆ ಪ್ರಜೆಗಳ ಕೈಗೆ ಅಧಿಕಾರ ಬಂದುದೇನೋ ನಿಜ. ೧೯೩೨ ರ ವರೆಗೆ ದೇಶದಲ್ಲಿ ರಾಜನ ಏಕಚಕ್ರಾಧಿಕಾರ. ಶ್ರೀಮಂತರ, ಜಮೀನ್ದಾರರ ಪ್ರಭಾವ ಅವನ ಮೇಲೆ ಬಹಳ. ಜನಸಾಮಾನ್ಯರನ್ನು ಯಾರೂ ಕೇಳುವವರಿದ್ದಿಲ್ಲ. ಆದರೆ ಈಗ ಜನಾಂಗಕ್ಕೆ ಸಂಪೂರ್ಣ ಅಧಿಕಾರ ದೊರೆಯಿತು. ಹೊಸ ರಾಜ್ಯಘಟನೆಯನ್ವಯ ರಾಜವಂಶದವರು ಯಾರೂ ಮಂತ್ರಿಗಳಾಗಲು ಅಸಾಧ್ಯ. ಇದರಿಂದ ರೇಗಿದ ರಾಜಕುಮಾರ ನಾಗರಸ್ವರ್ಗ (ಪ್ರಜಾಧಿ ಪೋಕರ ಮಾವ) ದೇಶತ್ಯಜಿಸಿ ಜಾವಾಕ್ಕೆ ಹೊರಟು ಹೋದರು. ದೇಶದಲ್ಲಿ (೧) ಪ್ರಜಾಪ್ರತಿನಿಧಿ ಸಭೆ (೨) ಮತ್ತು ಕೌನ್ಸಿಲ್ ಆಫ್ ಸ್ಟೇಟ್ ರಚಿಸಲ್ಪಟ್ಟವು. ಪ್ರ. ಪ್ರ. ಸಭೆಯು ಸದಸ್ಯರಲ್ಲಿ ಅರ್ಧಾಂಶ ಜನಪ್ರತಿನಿಧಿಗಳು. ಹತ್ತು ವರುಷಗಳ ಮೇಲೆ ಎಲ್ಲರೂ ಆರಿಸಲ್ಪಡಬೇಕೆಂದು ಘಟನೆಯಲ್ಲಿ ಸೂಚಿಸಲ್ಪಟ್ಟಿತು. ಮಂತ್ರಿಗಳು ಕೌನ್ಸಿಲ್ ಆಫ್ ಸ್ಟೇಟಿಗೆ ಹೊಣೆಗಾರರು. ಹೀಗೆ ಥಾಯಿ

ಲಂಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಪರಿಣಮಿಸಿತು. ಪರಿಪೂರ್ಣತೆಯನ್ನು ಹೊಂದಲೂ ಯತ್ನಿಸುತ್ತಿತ್ತು. ನಿಸ್ವಾರ್ಥಿ ಮುಖಂಡರು ಅಧಿಕಾರದಲ್ಲಿದ್ದರು. ದೇಶದ ಏಳಿಗೆಯಾಗಬೇಕೆಂಬುದೇ ಅವರ ಹಂಬಲ. ಜಗತ್ತಿನ ಸ್ವತಂತ್ರ ರಾಷ್ಟ್ರಗಳಲ್ಲಿ ಥಾಯಿಲಂಡ ಕೂಡಾ ಯೋಗ್ಯ ಸ್ಥಾನಮಾನವನ್ನು ಪಡೆಯಬೇಕೆಂದು ಅವರು ಬಯಸಿದ್ದರು. ಆ ದೃಷ್ಟಿಯಿಂದ ದೇಶದ ಸರ್ವತೋಮುಖ ಪ್ರಗತಿಯ ಸಾಮಾಜಿಕ, ಆರ್ಥಿಕ ಯೋಜನೆಗಳನ್ನು ಜಾರಿಗೆ ತರಲು ಹೆಣಗಿದರು.

## ಶೈಕ್ಷಣಿಕ ಸುಧಾರಣೆ

ಶಿಕ್ಷಣ ಕ್ಷೇತ್ರದಲ್ಲಿ ಸರಕಾರವು ಬಹಳ ಪ್ರಗತಿಪರ ಧೋರಣವನ್ನವಲಂಬಿಸಿತು. ಬ್ರಿಟನ್, ಅಮೇರಿಕಾ, ಜಪಾನಗಳಿಗೆ ಉಚ್ಚ ವಿದ್ಯಾಭ್ಯಾಸಕ್ಕಾಗಿ ತೆರಳುವ ವಿದ್ಯಾರ್ಥಿಗಳಿಗೆ ಸರಕಾರವು ಕೊಡುಗೈಯಿಂದ ವೇತನವನ್ನು ಕೊಟ್ಟು ಪ್ರೋತ್ಸಾಹಿಸಿತು. ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣವೂ ಆಚರಣೆಯಲ್ಲಿ ಬಂದಿತು. ೧೯೩೯ ರಲ್ಲಿ ಥಾಯಿಲಂಡಿನಲ್ಲಿದ್ದ ಶಾಲೆಗಳು ಒಟ್ಟು ೧೨೪೨೯. ಇವುಗಳಲ್ಲಿ ಸರಕಾರೀ ಶಾಲೆಗಳು ೪೯, ಸಾರ್ವಜನಿಕ ಶಾಲೆಗಳು ೧೦,೭೬೮, ಮುನಿಸಿಪಲ್ ಶಾಲೆಗಳು ೩೦೪; ಮತ್ತು ಖಾಸಗಿ ಶಾಲೆಗಳ ಸಂಖ್ಯೆ ೧೩೦೮. ಉಪಾಧ್ಯಾಯರ ಸಂಖ್ಯೆ ೩೫ ಸಾವಿರವಿದ್ದರೆ ೮ ಸಾವಿರ ಉಪಾಧ್ಯಾಯಿನಿಯರೂ ವಿದ್ಯಾದಾನದ ಹೊಣೆ ಹೊತ್ತಿರುವರು. ಬಾಂಕಾಕನಗರದಲ್ಲಿ ವಿಶ್ವವಿದ್ಯಾಲಯವೊಂದು ಸ್ಥಾಪಿಸಲ್ಪಟ್ಟಿದೆ.

## ಥಾಯಿನಾಡು

ಥಾಯಿಲಂಡ, ಸಿರಿ ಸಂಪತ್ತಿನಿಂದ ರಾರಾಜಿಸುವ ಕುಬೇರ ರಾಷ್ಟ್ರವಲ್ಲ. ಹೀಗಿದ್ದರೂ ಈ ದೇಶದಷ್ಟು ಆರ್ಥಿಕ ಭದ್ರತೆಯುಳ್ಳ ನಾಡು ಜಗತ್ತಿನಲ್ಲಿ ಬೇರೊಂದಿಲ್ಲ. ಒಕ್ಕಲತನವೇ ಜನರ ಜೀವಾಳ. ಅಕ್ಕಿ ಮುಖ್ಯ ಬೆಳೆ. ನೂರಕ್ಕೆ ೮೩·೩೫ ಜನ ಬೇಸಾಯ ವೃತ್ತಿಯನ್ನೇ ಅವಲಂಬಿಸಿರುವರು. ೧೯೪೦-೪೧ ರಲ್ಲಿ ೯೫,೧೬೪೫೩ ಎಕರೆಗಳಲ್ಲಿ ನೇಜಿ (ಭತ್ತದ ಸಸಿ) ನೆಟ್ಟಿದ್ದರು. ಉತ್ಪಾದನೆಯಾದ ಅಕ್ಕಿ ೪೯,೩೩೩೫೦ ಟನ್

ನಮ್ಮ ದೇಶದಂತೆ ಮರದ ನೇಗಿಲುಗಳೇ ಇತರ ಒಕ್ಕಲುತನದ ಸಾಧನಗಳು. ಗದ್ದೆ ಉಳಲು ಕೋಣಗಳನ್ನು ಕಟ್ಟುವರು. ಇತ್ತೀಚೆಗೆ ಯಾಂತ್ರೀಕರಣದ ಮಂತ್ರ ಜಪಿಸಿ ಹಾಳುಬಿದ್ದ ಭೂಮಿಯಲ್ಲೂ ಒಕ್ಕಲುತನವನ್ನು ನಡೆಸಲಾಗಿದೆ. ತೆಂಗಿನಕಾಯಿ, ಅಡಿಕೆ, ಹೊಗೆಸೊಪ್ಪು, ಮೆಣಸು, ಅರಳೆ, ಮೊದಲಾದವುಗಳನ್ನು ದೇಶದಲ್ಲಿ ಯಥೇಚ್ಛ ಬೆಳೆಸಲಾಗುತ್ತಿದೆ. ಉತ್ತರ ಥಾಯಿಲಂಡ ಅರಣ್ಯ ಪ್ರದೇಶ. ತೇಗು ಮರಗಳ ಬೆಳವಣಿಗೆಯೂ ವಿಶೇಷ. ಮರಗಳನ್ನು ಕಡಿದು ನದಿಗಳಲ್ಲಿ ತೇಲಿಬಿಡುವರು. ಅವು ಉರುಳಿ ಹೊರಳಿ, ಬಂದರಗಳಿಗೆ ಬರುವವು. ಈ ರೀತಿ ವರುಷಂಪ್ರತಿ ಒಂದೂವರೆ ಲಕ್ಷ ಮರದ ತುಂಡುಗಳು ಕಾಡಿನಿಂದ ನಾಡಿಗೆ "ಯಾತ್ರೆ" ಮಾಡುತ್ತಿವೆ. ಮರಗಳನ್ನು ನದಿಗೆ ನೂಕಲು, ಎಳೆಯಲು ಅಸಂಖ್ಯ ಆನೆಗಳನ್ನು ಉಪಯೋಗಿಸುವರು. ಥಾಯಿಲಂಡಿನಲ್ಲಿ ಬಿಳಿ ಆನೆಗಳು (ಐರಾವತ) ಧಾರಾಳ. ಹಿಂದುಗಳು ಗೋವುಗಳನ್ನು ಪೂಜಿಸುವಂತೆ ಥಾಯಿ ಜನ ಈ ಆನೆಗಳನ್ನು ಆರಾಧಿಸುತ್ತಾರೆ. ದೇಶದಲ್ಲಿ ಕಬ್ಬಿಣ, ಕಲ್ಲಿದ್ದಲು, ಚಿನ್ನ, ಬೆಳ್ಳಿ, ಟಿನ್, ಸೀಸಗಳ ಕಣಿಗಳೂ ಇವೆ. ಕೆಲವು ವರುಷಗಳಿಂದ ರಬ್ಬರ ತೋಟಗಳಿಗೂ ಪ್ರೋತ್ಸಾಹ ಕೊಟ್ಟಿರುವರು.

## ಬುದ್ಧ ಭಿಕ್ಷುಗಳು

ಎರಡು ಲಕ್ಷ ಇಪ್ಪತ್ತು ಸಾವಿರ ಚದರ ಮೈಲುಗಳಿರುವ ಥಾಯಿಲಂಡದ ಜನಸಂಖ್ಯೆ ಕೇವಲ ಒಂದೂವರೆ ಕೋಟಿ. ಹೆಚ್ಚಾಗಿ ನದೀತೀರದಲ್ಲೇ ಜನರ ವಾಸ. ನೆಲದ ಮೇಲೆ ಜನಸಾಮಾನ್ಯರು ಮನೆಗಳನ್ನು ಕಟ್ಟಿಕೊಂಡು ಜೀವಿಸುವರು. ನದಿ ನೀರು ಅವರ ಗುಡಿಸಲುಗಳ ಮೆಟ್ಟಿಲುಗಳನ್ನು ತೊಳೆಯುವುದೂ ಉಂಟು. ನದಿಗಳೂ ಅಸಂಖ್ಯವಿರುವುದರಿಂದ ವೇನಿಸ್ ನಗರದಂತೆ ಅಲ್ಲಿಂದ ಇಲ್ಲಿಗೆ, ಊರಿಂದ ಊರಿಗೆ, ಮನೆಯಿಂದ ಮನೆಗೆ ತೆರಳಲು ದೋಣಿಗಳು ಬೇಕು. ಎಲ್ಲ ಜನ ಈಸಾಡ ಬಲ್ಲರು.

ಥಾಯಿಲಂಡನ್ನು ಸಂಚರಿಸಿದವರಿಗೆ ಅದು ಮಂದಿರಗಳ ಮತ್ತು ಬುದ್ಧ ಭಿಕ್ಷುಗಳ ದೇಶವೆಂದು ಹೊಳೆಯದಿರಲಿಕ್ಕಿಲ್ಲ ಬಹುಸಂಖ್ಯಾಕರು

ಬುದ್ಧಾನುಯಾಯಿಗಳು. ೧೮೪೧೭ ಬುದ್ಧ ಮಂದಿರಗಳಿವೆ. ಭಿಕ್ಷುಗಳ ಸಂಖ್ಯೆ ಒಂದೂವರೆ ಲಕ್ಷ. ಬಾಂಗಕಾಕ್ ರಾಜಧಾನಿಯಲ್ಲಿ ಮೂರು ಎಕರೆ ಭೂಮಿಗೆ ಒಂದು ಮಂದಿರವಿದೆ. ಮೊನ್ನೆ ಮೊನ್ನೆಯವರೆಗೂ ಈ ಮಠಗಳಲ್ಲೇ ಭಿಕ್ಷುಗಳು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದರು. ಸರಕಾರವು ಶಿಕ್ಷಣದ ಹೊಣೆ ಹೊತ್ತ ಮೇಲೆ ನಮ್ಮ ನಾಡಿನ ಸ್ವಾಮಿ ಸನ್ಯಾಸಿಗಳಂತೆ ತಿಂದುಂಡು ತೇಗುವುದೇ ಇವರ ಕೆಲಸ. ಆರುಕಾಲು ಲಕ್ಷ ಮುಸಲ್ಮಾನರೂ ೬೯ ಸಾವಿರ ಕ್ರಿಸ್ತನರೂ ಥಾಯಿಲಂಡಿನಲ್ಲಿದ್ದಾರೆ.

---

# ಯುದ್ಧ ಮತ್ತು ಥಾಯಿಲಂಡ

ಮೊದಲಿನಿಂದಲೂ ಥಾಯಿಲಂಡವು [illegible] ಪರರ ಗೊಡವೆ ಗೋಜಿ ಅದಕ್ಕೆ ಬೇಡ. ತನ್ನ ಬೆನ್ನ ಮೇಲೆ ಯಾರೂ ಸವಾರಿ ಮಾಡಬಾರದೆಂದು ಅದರ ಇಚ್ಛೆ. ನೆರೆಹೊರೆ ಮತ್ತು ವಿದೇಶಿ ರಾಷ್ಟ್ರಗಳೊಡನೆ ಸ್ನೇಹ. ೧೯೩೮ ರಲ್ಲಿ ಸ್ವಿಜರ್ಲಂಡ, ಬೆಲ್ಜಿಯಂ, ಸ್ವೀಡನ, ಡೆನ್ಮಾರ್ಕ, ಅಮೇರಿಕ, ನಾರ್ವೆ, ಬ್ರಿಟನ, ಇಟಲಿ, ಫ್ರಾನ್ಸ, ಜಪಾನ, ಜರ್ಮನಿ ಮೊದಲಾದ ಎಲ್ಲ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡಿತು. ಎಲ್ಲರೂ ಮಿತ್ರರು; ಯಾರಮೇಲೂ ದ್ವೇಷವಿಲ್ಲ. ವಿದೇಶಿ ಖಾತೆಯ ಸಲಹೆಗಾರರಾಗಿ ಅಮೇರಿಕನರನ್ನು ನೇಮಿಸಿಕೊಂಡಿತು. ಆರ್ಥಿಕ ವಿಷಯಗಳಲ್ಲಿ ಸೂಚನೆಗಳನ್ನು ಕೊಡಲು ಬ್ರಿಟಿಶ ತಜ್ಞರಿಗೆ ನೌಕರಿ. ಚೀನದೊಡನೆ ಅನೇಕ ಶತಮಾನಗಳಿಂದ ರಾಜಕೀಯ ಸಂಬಂಧವಿರದೆ ಇದ್ದರೂ ಸ್ನೇಹಕ್ಕೆ ಚ್ಯುತಿಯಿಲ್ಲ.

## ವಿದೇಶಿ ಪ್ರಭಾವ

ಥಾಯಿಲಂಡಿನ ನೆರೆಕೆರೆಯಲ್ಲಿರುವ ರಾಜ್ಯಗಳೆಲ್ಲ ಬ್ರಿಟಿಶರವು. ಆದುದರಿಂದ ಥಾಯಿಲಂಡಿನಲ್ಲೂ ಬ್ರಿಟಿಶರ ಪ್ರಭಾವ ಬೆಳೆಯಿತು. ಬ್ರಿಟಿಶರು

ಸಾಲಕೊಟ್ಟರು. ಅನೇಕ ಬ್ರಿಟಿಶ ವ್ಯಾಪಾರೀ ಸಂಘ ಸಂಸ್ಥೆಗಳೂ ತಲೆ ಎತ್ತಿದುವು. ವಾಯು ಕೊಡೆಗಳ ಹಾಗೆ. ಲೋಹಚುಂಬಕದಂತೆ ಥಾಯಿಲಂಡ ಬ್ರಿಟನದ ಕಡೆ ಆಕರ್ಷಿಸಲ್ಪಡುವಂತೆ ಇವೆಲ್ಲ ಯತ್ನ. ಸಲಹೆಗಾರರೂ ತಜ್ಞರೂ ಮಾಡುವ ' ಮಹತ್ಕಾರ್ಯ ' ಅದೇ. ಆದರೆ ತಾನೊಂದು ನೆನೆದರೆ ದೈವ ಬೇರೊಂದು ನೆನೆಯಿತೆಂಬಂತೆ ೧೯೩೦ ರಿಂದಲೇ ದೇಶದಲ್ಲಿ ಜಪಾನದ ವರ್ಚಸ್ಸು ಬೆಳೆಯುತ್ತೊಡಗಿತ್ತು. ಜಪಾನಿ ಅರಳೆ ತಜ್ಞರೊಬ್ಬರನ್ನು ಥಾಯಿಲಂಡ ಕರೆಸಿಕೊಂಡಿತು. ೧೯೩೨ರಿಂದ ೧೯೩೭ರ ಅವಧಿಯಲ್ಲಿ ಜಪಾನಿ ವ್ಯಾಪಾರ ಐದರಷ್ಟು ಹೆಚ್ಚಿತು. ಹಲವು ಥಾಯಿಲಂಡ ತರುಣರು ಟೋಕಿಯೋದಲ್ಲಿ ಸೈನ್ಯ ಶಿಕ್ಷಣವನ್ನು ಪಡೆದರು. ಕೆಲವು ಚಿಕ್ಕ ಯುದ್ಧ ಹಡಗಗಳನ್ನೂ ಥಾಯಿಲಂಡ ಜಪಾನಿನಿಂದ ಕೊಂಡುಕೊಂಡಿತು. ದಕ್ಷಿಣ ಥಾಯಿಲಂಡಿನ “ ಕ್ರ ” ಭಾಗದಲ್ಲಿ ಒಂದು ಕಾಲುವೆ ಕಡಿವ ವಿಚಾರವೂ ಜಪಾನಿಗಿದ್ದಿತಂತೆ. ‘ಕ್ರ’ ಕಾಲುವೆಯಿಂದ ಪ್ಯಾಸಿಫಿಕ್ ಸಾಗರ ಮತ್ತು ಬಂಗಾಲ ಸಮುದ್ರಗಳನ್ನು ಜೋಡಿಸಲು ಸಾಧ್ಯ. ಆ ದಾರಿಯ ಮೂಲಕ ಪ್ಯಾಸಿಫಿಕದಿಂದ ಬಂಗಾಲಕ್ಕೆ ಬರಲು ದಾರಿ ಸುಗಮವಾಗುವದು. ಹತ್ತಿರವೂ ಹೌದು. ಈಗ ಸಿಂಗಾಪುರವನ್ನು ಸುತ್ತಿ ಬರುವ ಅವಶ್ಯಕತೆಯಿದೆ. ‘ ಕ್ರ ’ ಪ್ರದೇಶದಲ್ಲಿ ಬಂಡೆಗಲ್ಲು, ಜವುಳು ಭೂಮಿ, ಅರಣ್ಯಗಳಿದ್ದರೂ ಕಾಲುವೆ ಕಡಿಯುವುದೇನು ದೊಡ್ಡ ಕೆಲಸವಲ್ಲ. ಮೂರು ಕೋಟಿ ಪೌಂಡುಗಳ ವೆಚ್ಚ ಮಾಡಿದರೆ ಕಡಿಯಬಹುದೆಂದು ಇಂಜನಿಯರರು ಲೆಕ್ಕ ಹಾಕಿದ್ದಾರೆ. ಜಪಾನ ಈ ಕಾಲುವೆ ಕಡಿಯಲು ಬಯಸಿ ಯತ್ನಿಸುತ್ತೊ ಇಲ್ಲವೊ ತಿಳಿದಿಲ್ಲ. ಬ್ರಿಟಿಶರಂತೂ ಆರೀತಿ ಹೇಳುತ್ತಿದ್ದರು. ಆದರೆ ಇಷ್ಟರಿಂದಲೇ ಥಾಯಿಲಂಡ ಜಪಾನದ ಕಡೆ ಒಲಿದಿತ್ತೆಂದು ಹೇಳುವುದು ಸರಿಯಾಗಲಾರದು. ವ್ಯಾಪಾರದ ವಿಷಯದಲ್ಲಿಯೂ ಅದೇ ಮಾತು ಅನ್ವಯಿಸುತ್ತದೆ. ಜಪಾನ್, ಥಾಯಿಲಂಡಿಗೆ ಸಮೀಪವಿರುವುದರಿಂದಲೂ ಜಪಾನಿ ವಸ್ತುಗಳು ಅಗ್ಗವಿದ್ದುದರಿಂದಲೂ ವ್ಯಾಪಾರ ಬೆಳೆದಿರಬಹುದು. ಆ ಅವಧಿಯಲ್ಲಿ ಇನ್ನಿತರ ದೇಶಗಳಲ್ಲಿಯೂ ಜಪಾನಿ ವ್ಯಾಪಾರ ಮಿತಿಮೀರಿರಲಿಲ್ಲವೇ? ತಮ್ಮ ಲಾಭಕ್ಕೆ ಕತ್ತರಿ ಬಿದ್ದಿತೆಂದು ಬ್ರಿಟಿಶರಿಗೆ ಹೊಟ್ಟೆಯುರಿ. ಆದುದರಿಂದ ಈ ಎಲ್ಲ ಅಪಪ್ರಚಾರ.

## ಜಪಾನದ ದಂಡಯಾತ್ರೆ

ಥಾಯಿಲಂಡಿನ ಇಚ್ಛೆ, ಧೋರಣಗಳೇನೇ ಇರಲಿ, ಪೂರ್ವ ಏಶಿಯದಲ್ಲಿ ಬ್ರಿಟಿಶ ಮತ್ತು ಜಪಾನಗಳೊಳಗೆ ತಿಕ್ಕಾಟವು ಹೆಚ್ಚಾದಂತೆ ಥಾಯಿಲಂಡಿನ ಸ್ವಾತಂತ್ರ್ಯಕ್ಕೆ ಗಂಡಾಂತರ ಬರುವ ಚಿಹ್ನೆಗಳು ಕಾಣಿಸಿದುವು. ಬ್ರಿಟಿಶ ಸಾಮ್ರಾಜ್ಯದ ಮೇಲೆ ಮರಣಾಂತಿಕ ಪೆಟ್ಟು ಹಾಕಲು ಥಾಯಿಲಂಡ ಮಿಲಿಟರಿ ಆಯಕಟ್ಟಿನ ಸ್ಥಳ. ಈ ರಾಜ್ಯದಲ್ಲಿ ಮಿಲಿಟರಿ ಠಾಣೆಗಳನ್ನು ಬಿಗಿದರೆ ಬರ್ಮಾ ಮಲಯಾ, ಸಿಂಗಾಪುರಗಳಮೇಲೆ ದಂಡೆತ್ತಿ ಹೋಗಲು ಸುಲಭ. ಯುದ್ಧವು ಆರಂಭವಾದ ಕೂಡಲೇ ಜಪಾನವು ಅವರಂತೆಯೇ ವರ್ತಿಸಿತು. ಒಂದು ಜಪಾನಿ ಸೇನೆ ಬರ್ಮಾಕ್ಕೆ ನುಗ್ಗಿತು. ಇನ್ನೊಂದು ದಕ್ಷಿಣ ಥಾಯಿಲಂಡಿನ ಮೂಲಕ ಮಲಯಾಕ್ಕೆ ನುಸುಳಿತು. ಮಲಯದಿಂದ ದಕ್ಷಿಣಕ್ಕೆ ಸಾಗಿ ಬಂದ ಹಾಗೆ ಸಿಂಗಾಪುರವು ಸಮೀಪವಾಗುತ್ತದೆ. ಈ ಮಾರ್ಗವಾಗಿಯೇ ಜಪಾನರು ತೆರಳಿ ದಾಳಿ ಮಾಡಲು ಸಮರ್ಥರಾದರು. ಸಮುದ್ರದ ಮೂಲಕ ಬರುತ್ತಿದ್ದರೆ ಸಿಂಗಾಪುರದ ಕೋಟೆಯನ್ನು ಒಡೆಯುವುದು ಕಠಿನವಾಗುತ್ತಿತ್ತೋ ಏನೋ!

## ಉಭಯ ಸಂಕಟ

ಯುದ್ಧಕಾಲದಲ್ಲಿ ಥಾಯಿಲಂಡ ಜಪಾನಿನೊಡನೆ ಸಹಕರಿಸಿತ್ತೆಂದು ಬ್ರಿಟಿಶರ ಆರೋಪ. ಇದು ಎಷ್ಟರ ಮಟ್ಟಿಗೆ ನಿಜವೆಂದು ಸ್ಪಷ್ಟವಾಗಿಲ್ಲ. ನಮಗೊಂದೇ ಬಗೆಯ ಚಿತ್ರ ಕಾಣಿಸುತ್ತದೆ. ಥಾಯಿಲಂಡ ಅಮೇರಿಕದ ವಿರುದ್ಧ ಯುದ್ಧ ಸಾರಿರುವುದಿಲ್ಲ. ತನ್ನ ದೇಶವು ಜಪಾನಿನ ಅಥವಾ ಇನ್ನಾವುದೇ ದೇಶದ ಕೈಗೊಂಬೆಯಾಗುವುದನ್ನು ಸಹಿಸಲಾರೆವೆಂದು ಪ್ರಧಾನಮಂತ್ರಿ ಪಯೋಲ್ ಅನೇಕ ಸಲ ನುಡಿದಿದ್ದರು. ಹಾಗಿದ್ದರೆ ಥಾಯಿ ಸೇನೆ ಜಪಾನರನ್ನು ಪ್ರತಿಭಟಿಸಲಿಲ್ಲವೇಕೆ? ಈ ಪ್ರಶ್ನೆಯನ್ನು ಕೇಳುವುದು ಸಹಜ. ಹಿಟ್ಲರನು ದಂಡೆತ್ತಿ ಹೋದಾಗ ಡೆನ್ಮಾರ್ಕ, ಝೆಕೊಸ್ಲೊವಾಕಿಯ ಮುಂತಾದ ರಾಷ್ಟ್ರಗಳು ಸೆಣಸಲಿಲ್ಲವೇಕೆ? ಮುಖ್ಯವಾಗಿ, ಇವೆಲ್ಲ ಮತ್ಸ್ಯ ಕೂರ್ಮಗಳಂಥ ರಾಷ್ಟ್ರಗಳು. ೫೦ ಸಾವಿರ

ಕೂಡಾ ಸೇನೆ ಇದ್ದಿಲ್ಲ ಥಾಯಿಲಂಡಿನಲ್ಲಿ. ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಕೊರತೆ ಬೇರೆ. ಯುರೋಪಿಯುನ ಚಿಕ್ಕ ಚಿಕ್ಕ ರಾಷ್ಟ್ರಗಳಂತೆ ಔದ್ಯೋಗೀಕರಣ ಹೊಂದಿದ ದೇಶವೂ ಅಲ್ಲ. ಇಂಥ ಪರಿಸ್ಥಿತಿಯಲ್ಲಿ ದೈತ್ಯಬಾಹುವಾದ ಜಪಾನನ್ನು ಇದಿರಿಸುವದಾದರೂ ಹೇಗೆ? ಸಪ್ತ ಸಾಗರಗಳ ಒಡೆಯರು, ಜಗಜ್ಜೇತರು. ಲೋಕೈಕ ವೀರರೆಂದು ಹೆಸರಾದ ಬ್ರಿಟಿಶರಿಗೇ ಜಪಾನರನ್ನು ತಡೆಯಲಾಗಲಿಲ್ಲ. ಹಾಂಗಕಾಂಗ, ಮಲಯಾ, ಸಿಂಗಾಪುರಗಳನ್ನು ನಡುನೀರಲ್ಲಿ ಬಿಟ್ಟು ಓಡಿ ಹೋದರಂತೆ! ಅಂದ ಬಳಿಕ ಥಾಯಿಲಂಡಿನಂಥ ಅಬಲ ರಾಷ್ಟ್ರಗಳ ಪಾಡು ಪಟ್ಟೇನು? ಯಾರೂ ಬಂಡೆಗಲ್ಲಿಗೆ ತಲೆ ಬಡೆಸಿಕೊಳ್ಳುವುದಿಲ್ಲವಲ್ಲ!

## ಬ್ರಿಟಿಶರ ಸೇಡು


ಜಪಾನ ಸೋಲಿಸಲ್ಪಟ್ಟಿರುವುದರಿಂದ ಬ್ರಿಟಿಶರು ಥಾಯಿಲಂಡಿನ ಮೇಲೆ ತಮ್ಮ ಸೇಡನ್ನು ತೀರಿಸಿಕೊಳ್ಳಲೆತ್ನಿಸಿರುವರು. ತಮ್ಮ ಹಿತವೇ ಜಗತ್ತಿನ ಹಿತ, ತಮಗೆ ನ್ಯಾಯವಾದುದು ಜಗತ್ತಿಗೇ ನ್ಯಾಯವೆಂದು ಸರ್ವಸಾಧಾರಣವಾಗಿ ಬ್ರಿಟಿಶರ ಭ್ರಮೆ. ಅಷ್ಟೇ ಅಲ್ಲ, ಅದೇ ರೀತಿ ಜಗತ್ತು ಒಪ್ಪಬೇಕೆಂದು ಅವರ ವಾದ; ಛಲ. ಯಾರು ಅದರಂತೆ ನಡೆದುಕೊಳ್ಳುವುದಿಲ್ಲವೋ ಅವರು ಅಸಭ್ಯರು, ಮೂಢರು, ಮೂರ್ಖರು, ವೈರಿಗಳು, ಬರ್ಬರರು! ಸರಿ. ಅವರಿಗೆ "ಪ್ರಜಾಸತ್ತೆ" ಬೋಧಿಸುವ ಅವರನ್ನು ನಾಗರಿಕರನ್ನಾಗಿ ಮಾಡುವ ನೈತಿಕ ಹೊಣೆಯನ್ನು ಆಚರಣೆಯಲ್ಲಿ ತರುವ ಕಾರ್ಯಾರಂಭವಾಗುತ್ತದೆ. ಹೇಗೆ ಎಂದರೆ ಮಿಲಿಟರಿ ಬಲದಿಂದ. ಅದರಂತೆ ಈಗ ಥಾಯಿಲಂಡಿಗೆ ಬ್ರಿಟಿಶರು ಇಪ್ಪತ್ತೊಂದು ಕರಾರುಗಳನ್ನು ಒಪ್ಪಿಸಿದರು. ಪೌರ್ವಾತ್ಯ ಪ್ರದೇಶದ ಯುದ್ಧದಲ್ಲಿ ಸೇರಿಕೊಂಡ ತಪ್ಪಿಗೆ ಹದಿನೈದು ಲಕ್ಷ ಟನ್ ಅಕ್ಕಿಯನ್ನು ದಂಡವಾಗಿ ಕೊಡಬೇಕು, ಉಳಿಕೆ ಅಕ್ಕಿಯನ್ನು ಬ್ರಿಟನಿಗೆ ಮಾರಾಟ ಮಾಡಬೇಕು, ಬ್ರಿಟಿಶ ಸೈನಿಕರನ್ನು ಅನಿಶ್ಚಿತ ಸಮಯದವರೆಗೆ ಆಯಕಟ್ಟಿನ ಸ್ಥಳಗಳಲ್ಲಿಡಲು ಅನುಮತಿ ಕೊಡಬೇಕು, ನಾಕಾ ವೈಮಾನಿಕ ಮತ್ತು ವ್ಯಾಪಾರೀ ಸೌಕರ್ಯಗಳನ್ನು ಪೂರೈಸಬೇಕು ಎಂದು ಮುಂತಾಗಿ ಸೂಚಿಸಲಾಗಿತ್ತು.

'ಥಾಯಿಲಂಡ' ಎಂಬ ಹೆಸರನ್ನು 'ಸಯಾಂ' ಎಂದು ಬದಲಿಸಬೇಕೆಂದೂ ಒಂದು ವಿಚಿತ್ರ ಕರಾರು. 'ಕ್ರಾ' ಕಾಲಿವೆ ಕಡಿಯಕೂಡದೆಂದೂ ನಿರ್ಬಂಧ ಹಾಕಲಾಗಿದೆ. ಅಮೇರಿಕದ ಒತ್ತಾಯಕ್ಕೆ ಸಿಲುಕಿ ಬ್ರಿಟಿಶರು ಕರಾರುಗಳನ್ನು ಸ್ವಲ್ಪ ತಿದ್ದಿರುವದಾದರೂ ಅದರಿಂದ ಮಹತ್ವದ ಬದಲಾವಣೆಯಾದಂತೆ ಕಾಣುವುದಿಲ್ಲ.

## ಕೊಲೆ, ದಬ್ಬಾಳಿಕೆ

ಮಿತ್ರರ ಆಕ್ರಮಣದಿಂದ ಥಾಯಿಲಂಡಿಗೆ ಸುಖ ಶಾಂತಿ ದೊರೆತಿಲ್ಲ. ದೇಶದಲ್ಲಿ ರಾಜಕೀಯ ಅವ್ಯವಸ್ಥೆಯುಂಟಾಗಿದೆ. ಆನಂದ ಮಹಿದೋಲ ದೊರೆ ಗುಂಡಿಗಾಹುತಿಯಾದ. ಪುಮಿಫೋನ್ ಪಟ್ಟಕ್ಕೆ ಬಂದಿರುವನು. ಫ್ರೆಂಚ ಗೂಢಚಾರರೇ ಆನಂದನ ಕೊಲೆಗೆ ಕಾರಣರೆಂದು ಆರೋಪಿಸಲಾಗಿದೆ. ಇತ್ತ ಇಂಡೋಚೀನದಲ್ಲಿರುವ ಫ್ರೆಂಚ್ ಸೇನೆ ಥಾಯಿಲಂಡಿನ ಗಡಿದಾಟಿ ಆಕ್ರಮಣಶೀಲ ದಬ್ಬಾಳಿಕೆಯನ್ನು ಕೈಕೊಂಡಿದೆ. ಥಾಯಿಲಂಡ್ ರಾಷ್ಟ್ರಸಂಘಕ್ಕೆ ಮೊರೆಯಿಟ್ಟಿದೆ. ಆದರೆ ಆ ಮನವಿಯನ್ನು ಹಿಂತೆಗೆದುಕೊಳ್ಳಬೇಕೆಂದು ಥಾಯಿಲಂಡಿಗೆ ಅಮೇರಿಕದ ಒತ್ತಾಯ. ಯುರೋಪಿನಲ್ಲಿ ರಶಿಯದ ಪ್ರಭಾವವು ವಿಶೇಷವಾಗಿರುವುದರಿಂದ ಅದನ್ನು ತಡೆಯಲು ಅಮೇರಿಕನ್ನರಿಗೆ ಫ್ರೆಂಚರ ಸಹಕಾರ ಅವಶ್ಯವಾಗಿದೆ. ಅದಕ್ಕಾಗಿ ಥಾಯಿಲಂಡನ್ನು ಫ್ರೆಂಚರಿಗೆ ಬಲಿಕೊಡಲು ಅವರು ಸಿದ್ಧರಾಗಿರುವರು.

# ಮಲಯಾ



( ಭಾಗ ೫ )

# ಮಲಯಾ

## ಹಿಂದುಸ್ತಾನದ ಶಿಶು

ಮಲಯಾ ಹಿಂದುಸ್ತಾನದ ಬಾಹ್ಯವ್ಯೂಹ. ಈ ದೇಶದಲ್ಲಿ ವೈರಿಗಳು ಡೇರೆ ಹೊಡೆದರೆ, ಹಿಂದುಸ್ತಾನಕ್ಕೆ ಗಂಡಾಂತರವಿದೆ. ಮಲಯಾದಿಂದ ಸೇನೆ ಉತ್ತರಕ್ಕೆ ನುಗ್ಗಿ, ಸಯಾಂ ಮತ್ತು ಬರ್ಮ್ಮಾಗಳ ಮಾರ್ಗವಾಗಿ ಬಂಗಾಲ ಮತ್ತು ಆಸಾಂಗಳ ಬಾಗಿಲು ತಟ್ಟಲು ಸಾಧ್ಯ. ಅಲ್ಲಿ ಕಟ್ಟಿದ ವಿಮಾನಗೃಹಗಳಿಂದ ಹಿಂದುಸ್ತಾನದ ಮೇಲೆ ಬಾಂಬುಗಳನ್ನೆಸಯಲೂ ಸುಲಭ. ಮಲಯಾ ದ್ವೀಪಕಲ್ಪದ ತುತ್ತ ತುದಿಯಲ್ಲಿರುವ ಸಿಂಗಾಪುರವು ಹಿಂದುಸ್ತಾನಕ್ಕೆ ಪ್ರವೇಶಿಸುವ ಜಲಮಾರ್ಗ. ಹಿಂದೀ ಸಾಗರ ಬಂಗಾಲ ಸಮುದ್ರಗಳಿಗೆ ಪ್ಯಾಸಿಫಿಕ್ ಸಾಗರದಿಂದ ಹಾದು ಬರಲು ಸಿಂಗಾಪುರವೇ ದ್ವಾರ. ಆದುದರಿಂದ ಸಿಂಗಾಪುರ ಮತ್ತು ಮಲಯಾಗಳ ಭವಿತವ್ಯವು ಹಿಂದುಸ್ತಾನದ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಆಯಕಟ್ಟಿನ ಸ್ಥಳವಾದುದರಿಂದಲೇ ಬ್ರಿಟಿಶರು ಸಿಂಗಾಪುರದಲ್ಲಿ ಕೋಟೆ ಕೊತ್ತಲಗಳನ್ನು ರಚಿಸಿರುವರು. ಮಲಯಾದ ಮುಷ್ಟಿಯನ್ನು ಬಲಗೊಳಿಸಿರುವರು.

### ಹಿಂದುಸ್ತಾನದ ಶಿಶು

ಮಲಯಾ ಹಿಂದುಸ್ತಾನದ ಒಂದಂಗ. ಶಿಶು ಎಂದೆನ್ನುವುದೂ ಪರಮೋಚಿತ. ನಮ್ಮ ತಾಯ್ನಾಡಿನ ಮಕ್ಕಳೇ ಮಲಯಾದ ಮನೆಗೆ ತೆರಳಿ ಒಕ್ಕಲಾದರು. ಪಲ್ಲವರು, ಚೋಳರು, ಕಳಿಂಗರು ಈ ಕಡೆ ಬಂದಂತೆ

ಕ್ಕಾಣುತ್ತದೆ. ಕ್ರಿಸ್ತಶಕ ಐದನೇಯ ಶತಮಾನದೊಳಗಾಗಿ ಮಲಯಾದಲ್ಲಿ ಹಲವು ಹಿಂದೂ ರಾಜ್ಯಗಳು ಸ್ಥಾಪಿಸಲ್ಪಟ್ಟವು. ಲಾಂಗ ಕಿ ಯಾಘು ರಾಜ್ಯ ಕ್ರಿ. ಶ. ಎರಡನೇಯ ಶತಮಾನದಲ್ಲೇ ಕಟ್ಟಲ್ಪಟ್ಟಿತ್ತು. ಅದರಂತೆ ಕಾಮರಂಗ, ಕಲಸಾಪುರ, ಪಾಹಂಗ ಮೊದಲಾದವು ಚಿಕ್ಕ ಚಿಕ್ಕ ರಾಜ್ಯಗಳು. ಸುಂಗಾಯಿ ಬಾಟು (ಕೇಡಾ) ರಬ್ಬರ ತೋಟದಲ್ಲಿ ಇತ್ತೀಚೆಗೆ ಕೆಲವು ಹಿಂದೂ ಗುಡಿಯು ಮತ್ತು ಬುದ್ಧ ದೇವಾಲಯುಗಳ ಅವಶೇಷಗಳು ದೊರೆತಿವೆ. ಅನೇಕ ಕಡೆ ಸಂಸ್ಕೃತ ಶಿಲಾಶಾಸನಗಳು ಸಿಕ್ಕಿವೆ. ತಾಕೋಲಾ ( ಈಗಿನ ತಾಕುವಾ ) ಆಗ ಬಹಳ ಪ್ರಸಿದ್ಧಿ ಪಡೆದ ಬಂದರ. ಆ ರೇವಿನಲ್ಲಿಳಿದೇ ಹಿಂದೀಯರು ಜಾವಾ, ಸಯಾಂ, ಚಂಪಾ ದೇಶಗಳಿಗೆ ಪ್ರಯಾಣ ಮಾಡುತಿದ್ದರು. ಆಗ್ನೇಯ ಏಶಿಯ ಹಾಗೂ ಪೂರ್ವ ಏಶಿಯೆದ ದೇಶಗಳಿಗೆ ಕಾಲು ಚಾಚಲು ಮಲಯಾ ಹೆಬ್ಬಾಗಿಲು.

## ವಿಜಯ ಸಾಮ್ರಾಜ್ಯದ ಅಂಗ

ಅನೇಕ ವರುಷಗಳ ವರೆಗೆ ಮಲಯಾಕ್ಕೆ ಸ್ವತಂತ್ರ ಇತಿಹಾಸವಿದ್ದಂತೆ ತೋರುವುದಿಲ್ಲ ಅಥವಾ ಮಲಯಾ ಜಾಗತಿಕ ಐತಿಹಾಸಿಕ ರಂಗದಲ್ಲಿ ತನ್ನದೇ ಆದ ಒಂದು ಸ್ವತಂತ್ರ ವಿಶಿಷ್ಟ ಪಾತ್ರವನ್ನು ವಹಿಸಿಲ್ಲವೆಂದರೆ ಸರಿಯಾದೀತು. ಮಲಯವೇ ಪರರಾಷ್ಟ್ರಗಳ ಆಟದ ರಂಗಸ್ಥಳವಾಗಿತ್ತು. ಮೊದಲು ಅದು ಹಿಂದೀ ಸಾಮ್ರಾಜ್ಯದ ಅಂಗವಾಗಿದ್ದರೆ, ಕಡೆಗೆ ಶ್ರೀವಿಜಯ ಸಾಮ್ರಾಜ್ಯದ ( ಸುಮಾತ್ರ ) ಅಂಗವಾಗಿತ್ತು ಸಾಮ್ರಾಜ್ಯದ ದೊರೆ ಬುದ್ಧ ಧರ್ಮವನ್ನು ಅಂಗೀಕರಿಸಿದ ಮೇಲೆ ಪ್ರಜೆಗಳೂ ಅದನ್ನು ಸ್ವಾಗತಿಸಿದರು. ಮಲಯಾದ ಜನರೆಲ್ಲ ಬೌದ್ಧರಾದುದು ಹಾಗೆ. ಶ್ರೀವಿಜಯ ನಗರದಲ್ಲಿದ್ದ ಬುದ್ಧಪಂಡಿತರೂ ಹಳ್ಳಿ ಹಳ್ಳಿಗಳಿಗೆ ತೆರಳಿ ಬುದ್ಧದೇವನ ಅಮರ ಸಂದೇಶವನ್ನು ಜನರಿಗೆ ಬೋಧಿಸಿದರು.

## ಮಲಕ್ಕಾರಾಜ್ಯ

೧೫ನೇ ಶತಮಾನದ ಮಧ್ಯಕಾಲದಲ್ಲಿ ಮಲಯಾದಲ್ಲಿ ಮಲಕ್ಕಾ ಸ್ವತಂತ್ರರಾಜ್ಯದ ಅವತಾರವಾಯಿತು. ಅದರ ಜನನ ಕಥೆ ಬಹಳ ಸೊಗ

ಸಾಗಿದೆ. ಪಾಲೆಂಬಾಂಗ (ಸುಮಾತ್ರ)ದ ದೊರೆ ಪರಮೇಶ್ವರನು ಜಾವಾ ರಾಜಪುತ್ರಿಯನ್ನು ವಿವಾಹವಾಗಿದ್ದ. ಜಾವಾ ಸಾಮ್ರಾಜ್ಯಕ್ಕೆ ಕಪ್ಪಕಾಣಿಕೆಗಳನ್ನೂ ಕೊಡಲೊಪ್ಪಿದ್ದ. ಆದರೆ ಈ ಪರಾಧೀನಸ್ಥಿತಿಗೆ ಅವನು ಕೊನೆಗೆ ಪಾಶ್ಚಾತ್ತಾಪಪಟ್ಟು ಕಪ್ಪ ಕೊಡಲು ನಿರಾಕರಿಸಿದ. ಅದರಿಂದ ಜಾವಾದ ದೊರೆ ರೇಗಿ ಪಾಲೆಂಬಾಂಗ ರಾಜ್ಯದ ಮೇಲೆ ದಾಡೆತ್ತಿ ಬಂದ. ಪರಮೇಶ್ವರನು ರಾಣಿ ಹಾಗೂ ಮಕ್ಕಳೊಂದಿಗೆ ಸಿಂಗಪುರಕ್ಕೆ ಪಲಾಯನ ಮಾಡಿದನು. ಸಿಂಗಪುರ ಆಗ ಸಯಾಮಿನ ವಶವಿದ್ದ ದೊಡ್ಡ ನಗರ. ಆಗ್ನೇಯ ಏಶಿಯದ ವ್ಯಾಪಾರೀ ಕೇಂದ್ರ. ಸಯಾಮಿ ಗವರ್ನರ ಅದನ್ನು ಆಳುತಿದ್ದ. ಅವನೇ ಪರಮೇಶ್ವರನಿಗೆ ಆಶ್ರಯ ಕೊಟ್ಟನು. ಆದರೆ ಅಧಿಕಾರ ಹಂಬಲದಿಂದ ವಿಕಾರ ವಶನಾಗಿದ್ದ ವಿವೇಕವನ್ನು ಕಳೆದು ಕೊಂಡಿದ್ದ ಪರಮೇಶ್ವರನು ಸಯಾಮಿ ಗವರ್ನರನ ಕೊಲೆ ಮಾಡಿತಾನೇ ಸಿಂಗಾಪುರದ ಒಡೆಯನಾದ. ಸಯಾಮಿ ಗವರ್ನರನ ಅಣ್ಣ ಇದನ್ನರಿತು ಸಿಂಗಾಪುರಕ್ಕೆ ದೊಡ್ಡ ಸೇನೆ ಕಳಿಸಲು, ಯುದ್ಧದಲ್ಲಿ ಪರಮೇಶ್ವರನಿಗೆ ಸೋಲೊದಗಿತು. ಪುನಃ ಅವನು ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಮುವಾರ ನದಿ ಅಳಿವೆ ಭಾಗಕ್ಕೆ ಬಂದ. ಆ ಪ್ರದೇಶದ ಜನ ಅವನಿಗೆ ಆಶ್ರಯ ಕೊಟ್ಟರು. ಆ ವಸಾಹತಿಗೆ ಅವನು ಮಲಕ್ಕಾ ಎಂದು ನಾಮಕರಣ ಮಾಡಿದ. ಕಾಲಕ್ರಮೇಣ ಮಲಕ್ಕಾ ರಾಜ್ಯವನ್ನು ಸ್ಥಾಪಿಸಲು ಅವನು ಸಮರ್ಥನಾದ. ಸಣ್ಣ ನೌಕಾಪಡೆ ಕಟ್ಟಿ ಮಲಕ್ಕಾ ಜಲಸಂಧಿ ಮೂಲಕ ಸಿಂಗಾಪುರಕ್ಕೆ ತೆರಳುವ ಹಡಗಗಳನ್ನೆಲ್ಲ ತಡೆದು ಆ ಹಡಗಗಳು ಮಲಕ್ಕಾಕ್ಕೆ ಬಂದು ವ್ಯಾಪಾರ ಮಾಡುವಂತೆ ಬಲಾತ್ಕರಿಸಿದ.

## ಸಿಕಂದರ ಶಹಾ

ಪರಮೇಶ್ವರನ ಮಗ ಸಿಕಂದರ ಶಹಾನ ಆಳಿಕೆಯಲ್ಲಿ ಮಲಯಾ ರಾಜ್ಯ ಮಹತ್ವಕ್ಕೆ ಬಂತು. ಸಿಕಂದರನು ಹಿಂದುವಾಗಿದ್ದರೂ ಪಾಸೆ (ಸುಮಾತ್ರ) ಮುಸ್ಲಿಂ ದೊರೆಯ ಮಗಳನ್ನು ಲಗ್ನವಾಗಿದ್ದ. ಮಾವನ ಒತ್ತಾಯದ ಮೇರೆಗೆ ಕೊನೆಗೆ ಸಿಕಂದರನೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು. ಅರಸನೇ ಮತಾಂತರಿಯಾದ ಬಳಿಕ ಪ್ರಜೆಗಳ ಬಗ್ಗೆ ಹೇಳ

ಭೇಕೆ? ಜನ ಕೂಡಾ ಇಸ್ಲಾಂ ಧರ್ಮಾನುಯಾಯಿಗಳಾಗುತ್ತ ಬಂದರು. ಸಿಕಂದರ ಶಹಾ ದೊಡ್ಡ ನೌಕಾಪಡೆ ಕಟ್ಟಿ ರಾಜ್ಯರಕ್ಷಣೆಯ ವ್ಯವಸ್ಥೆ ಮಾಡಿದ. ಸಿಂಗಾಪುರಕ್ಕೆ ತೆರಳುವ ಹಡಗಗಳನ್ನೆಲ್ಲ ಮಲಕ್ಕಾಕ್ಕೆ ತಿರುಗಿಸಿದ. ಅದರಿಂದ ಸಿಂಗಪುರದ ವ್ಯಾಪಾರಕ್ಕೆ ಹಾನಿಯುಂಟಾಯಿತು. ಸಯಾಮಿನ ದೊರೆ ರೇಗಿ ಯುದ್ಧಕ್ಕೆ ಸಿದ್ಧನಾದ. ಯುದ್ಧವೆಂದರೆ ಸೋಲು ನಿಶ್ಚಯ ವೆಂದರಿತ ಸಿಕಂದರ ಶಹಾ ಮುತ್ಸದ್ದಿತನದಿಂದ ಈ ಬಿಕ್ಕಟ್ಟಿನಿಂದ ಪಾರಾದನು. ಸಿಂಗಪುರದಿಂದ ದೊರೆವಷ್ಟು ಕಂದಾಯವನ್ನು ಕಪ್ಪಕಾಣಿ ಕೆಯ ರೂಪದಲ್ಲಿ ಕೊಡಲು ಸಿಕಂದರ ಶಹಾ ಸಮ್ಮತಿಸಿದ. ಸಯಾಮಿ ದೊರೆಗೆ ಸಂತೋಷವಾಯಿತು. ಅವನು ಮಲಕ್ಕಾ ಸಮುದ್ರದಲ್ಲಿದ್ದ ಕೆಲವು ದ್ವೀಪಗಳನ್ನು ಸಿಕಂದರ ಶಹಾನಿಗೆ ಬಿಟ್ಟುಕೊಟ್ಟ. ಸಿಕಂದರನ ತರುವಾಯ ಅವನ ಹಿಂದೂ ಮಕ್ಕಳಿಬ್ಬರು ಪಟ್ಟಕ್ಕೆ ಬಂದರು. ಆ ಮೇಲೆ ಇಸ್ಲಾಮಿ ಮುಝಾಫರ ಶಹಾ ಅರಸನಾದ. ಮುಝಾಫರ ಶಹಾ ಪಾಹಂಗ ಮುಂತಾದ ಕೆಲವು ರಾಜ್ಯಗಳನ್ನು ಆಕ್ರಮಿಸಿದನು. ಆದರೆ ಮುಝಾಫರ ಶಹಾನ ಕಾಲದಲ್ಲೇ ಪಾಶ್ಚಾತ್ಯರಿಂದ ಮಲಯಾ ರಾಜ್ಯಕ್ಕೆ ಅಳಿಗಾಲ ಬಂದಿತು.

## ಪಾಶ್ಚಾತ್ಯರು

೧೫೦೯ ರಲ್ಲಿ ಕೆಲವು ಪೋರ್ತುಗೀಸರ ಹಡಗಗಳು ಮಲಕ್ಕಾಕ್ಕೆ ಬಂದುವು. ಮೊದಲು ಜನ ಅವರನ್ನು ಪ್ರೀತಿಯಿಂದ ಸ್ವಾಗತಿಸಿದರೂ ಕೊನೆಗೆ ಪಾಶ್ಚಾತ್ಯರು ಅಪ್ರಿಯರಾದರು. ಮಲಕ್ಕಾ ಸರಕಾರವು ಕೆಲವು ಪೋರ್ತುಗೀಸರನ್ನು ಬಂಧಿಸಿತು. ಸ್ವದೇಶ ಬಾಂಧವರ ಮೇಲಿನ ಈ 'ಅತ್ಯಾಚಾರ'ದ ಸೇಡು ತೀರಿಸಿಕೊಳ್ಳಲು ಅಲ್‌ಬುಕರ್ಕ್ ದೊಡ್ಡ ನೌಕಾ ಪಡೆಯೊಂದಿಗೆ ೧೫೧೧ ನೇ ಜುಲಾಯಿ ತಿಂಗಳಲ್ಲಿ ಬಂದ. ಮುಝಾಫರ್ ಶಹಾ ಅಲ್ಬುಕರ್ಕನಿಗೆ ವ್ಯಾಪಾರಿ ಸವಲತ್ತುಗಳನ್ನೆಲ್ಲ ಕೊಟ್ಟ ಮಲಕ್ಕಾ ದಲ್ಲಿ ಒಂದು ಚಿಕ್ಕ ಕೋಟೆ ಕಟ್ಟಲು ಅವನಿಗೆ ಅನುಮತಿ ದೊರೆಯಿತು. ಆದರೆ ದೇಶವು ಬಹಳ ಅಬಲಸ್ಥಿತಿಯಲ್ಲಿದೆಯೆಂದು ಅರಿತ ಅಲ್‌ಬುಕರ್ಕ್ ರಾಜ್ಯಾಕ್ರಮಣಕ್ಕೆ ಅದೇ ಸಂದರ್ಭವೆಂದು ತಿಳಿದು ಮಲಕ್ಕಾ ನಗರದ ಮೇಲೆ ಮುತ್ತಿಗೆ ಹಾಕಿದ. ಅಗಸ್ಟ ತಿಂಗಳಲ್ಲಿ ಅದು ಶರಣು ಹೋಯಿತು.

ಮುಝಾಫರ ಶಹಾ ಪಾಹಂಗ ಪ್ರಾಂತಕ್ಕೆ ಪಲಾಯನ ಮಾಡಿದನು. ಹೆಚ್ಚು ಕಡಿಮೆ ಒಂದು ಶತಮಾನದ ವರೆಗೆ ಭಾರೀ ವ್ಯಾಪಾರೀ ಕೇಂದ್ರ ವಾಗಿದ್ದ ಮಲಕ್ಕಾ ಈ ರೀತಿ ಬಿದ್ದುಹೋಯಿತು. ಮಲಕ್ಕಾ ರಾಜವಂಶದ ಕೊನೆಯ ಅರಸು ಜೆಹೋರ ಪ್ರಾಂತದ ಸುಲ್ತಾನನಾದ. ಇಂದಿನ ಮಲಯದ ಈ ಸುಲ್ತಾನರೆಲ್ಲ ಅವನ ವಂಶಜರೇ. ಎಂದರೆ, ಆದಿ ದೊರೆ ಪರಮೇಶ್ವರನ ಕುಲದವರು. ಪೋರ್ತುಗೀಸರಿಂದ ಮಲಯವನ್ನು ಬ್ರಿಟಿಶರು ಸೆಳೆದುಕೊಂಡರು.

## ದೇಶದ ಸ್ವರೂಪ

ಮಲಯಾ ಇಂಗ್ಲಂಡಿನಷ್ಟು ದೊಡ್ಡದಿದೆ. ಅದರ ವಿಸ್ತಾರ ೫,೧೬೦೫ ಚದರ ಮೈಲುಗಳು. ಪಶ್ಚಿಮ ಭಾಗವು ಸ್ವಲ್ಪ ಸಮತಟ್ಟಾದ ಭೂಮಿ. ಪೂರ್ವಕ್ಕೆ ಹೋದಂತೆ ಸ್ವಲ್ಪ ಗುಡ್ಡಗಾಡುಗಳು. ಮಲಯದಲ್ಲಿ ಹೊಳೆ, ಹಳ್ಳ ಕಾಡು ಬೆಟ್ಟಗಳು ಹೇರಳವಾಗಿವೆ. ವನದಲ್ಲಿ ಹುಲಿ, ಚಿರತೆ, ಕಾಡು ಬೆಕ್ಕು, ಕರಡಿ, ಆನೆ, ಹಾವು, ಮುಳ್ಳು ಹಂದಿಗಳೂ ಅಧಿಕ. ಮೊಸಳೆ, ನೀರುನಾಯಿ, ಗಂಡಮೃಗ, ಖಡ್ಗಮೃಗಗಳಿಗೂ ಬರಗಾಲವಿಲ್ಲ. ಮನುಷ್ಯನಷ್ಟು ಎತ್ತರ ಬೆಳೆಯುವ ಲಾಲಾಂಗ ಹುಲ್ಲು ಎಷ್ಟು ಕೊಯ್ದರೂ ಮತ್ತೆ ಮತ್ತೆ ಬೆಳೆಯುತ್ತದೆ. ಸುಂದರವಾದ ನಾನಾ ಜಾತೀಯ ಪಕ್ಷಿಗಳು ಮರಗಳ ರೆಂಬೆಗಳಲ್ಲಿ ಕುಳಿತು ಮುಗಿಯದ ತಮ್ಮ ಹಾಡುಗಳನ್ನು ಹಾಡುತ್ತಿವೆ. ಮಲಯದ ಗತವೈಭವವನ್ನು ಬಣ್ಣಿಸಿ ಹಾಡುಕಟ್ಟಿ ಉಲಿಯುತ್ತಿವೆಯೋ ಏನೋ? ಸ್ವತಂತ್ರ ಗಾಳಿಯನ್ನು ಸೇವಿಸಿ ಹಾರಾಡುತ್ತಿರುವ ಈ ಪಕ್ಷಿಗಳು ಜನರಿಗೆ ಆ ಸಂದೇಶ ಬೀರುತ್ತಿರಲೂ ಬಹುದು.

## ಕಣಿಗಳು ಮತ್ತು ತೋಟಗಳು

ಮಲಯಾದಲ್ಲಿ ಅಕ್ಕಿ ಮತ್ತು ರಬ್ಬರಿನ ಉತ್ಪಾದನೆ ಮುಖ್ಯ. ಎರಡು ಲಕ್ಷ ಎಕರೆ ಭೂಮಿಯಲ್ಲಿ ಅಕ್ಕಿಯನ್ನು ಬೆಳೆಸಲಾಗಿದೆ. ರಬ್ಬರ ತೋಟಗಳು ೩೦ ಲಕ್ಷ ಎಕರೆ ಭೂಮಿಯನ್ನು ವ್ಯಾಪಿಸಿವೆ. ರಬ್ಬರಿನ ಉತ್ಪಾದನೆಗೇ ವಿಶೇಷ ಪ್ರೋತ್ಸಾಹವನ್ನು ಕೊಡಲಾಗಿದೆ. ಬ್ರಿಟಿಶರು

೬೦೦ ಕೋಟಿ ರೂ. ಗಳಿಗಿಂತಲೂ ಅಧಿಕ ಬಂಡವಲು ಸುರಿಸಿರುವರು. ಜಗತ್ತಿನ ರಬ್ಬರ್ ಉತ್ಪಾದನೆಯಲ್ಲಿ ಮಲಯಾದ್ದು ನೂರಕ್ಕೆ ೪೬ ರಷ್ಟು. ತೆಂಗಿನ ತೋಟಗಳಿಗೂ ಕಡಿಮೆಯಿಲ್ಲ. ೬ ಲಕ್ಷ ಎಕರೆ ಭೂಮಿಯಲ್ಲಿ ಈ ಕಲ್ಪವೃಕ್ಷಗಳು ತಲೆ ಎತ್ತಿ ನಿಂತಿವೆ. ಬೆಳ್ಳಿ, ಚಿನ್ನ, ಕಬ್ಬಿಣ, ತವರಗಳ ಕಣಿಗಳೂ ಇವೆ. ಟಿನ್ ಕಣಿಗಳಲ್ಲಿ ಬ್ರಿಟಿಶರು ೨೦೦ ಕೋಟಿ ರೂ. ಗಳನ್ನು ಸುರಿಸಿರುವರು. ವಾರ್ಷಿಕ ಟಿನ್ ಉತ್ಪತ್ತಿ ೩೫ ಸಾವಿರ ಟನ್. ಕೋಟಬಾರು, ಕುಂಟನ್, ಸಿಂಗಾಪುರ, ಪೆನಾಂಗ, ಸ್ವೇಟನ್ ಹ್ಯಾಂ, ಮೊದಲಾದ ಬಂದರಗಳ ಮೂಲಕ ಬ್ರಿಟನ ಹಾಗೂ ಇನ್ನಿತರ ದೇಶಗಳಿಗೆ ಈ ಸರಕುಗಳು ಹರಿದು ಹೋಗುತ್ತಿದ್ದುವು. ಜಪಾನಿ ಆಕ್ರಮಣ ಕಾಲದಲ್ಲಿ ಅವರು ರಬ್ಬರ ತೋಟಗಳನ್ನಾಗಲಿ, ಇನ್ನಿತರ ಆಸ್ತಿಪಾಸ್ತಿಯನ್ನಾಗಲೀ ನಾಶಮಾಡಿಲ್ಲ. ಮೀನು ಹಿಡಿಯುವುದೂ ಜನರ ಮುಖ್ಯ ಉದ್ಯೋಗಗಳಲ್ಲೊಂದು. ಪ್ರತಿವರುಷ ೨ ಸಾವಿರ ಟನ್ ಒಣ ಮೀನನ್ನು ವಿದೇಶಗಳಿಗೆ ರಫ್ತುಮಾಡಲಾಗುತಿತ್ತು.

## ಜನರ ಪರಿಸ್ಥಿತಿ

ಮಲಯದ ಜನಶಕ್ತಿ ಕಡಿಮೆ. ಒಟ್ಟು ಜನಸಂಖ್ಯೆ ೫೫ ಲಕ್ಷ. ಬ್ರಿಟಿಶರು, ಚೀನಿಯರು, ಹಿಂದೀಯರು ಮೊದಲಾದ ವಿದೇಶಿಯರೇ ಹೆಚ್ಚು. ಮಲಯಾನರು ವಿರಳ. ದೇಶದಲ್ಲಿ ಚೀನಿಯರೇ ೨೫ ಲಕ್ಷ ಇದ್ದಾರೆ. ಅವರು ಕೈಹಾಕದ ಉದ್ಯೋಗವಿಲ್ಲ. ಟಿನ್ ಕಣಿಗಳು ಮೂರರಲ್ಲಿ ಒಂದು ಅವರದೇ. ರಬ್ಬರ್ ತೋಟಗಳೂ ಅವರದೇ ಹೆಚ್ಚು. ಬ್ರಿಟಿಶರನ್ನು ಬಿಟ್ಟರೆ ಮಲಯಾದಲ್ಲಿ ಚೀನಿಯರದೇ ಪ್ರಭಾವ. ರಬ್ಬರ ತೋಟ, ಟಿನ್ ಕಣಿ, ಕಬ್ಬಿಣ ಕಣಿಗಳಲ್ಲಿ ದುಡಿವ ಕೂಲಿಕಾರರೂ ಚೀನಿಯರು. ಅವರ ಸಂಖ್ಯೆಯೇ ೭೫ ಸಾವಿರ. ಪೆನಾಂಗ, ಕೌಲಾಲಂಪೂರ ಸಿಂಗಾಪುರ ಮುಂತಾದ ಕಡೆ ಚೀನಿಯರದೇ ಹೋಟೇಲುಗಳು. ನೂರಕ್ಕೆ ೩೧ ರಷ್ಟು ಚೀನಿಯರು ಮಲಯಾದಲ್ಲೇ ಹುಟ್ಟಿ ಬೆಳೆದವರು. ಮಲಯಾನರ ಬಣ್ಣ ಕಂದು. ಅಷ್ಟು ಕಪ್ಪೂ ಅಲ್ಲ. ಅಷ್ಟು ಕೆಂಪೂ ಅಲ್ಲ. ಅವರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. ತಮ್ಮ

ತಾಯ್ನಾಡಿನಲ್ಲೇ ಮಲಯಾನರು ಪರದೇಶಿಗಳಾಗಿದ್ದಾರೆ. ಯಾವ ಅಧಿಕಾರವೂ ಅವರ ಕೈಯಲ್ಲಿಲ್ಲ. ಅವರೇ ವಿದೇಶಿ ಪ್ರಭಾವಕ್ಕೊಳಗಾಗಿರುವರು. ಬಹು ಸಂಖ್ಯಾಕರಾದ ಮಲಯಾನರು ರೈತರು. ಹಳ್ಳಿಗಳಲ್ಲೇ ಅವರ ವಾಸ. ಇತ್ತೀಚೆಗೆ ವಿದ್ಯಾವಂತ ತರುಣರು ನೌಕರಿಯ ಮೋಹಕ್ಕೊಳಗಾಗಿರುವರು.

## ಬ್ರಿಟಿಶರ ರಾಜ್ಯಾಡಳಿತೆ

ಮಲಯಾ ಬ್ರಿಟಿಶರ ದೊಡ್ಡ ವಸಾಹತು. ಅದರ ಆಡಳಿತೆಗಾಗಿ ಅವರು ಮೂರು ವಿಭಾಗಗಳನ್ನು ಮಾಡಿದ್ದಾರೆ. ಮೊದಲನೆಯುದು ಸ್ಟ್ರೇಟ್ಸ ಸೆಟ್ಲಮೆಂಟ್ಸ್. ನಾಲ್ಕು ಸಂಸ್ಥಾನಗಳನ್ನು ರಚಿಸಿ ಸಂಯುಕ್ತ ಘಟನೆಯ ಸಂಕೋಲೆಗಳಿಂದ ಬಿಗಿದಿರುವುದು ಎರಡನೇಯ ವ್ಯವಸ್ಥೆ. ಮೂರನೆಯದಾಗಿ ನಾಲ್ಕೈದು 'ಸ್ವತಂತ್ರ' ಸಂಸ್ಥಾನಗಳನ್ನು ನಿರ್ಮಿಸಿರುವರು. ಅಖಿಲ ಮಲಯಾದ ರಾಜ್ಯಸೂತ್ರ ಬ್ರಿಟಿಶ ಅಧಿಕಾರಿಗಳ ಕೈಯಲ್ಲೇ ಇದೆ.

### ಸ್ಟ್ರೇಟ್ಸ ಸೆಟ್ಲಮೆಂಟ್

ಸ್ಟ್ರೇಟ್ಸ್ ಸೆಟ್ಲಮೆಂಟ ಬ್ರಿಟಿಶರ ಪ್ರತ್ಯಕ್ಷ ಆಡಳಿತೆಗೊಳಗಾಗಿದೆ. ಅದಕ್ಕೆ ಸಂಪೂರ್ಣ ವಸಾಹತು ಸ್ಥಾನಮಾನ. ಈ ಸೆಟ್ಲಮೆಂಟಿನಲ್ಲಿ ಸಿಂಗಾಪುರ (ಕೊಕೋಸ್ ದ್ವೀಪಗಳು ಮತ್ತು ಕ್ರಿಸ್ಮಸ್ ದ್ವೀಪ ಸೇರಿಕೊಂಡಿದೆ), ಪೆನಾಂಗ, (ಅದರಲ್ಲಿ ವೆಲ್ಲೆಸ್ಲಿ ಪ್ರಾಂತವನ್ನು ಸೇರಿಸಿಕೊಳ್ಳಲಾಗಿದೆ), ಮಲಕ್ಕಾ ಮತ್ತು ಲಾಬುವನ ಎಂದು ನಾಲ್ಕು ವಿಭಾಗಗಳು. ಇಡೀ ಸೆಟ್ಲಮೆಂಟಿಗೊಬ್ಬ ಬ್ರಿಟಿಶ್ ಗವರ್ನರ್. ಮಲಕ್ಕಾ, ಪೂರ್ವಾರ್ಂತ್ಯದಲ್ಲಿ ಯುರೋಪಿಯನ್ನರ ಅತಿ ಹಳೆಯ ವಸಾಹತು. ೧೫೧೧ರಲ್ಲಿ ಅಲ್‌ಬುಕರ್ಕ್ ಅದನ್ನು ಆಕ್ರಮಿಸಿಕೊಂಡ. ೧೬೪೧ ರಲ್ಲಿ ಡಚ್ಚರು ಇದನ್ನು ಪೋರ್ತುಗೀಸರಿಂದ ಕಿತ್ತುಕೊಂಡರು ಮತ್ತು ಅದು ಬ್ರಿಟಿಶರ ವಶವಾದುದು ೧೬೯೫

ರಲ್ಲಿ. ೧೮೧೮ ರಲ್ಲಿ ಡಚ್ಚರಿಗೆ ಬ್ರಿಟಿಶರು ಹಿಂತಿರುಗಿ ಕೊಟ್ಟರೂ ಪುನಃ ೧೮೨೪ರಲ್ಲಿ ಅದು ಬ್ರಿಟಿಶರ ಈಸ್ಟ ಇಂಡಿಯಾ ಕಂಪೆನಿಗೆ ಒಪ್ಪಿಸಲ್ಪಟ್ಟಿತು. ೧೭೮೬ ರಲ್ಲಿ : ಪೆನಾಂಗ ದ್ವೀಪವನ್ನು ಕೇಡಾ ಸುಲ್ತಾನನು ಬ್ರಿಟಿಶರಿಗೆ "ಬಿಟ್ಟುಕೊಟ್ಟ". ಅದೇ ದ್ವೀಪದಬಳಿಯಿದ್ದ ಮಲಯಾ ಮಾತೃಭೂಮಿಯ ವೆಲ್ಲೆಸ್ಲಿ ಪ್ರಾಂತವನ್ನು ೧೮೦೦ ರಲ್ಲಿ ಬ್ರಿಟಿಶರು ಗೆದ್ದುಕೊಂಡರು. ೧೮೨೪ ರಲ್ಲಿ ಸಿಂಗಾಪುರವು ಸಂಪೂರ್ಣ ಬ್ರಿಟಿಶರ ಅಧೀನವಾಯಿತು. ಕೊಕೋಸ ದ್ವೀಪವನ್ನು ೧೮೫೭ ರಲ್ಲಿ ಕ್ರಿಸ್ಮಸ್ ದ್ವೀಪವನ್ನು ೧೮೮೮ ರಲ್ಲಿ ಬ್ರಿಟಿಶ ಸೈನಿಕರು ಆಕ್ರಮಿಸಿದರು. ಲಾಬುವನ್ ದ್ವೀಪವನ್ನು ೧೮೪೬ ರಲ್ಲಿ ಬ್ರಿನೇಯಿ ಸುಲ್ತಾನನು ಬ್ರಿಟನಿಗೆ ಬಿಟ್ಟುಕೊಡಬೇಕಾಯಿತು. ಈ ದ್ವೀಪಗಳನ್ನೆಲ್ಲ ಸೆಟ್ಲಮೆಂಟ ಗವರ್ನರರ ಆಡಳಿತೆಗೆ ಒಪ್ಪಿಸಿದುದು ಇತ್ತೀಚೆಗೆ. ೧೯೧೨ ರಲ್ಲಿ ಲಾಬುವನ್ ದ್ವೀಪಗಳನ್ನು ಪ್ರತ್ಯೇಕ ವಸಾಹತುವೆಂದು ಪರಿಗಣಿಸಿ ಅದಕ್ಕೊಬ್ಬ ಬೇರೆ ಗವರ್ನರರನ್ನು ನೇಮಿಸಲಾಯಿತು. ಈ ವಸಾಹತಿನ ಒಟ್ಟು ವಿಸ್ತಾರ ೧೩೫೬ ಚ. ಮೈಲಿಗಳು. ಜನಸಂಖ್ಯೆ 11¼ ಲಕ್ಷ.

## ಸಂಯುಕ್ತ ಸಂಸ್ಥಾನಗಳು

ಪೆರಾಕ, ಸೆಲಾಂಗರ್, ನೇಗ್ರಿಸೆಂಬಿಲನ್ ಮತ್ತು ಪಾಹಂಗ್ ಇವು ಬ್ರಿಟಿಶ್ ರಕ್ಷಣೆಗೊಳಗಾದ ಸಂಯುಕ್ತ ಸಂಸ್ಥಾನಗಳು. ೧೮೭೪ ರಿಂದ ೧೮೮೧ರ ಅವಧಿಯೊಳಗೆ ಈ ಸಂಸ್ಥಾನಗಳನ್ನು ಬ್ರಿಟಿಶರು ಆಕ್ರಮಿಸಿದರು. ಬ್ರಿಟಿಶ ಮಿಲಿಟರಿ ಶಕ್ತಿಯನ್ನು ಪ್ರತಿಭಟಿಸಲು ಸಾಧ್ಯವಾಗದ ಈ ಸಂಸ್ಥಾನಗಳ ಸುಲ್ತಾನರೆಲ್ಲ ಬ್ರಿಟಿಶ "ರಕ್ಷಣೆ"ಗೊಳಗಾದರು. ೧೮೯೫ ರಲ್ಲಿ ಈ ನಾಲ್ಕು ಸಂಸ್ಥಾನಗಳನ್ನು ಜೋಡಿಸುವ ಸಂಯುಕ್ತಘಟನೆ ಯೋಜನೆಯನ್ನು ಜಾರಿಗೆ ತಂದರು ೧೯೦೯ ರಲ್ಲಿ ಎಲ್ಲ ಸಂಸ್ಥಾನಗಳಿಗನ್ವಯಿಸುವ ಫೆಡರಲ್ (ಸಂಯುಕ್ತ) ವಿಧಿಮಂಡಲವೂ ಸ್ಥಾಪಿಸಲ್ಪಟ್ಟಿತು. ಪ್ರತಿಯೊಂದು ಸಂಸ್ಥಾನದಲ್ಲೂ ನ್ಯಾಯವಿಧಾಯಕ ಸಭೆಗಳೂ ರಚಿಸಲ್ಪಟ್ಟಿವೆ. ಆದರೆ, ಇವು ಪ್ರಾತಿನಿಧಿಕ ಸಭೆಗಳಲ್ಲ. ಸಭೆಯ ಅಧ್ಯಕ್ಷರು ಆ ಸಂಸ್ಥಾನಗಳ ಸುಲ್ತಾನರು. ಸದಸ್ಯರನ್ನು ಅವರೇ ಬ್ರಿಟಿಶ ಕಮಿಶನರರ ಸಲಹೆ ಪಡೆದುಕೊಂಡು ನೇಮಿಸಿರುತ್ತಾರೆ. ಸ್ಟೇಟ ಸೆಟ್ಲಮೆಂಟಿನ

ಬ್ರಿಟಿಶ ಗವರ್ನರರು ಈ ಸಂಯುಕ್ತ ಸಂಸ್ಥಾನಗಳ ಕಮಿಶನರರು. ಪೆರಾಕ ಸಂಸ್ಥಾನದ ವಿಸ್ತಾರ ೭೯೮೦ ಚ. ಮೈಲುಗಳು. ಸೆಲಾಂಗರ್, ನೇಗ್ರಿಸೆಂಬಿಲನ್, ಪಾಹಂಗ್‌ಗಳ ವಿಸ್ತಾರ ಕ್ರಮವಾಗಿ ೩೧೬೦,೨೫೮೦ ಮತ್ತು ೧೩೮೨೦ ಚ. ಮೈಲುಗಳು. ಜನಸಂಖ್ಯೆ ಈ ನಾಲ್ಕು ಸಂಸ್ಥಾನಗಳದ್ದು ಕ್ರಮವಾಗಿ ೯೯೨೬೯೧, ೭೦೧೫೫೨, ೨೯೬೦೦೯, ೨೨೧೮೦೦.

## ಸ್ವತಂತ್ರ ಸಂಸ್ಥಾನಗಳು

ಮಲಯಾದ ಜೋಹೋರ, ಕೇಡಾ, ಪೆರ್ಲಿಸ್, ಕೆಲಾಂಟನ್ ಮತ್ತು ಟ್ರೆಂಗಾನು ಸಂಸ್ಥಾನಗಳು "ಸ್ವತಂತ್ರ" ವಾಗಿರುವವಾದರೂ ಸ್ವೇಚ್ಛಾಚಾರವಿಲ್ಲ. ಹಿಂದುಸ್ಥಾನದ ಸಂಸ್ಥಾನಗಳಷ್ಟೇ ಈ ಸಂಸ್ಥಾನಗಳ ಸ್ಥಾನಮಾನ. ಜೊಹೋರ ಸಂಸ್ಥಾನದ ಸುಲ್ತಾನನು ೧೮೮೫ ರಲ್ಲಿ ಮಾಡಿಕೊಂಡ ಒಪ್ಪಂದದನ್ವಯ ಬ್ರಿಟಿಶ್ 'ಸಲಹೆಗಾರ' ನ ಸಲಹೆಯಂತೆ ರಾಜ್ಯಾಡಳಿತೆ ನಡೆಸಬೇಕಾಗಿದೆ. ಈ ಸುಲ್ತಾನನ ರಾಜ್ಯದಲ್ಲಿ ಮಂತ್ರಿಮಂಡಳ ಮತ್ತು ನ್ಯಾಯವಿಧಾಯಕ ಸಭೆಗಳಿವೆ. ಉಳಿದ ನಾಲ್ಕು ಸಂಸ್ಥಾನಗಳು ಸಂಪೂರ್ಣ ಬ್ರಿಟಿಶ್ ಕೈಗೊಂಬೆ ರಾಜ್ಯಗಳು. ಸಯಾಮದಿಂದ ಈ ಸಂಸ್ಥಾನಗಳನ್ನು ಬ್ರಿಟಿಶರು ಕಿತ್ತುಕೊಂಡಿರುವರು. ೧೯೦೯ ರಲ್ಲಿ ಆದ ಬ್ರಿಟನ-ಸಯಾಮ ಒಪ್ಪಂದದ ಮೇರೆಗೆ ಈ ನಾಲ್ಕು ಸಂಸ್ಥಾನಗಳ ಮೇಲಿನ ಸಂಪೂರ್ಣ ಪ್ರಭುತ್ವವನ್ನು ಸಯಾಂ ಬಿಟ್ಟುಕೊಟ್ಟಿತು. ಜೊಹೋರ್, ಕೇಡಾ, ಪೆರ್ಲಿಸ್, ಕೆಲಾಂಟನ್ ಮತ್ತು ಟ್ರೆಂಗಾನು ಸಂಸ್ಥಾನಗಳ ವಿಸ್ತಾರ ಕ್ರಮವಾಗಿ ೭೩೩೦, ೩೬೬೦, ೩೧೦, ೫೭೨೦, ೫೦೫೦ ಚದರ ಮೈಲುಗಳು.

## ಯುದ್ಧ ಮತ್ತು ಮಲಯಾ

ಜಪಾನವು ಯುದ್ಧ ಘೋಷಿಸಿದ ಕೂಡಲೇ ಮಲಯಾದ ಮೇಲೆ ದಂಡೆತ್ತಿ ಬಂದಿತು. ನೆಲ, ಜಲ, ಆಕಾಶ ದಾಳಿಗಳನ್ನು ಅವರು ಏಕಕಾಲದಲ್ಲಿ ಕೈಕೊಂಡರು. ವೈರಿಗಳನ್ನು ತಡೆಯಲು ಬ್ರಿಟಿಶರಿಗೆ ಶಕ್ಯವಾಗಲಿಲ್ಲ. ಬ್ರಿಟಿಶರಿಗೆ ನೌಕಾ, ವೈಮಾನಿಕ ಸೋಲುಗಳಾದವು. ಮಾತ್ರ

ವಲ್ಲ ಬ್ರಿಟಿಶ ಸೇನೆಗೆ ಹಿಂದೆಂದೂ ದೊರೆಯದ ಪೆಟ್ಟು ಬಿದ್ದಿತು. ಮಲಯಾದಲ್ಲಿದ್ದ ಹಿಂದೀ, ಆಸ್ಟ್ರೇಲಿಯಾ ಸೈನಿಕರನ್ನು ಅವರ ಪಾಲಿಗೆ ಬಿಟ್ಟು ಬ್ರಿಟಶರು ಓಡಿಹೋದರು. ಅನೇಕ ಕಡೆಗಳಲ್ಲಿ ಬ್ರಿಟಿಶರು ಶರಣು ಹೋದರು. ಮಲಯಾವನ್ನು ರಕ್ಷಿಸಲು ಬ್ರಿಟಿಶರು ತೀರ ಅಸಮರ್ಥ ರಾದರು. ಬ್ರಿಟಿಶರ "ಅಭೇದ್ಯ ಕೋಟೆ" ಯೆಂದು ಕರೆಯಲ್ಪಡುತ್ತಿದ್ದ ಸಿಂಗಾಪುರವೂ ಬಿದ್ದುಹೋಯಿತು. ಕಳ್ಳರಂತೆ ಬ್ರಿಟಶರು ಪಲಾಯನ ಮಾಡಿದರು. ಪೆನಾಂಗ ನಗರದಿಂದ ಬ್ರಿಟಿಶರು ಓಡಿಹೋದ ಕಥೆ ಬಹಳ ಸೊಗಸಾಗಿದೆ. ರಾತ್ರಿ ವೈಮಾನಿಕ ದಾಳಿಯ ಎಚ್ಚರಿಕೆಯನ್ನು ಕೊಡಲಾ ಯಿತಂತೆ. ದಾಳಿಯಾಗಬಹುದೆಂದು ಅಂಜಿದ ಜನರೆಲ್ಲ ಕದವಿಕ್ಕಿಕೊಂಡು ಅಡಗಿಕೊಂಡರು. ಮುಂಜಾನೆ ನೋಡಿದಾಗ ನಗರದಲ್ಲಿ ಬ್ರಿಟಿಶ್ ಸೈನಿಕ ನೊಬ್ಬನೂ ಇರಲಿಲ್ಲ. ೧೯೪೨ ನೇ ಫೆಬ್ರುವರಿ ೧೬ ನೇ ತಾರೀಖಿನ ದಿನ ಸಿಂಗಾಪುರವು ಜಪಾನರ ವಶವಾಯಿತು. ಮತ್ತು ಮಲಯಾ ಸಂಪೂರ್ಣ ಬ್ರಿಟಿಶರ ಕೈಬಿಟ್ಟಿತು. ಹೆಚ್ಚುಕಡಿಮೆ ಮೂರೂವರೆ ವರುಷಗಳವರೆಗೆ ಮಲಯಾದಲ್ಲಿ ಜಪಾನರು ಒಡೆತನ ಸ್ಥಾಪಿಸಿದರು. ಯುದ್ಧದಲ್ಲಿ ಜಪಾ ನಕ್ಕೆ ಸೋಲುಂಟಾದುದರಿಂದ ಮತ್ತೆ ಬ್ರಿಟಿಶರು ಮಲಯಾವನ್ನು ಆಕ್ರ ಮಿಸಲು ತೊಡಗಿದರು. ಮಲಯಾ ರಣರಂಗವಾಗಲಿಲ್ಲ. ಜಪಾನರು ಸುವ್ಯವಸ್ಥೆಯಿಂದ ಅಧಿಕಾರ ಬಿಟ್ಟುಕೊಟ್ಟರು. ಹೀಗಿದ್ದರೂ ಲಾರ್ಡ ಮೌಂಟ ಬ್ಯಾಟನ್ನರು ಮಲಯಾಕ್ಕೆ ಪ್ರವೇಶಿಸಿದ ಕೂಡಲೇ ದೇಶದಲ್ಲಿ ಮಿಲಿಟರಿ ಆಡಳಿತೆಯನ್ನು ಸ್ಥಾಪಿಸಿದರು.

## ಮಲಯಾ ಯೂನಿಯನ್

ಮಲಯಾವನ್ನು ಪುನ ಆಕ್ರಮಿಸಿರುವ ಬ್ರಿಟಿಶರು ಈಗ ಅದರ ಆಡ ಳಿತೆಗಾಗಿ ಒಂದು "ಮಲಯಾ ಯೂನಿಯನ್" ಯೋಜನೆಯನ್ನು ತಯಾ ರಿಸಿರುವರು. ಆ ಯೋಜನೆಯ ವಿವರಗಳನ್ನೊಳಗೊಂಡ ಶ್ವೇತಪತ್ರವನ್ನು ಈಗಾಗಲೇ ಹೊರಡಿಸಲಾಗಿದೆ. ಮಲಯಾದ ೯ ಸಂಸ್ಥಾನಗಳು (ಸಂಯುಕ್ತ ಸಂಸ್ಥಾನಗಳು ಮತ್ತು ಸ್ವತಂತ್ರ ಸಂಸ್ಥಾನಗಳು) ಹಾಗೂ ಪೆನಾಂಗ ಮತ್ತು ಮಲಕ್ಕಾಗಳನ್ನೊಳಗೊಂಡ ಒಂದು ಯೂನಿಯನ ಸ್ಥಾಪಿಸುವುದು ಆ ಯೋಜನೆಯ ಮೊದಲನೇ ಭಾಗ. ಸಿಂಗಾಪು

ರದಲ್ಲಿ ಪ್ರತ್ಯೇಕ ಆಡಳಿತೆಯನ್ನು ಸ್ಥಾಪಿಸುವುದು ಯೋಜನೆಯ ಎರಡನೇ ಮುಖ್ಯಾಂಶ. ಮಲಯಾ ಯೂನಿಯನ ಮತ್ತು ಸಿಂಗಾಪುರಗಳಿಗೆ ಇಬ್ಬರು ಪ್ರತ್ಯೇಕ ಗವರ್ನರರು. ಎರಡು ಪ್ರತ್ಯೇಕ ಶಾಸನ ಸಭೆಗಳನ್ನು ರಚಿಸಲಾಗುವುದು. ಎಲ್ಲ ಮಲಯಾ ಸಂಸ್ಥಾನಗಳಲ್ಲೂ ಬ್ರಿಟಿಸಗ ಸಂಪೂರ್ಣ ಅಧಿಕಾರ. ಎಲ್ಲ ಸಂಸ್ಥಾಗಳಲ್ಲೂ ಶಾಸನಗಳನ್ನು ಅದು ಜಾರಿಗೆ ತರಲು ಶಕ್ಯ. ಆ ಆ ಸಂಸ್ಥಾನಗಳ ಸುಲ್ತಾನರು ಸಲಹೆ ಸಮಿತಿಗಳ ಅಧ್ಯಕ್ಷರು. ಧರ್ಮ, ನೀತಿಗಳ ಕಡೆ ಅವರು ಗಮನಕೊಡಲಿಕ್ಕಿಯಿಲ್ಲ. ಸುಲ್ತಾನರು ಕೇಂದ್ರ ಸಲಹೆ ಸಮಿತಿಯ ಸದಸ್ಯರಾಗತಕ್ಕದ್ದು. ಗವರ್ನರರು ಅವರ ಅಧ್ಯಕ್ಷರು. ಗವರ್ನರರು ತಮ್ಮಾಧೀನ ಒಂದು ಕಾರ್ಯಕಾರೀ ಸಮಿತಿಯನ್ನೂ ರಚಿಸುವರು. ಇಡೀ ಯೂನಿಯನ್ನದ ಮೇಲೆ ಈ ಕೇಂದ್ರ ಸರಕಾರಕ್ಕೆ ಅಧಿಕಾರವಿದೆ. ಯೂನಿಯನ್ನದಲ್ಲಿ ಸೇರಿಕೊಂಡ ಈ ೯ ಸಂಸ್ಥಾನಗಳಲ್ಲೂ ಸ್ಥಳಿಕ ಸರಕಾರಗಳಿಗೆ "ಸ್ಥಾನಿಕ ಸ್ವರಾಜ್ಯ" ಮಾತ್ರ.

## ಯೋಜನೆಗೆ ಜನರ ವಿರೋಧ

ಬ್ರಿಟಿಶರ ಈ ಮಲಯಾ ಯೂನಿಯನ ಯೋಜನೆ ಮಲಯಾ ಪ್ರಜೆಗಳ ವಿರೋಧಕ್ಕೆ ಪಾತ್ರವಾಗಿದೆ. ಮಾರ್ಚ ನಾಲ್ಕನೇ ತಾರೀಖಿನ ದಿನ ಕೌಲಾಲಂಪೂರ ನಗರದಲ್ಲಿ ಕೂಡಿದ ಮಲಯನ್ನರ ಕಾಂಗ್ರೆಸ ಮಹಾಧಿವೇಶನದಲ್ಲಿ ಆ ಯೋಜನೆಯನ್ನು ತಿರಸ್ಕರಿಸಲಾಯಿತು. ಕೆಲವು ಸಂಸ್ಥಾನಗಳ ಸುಲ್ತಾನರೂ ತಮ್ಮ ಅಸಮ್ಮತಿ ವ್ಯಕ್ತಪಡಿಸಿರುವರು. ಬ್ರಿಟಿಶರು ತಮ್ಮ ಮಿಲಿಟರಿ ಬಲದಿಂದ ಆ ಯೋಜನೆಗೆ ಸಹಿ ಹಾಕುವಂತೆ ಸುಲ್ತಾನರನ್ನು ಒತ್ತಾಯಗೊಳಿಸಿರುವರೆಂದೂ ಸುದ್ದಿ ಸೋರಿ ಬಂದಿದೆ. ಸುಲ್ತಾನರು ವಿರೋಧಿಸಿರುವುದು ಸಹಜವೇ. ಪ್ರಾಚೀನ ಕಾಲದಿಂದ ತಲೆ ಎತ್ತಿ ನಿಂತಿದ್ದ ಈ ಸಂಸ್ಥಾನಗಳ ಅಸ್ತಿತ್ವಕ್ಕೇ ಈಗ ಗಂಡಾಂತರ ಬಂದಿರುವುದು. ಬ್ರಿಟಿಶ ಗವರ್ನರರ ಅಧೀನ ಈ ಸುಲ್ತಾನರು ಕುಣಿಯಬೇಕಾಗಿದೆ. ಅಧಿಕಾರವಿಲ್ಲದ ಉಸ್ಸನ ಮೂರ್ತಿಗಳವರು. ಒಂದು ವೇಳೆ ಈ ಸಂಸ್ಥಾನಗಳು ಅಪ್ರಾಗತಿಕವೆಂದೇ ತಿಳಿಯೋಣ, ಹಾಗಿದ್ದರೆ ಬ್ರಿಟಿಶರು ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟುಕೊಡಬಹುದಾಗಿತ್ತು. ಬ್ರಿಟನ್

ಈ ರೀತಿ ಮಾಡದೆ ತಾನೇ ಅಧಿಕಾರವನ್ನು ಕಸಿದುಕೊಂದಿದೆ. ಮಲಯಾ ಸಂಪೂರ್ಣ ಬ್ರಿಟಿಶರ ವಸಾಹತು ರಾಜ್ಯವಾಗಿ ಪರಿಣಮಿಸಿದೆ. ಪ್ರಜಾ ಸತ್ತೆ, ಸ್ವಾತಂತ್ರ್ಯ ತತ್ವಗಳಿಗೆ ಇದು ತೀರ ವ್ಯತಿರಿಕ್ತ. ಪ್ರಾಯಶಃ ಮಲಯಾವನ್ನು ದೊಡ್ಡ ಕೋಟೆಯಾಗಿ ಕಟ್ಟಲು ಬ್ರಿಟಿಶರು ಈ ರೀತಿ ಮಾಡಿರಲೂ ಸಾಕು. ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಲು ಅವರ ಇದೊಂದು ಯತ್ನವೆಂದರೂ ಸರಿಯೆ.

---

## ಮಲಯಾ ಹಿಂದೀಯರು

---

ಮಲಯಾದಲ್ಲಿ ಏಳೂವರೆ ಲಕ್ಷ ಹಿಂದೀ ಜನರಿದ್ದಾರೆ. ಇದು ಯುದ್ಧಪೂರ್ವದ ಸಂಖ್ಯೆ. ಅವರಲ್ಲಿ ಎರಡು ಮೂರನೇ ಅಂಶದಷ್ಟು ಜನ ಮಲಯಾದಲ್ಲೇ ಹುಟ್ಟಿ ಬೆಳೆದವರು. ಮಲಯಾಕ್ಕೆ ವಲಸೆ ತೆರಳ ಕೂಡದೆಂದು ೧೯೩೮ ರಲ್ಲಿ ಹಿಂದೀಯರ ಮೇಲೆ ನಿರ್ಬಂಧಕಾಜ್ಞೆಯನ್ನು ಹೇರಲಾಯಿತು. ಅಂದಿನಿಂದ ಮಲಯಾಕ್ಕೆ ತೆರಳಿದವರು ಅತ್ಯಲ್ಪ. ಬ್ರಹ್ಮದೇಶ, ದಕ್ಷಿಣ ಆಫ್ರಿಕ ಮುಂತಾದ ಕಡೆಗಳಲ್ಲಿರುವ ಭಾರತೀಯ ರಂತೆ ಮಲಯಾದಲ್ಲಿರುವ ಹಿಂದೀಯರ ಸ್ಥಿತಿಯಾದರೂ ಸುಖಕರವಿಲ್ಲ.

### ಕೂಲಿಕಾರರು

ಯುದ್ಧಪೂರ್ವದಲ್ಲಿ ಕೂಡಾ ಹಿಂದೀಯರ ಸ್ಥಿತಿಗತಿಯು ಅಷ್ಟು ತೃಪ್ತಿಕರವಿರಲಿಲ್ಲ. ಕೆಲವು ಶ್ರೀಮಂತ ಚೆಟ್ಟಿಯಾರರಿದ್ದಿರಬಹುದು. ಕೆಲವು ಹಿಂದೀ ಬ್ಯಾಂಕುಗಳು ಶಾಖೆಗಳನ್ನು ತೆರೆದಿದ್ದುವು. ಹಲವರು ರಬ್ಬರ ತೋಟಗಳನ್ನು ಕೊಂಡುಕೊಂಡಿದ್ದರು. ಪ್ರತಿಭಾಸಂಪನ್ನರಾದವರು ವಕೀಲಿ ವೃತ್ತಿಯನ್ನು ಹೂಡಿದ್ದರು. ಸರಕಾರಿ ನೌಕರಿಗಳಲ್ಲಿ ನುಸುಳಿಕೊಂಡವರೂ ಉಂಟು. ಆದರೆ ಹಿಂದೀಯರಲ್ಲಿ ಬಹುಸಂಖ್ಯಾಕರು ಬಡ ಕೂಲಿಗಳು. ನೂರಕ್ಕೆ ೭೦ ಮಂದಿ ಶಾರೀರಿಕ ಶ್ರಮದಿಂದ ಉದರನಿರ್ವಾಹವನ್ನು

ನಡೆಸುತ್ತಿದ್ದರು. ಹಿಂದೀ ಕೂಲಿಕಾರರ ಸಂಖ್ಯೆ ಐದೂವರೆ ಲಕ್ಷ. ಅವರಲ್ಲಿ ಮೂರು ಮುಕ್ಕಾಲು ಲಕ್ಷ ಜನ ತೋಟಗಳಲ್ಲೇ ಕೆಲಸ ಮಾಡುತ್ತಿದ್ದರು. ಜಪಾನವು ಮಲಯಾವನ್ನು ಆಕ್ರಮಿಸಿದ ಮೇಲೆ ಹಿಂದೀಯರು ಬಹಳ ಕಷ್ಟವನ್ನನುಭವಿಸಬೇಕಾಗಿ ಬಂತು. ಬಾಂಗಕಾಕ-ಮೌಲಮೇನ ರೇಲ್ವೆ ರಸ್ತೆ ಕಡಿಯಲು ೮೬ ಸಾವಿರ ಹಿಂದೀ ಕೂಲಿಕಾರರನ್ನು ಸಂಗ್ರಹಿಸಿದರು. ಅವರಲ್ಲಿ ಈಗ ಕೇವಲ ೨೦ ಸಾವಿರ ಜನರ ಪತ್ತೆ ದೊರೆತಿದೆ. ಉಳಿದವರ ಗತಿಯೇನಾಯಿತೋ? ಹಸಿವೆ, ರೋಗರುಜೆ, ರಕ್ತಭೇದಿ ಮುಂತಾದ ರೋಗಗಳಿಗೆ ಅವರು ಬಲಿಯಾದರೆಂದು ವರದಿಗಳು ಬಂದಿವೆ. ಅಳಿದುಳಿದವರೂ ಬದುಕುವ ಲಕ್ಷಣವಿಲ್ಲ. ಪೌಷ್ಟಿಕ ಆಹಾರದ ಕೊರತೆ, ರೋಗರುಜೆಗಳಿಂದ ಅವರಿನ್ನು ಬಳಲುತ್ತಿರುವರು.

## ನಿರಾಶ್ರಿತರು

ಜಪಾನರು ದಂಡೆತ್ತಿ ಬಂದಮೇಲೆ ಹಿಂದೀಯರು ಬಹಳ ದುಃಖದುಮ್ಮಾನಗಳಿಗೊಳಗಾದರು. ಬಹ್ವಂಶೀಯ ಹಿಂದೀಯರು ದಿನಗೂಲಿಗಳಾಗಿದ್ದುದರಿಂದ ಅವರಿಗೆ ಕೆಲಸ ದೊರೆಯಲಿಲ್ಲ. ಜೀವನವೇ ದುಸ್ಸಾಧ್ಯವಾಗಿ ಪರಿಣಮಿಸಿತು. ಅನೇಕರು ಕಾಲ್ನಡಿಗೆಯಲ್ಲೇ ಬ್ರಹ್ಮದೇಶದ ಮೂಲಕ ಹಿಂದುಸ್ತಾನಕ್ಕೆ ಹೊರಟರು. ಕೆಲವು ಶ್ರೀಮಂತರು ತಮ್ಮ ಬದುಕು ಭಾಗ್ಯಗಳನ್ನು ತ್ಯಜಿಸಿ ಪ್ರಾಣ ಕೈಯಲ್ಲಿ ಹಿಡಿದುಕೊಂಡು ಓಡಿ ಬಂದಿರುವರುವರು. ಅಂಥ ನಿರಾಶ್ರಿತರ ಸಂಖ್ಯೆ ೫ ಸಾವಿರವಿದೆ ಹಿಂದುಸ್ಥಾನದಲ್ಲಿ. ಅವರ ಆಸ್ತಿಪಾಸ್ತಿಗಳ ಕುಟುಂಬಗಳ ಗತಿಯೇನಾಗಿದೆಯೋ ಮಲಯಾದಲ್ಲಿ? ಬ್ರಿಟಿಶರು ಮಲಯಾವನ್ನು ಪುನರಾಕ್ರಮಿಸಿದ ಮೇಲೂ ಮಲಯಾಕ್ಕೆ ಹಿಂತಿರಳಲು ಅವರಿಗೆ ಅಶಕ್ಯವಾಗಿದೆ. ಹಿಂದುಸ್ತಾನ ಸರಕಾರವು ಯಾವ ಸೌಕರ್ಯವನ್ನೂ ಒದಗಿಸಿಲ್ಲ. ಜರ್ಮನರು ಹಾಲಂಡ, ಬೆಲ್ಜಿಯಂ, ಫ್ರಾನ್ಸ, ಗ್ರೀಸ್‌ಗಳ ಮೇಲೆ ನುಗ್ಗಿದಾಗ ಮನೆಮಾರುಗಳನ್ನು ಬಿಟ್ಟು ಅನೇಕರು ಓಡಿದರು. ಅವರಿಗೆ ಅಮೇರಿಕ, ಆಸ್ಟ್ರೇಲಿಯ, ಹಿಂದುಸ್ತಾನಗಳಲ್ಲಿ ಆಶ್ರಯ ಕೊಡಲಾಯಿತು. ಈ ನಿರಾಶ್ರಿತರಿಗೆ ಸಹಾಯ ನೀಡಲು ಮಿತ್ರರ ಪರಿಹಾರ

ಮತ್ತು ಪುನರ್ನಿಯೋಜನೆ ಸಂಸ್ಥೆ ಅಹೋರಾತ್ರಿ ದುಡಿದಿದೆ. ಹಿಂದುಸ್ತಾನವೂ ಕೋಟಿಗಟ್ಟಲೆ ಹಣ ಕೊಟ್ಟಿದೆ ಈ ಸಂಸ್ಥೆಗೆ. ಆದರೆ, ಬ್ರಹ್ಮದೇಶ, ಮಲಯಾ, ಸಿಂಗಾಪುರಗಳಿಂದ ದಿಕ್ಕುಗಾಣದೆ ಓಡಿಬಂದ, ಈ ಬರಿಗೈ ಹಿಂದೀಯರ ಕರುಣ ಕಥೆಗಳನ್ನು ಕೇಳುವವರಿಲ್ಲ.

## ಆಝಾದ ಹಿಂದ ಫೌಜ

ಬ್ರಿಟಿಶರು ಮಲಯಾದಿಂದ ಓಡಿಹೋದ ಮೇಲೆ ಮಲಯಾ, ಅರಸನಿಲ್ಲದ ರಾಜ್ಯವಾಯಿತು. ಕೊಲೆ, ಸುಲಿಗೆ, ದರೋಡೆಗಳು ಆರಂಭವಾದುವು. ಜಪಾನರೂ ಜಯದ ಮದದಿಂದ ಮನಬಂದಂತೆ ವರ್ತಿಸುತ್ತಿದ್ದರು. ಸ್ತ್ರೀಯರ ಮಾನ, ಜೀವ, ಜೀವಿತಗಳಿಗೆ ಗಂಡಾಂತರ. ಇಂಥ ಸಂಕಟ ಕಾಲದಲ್ಲಿ ಹಿಂದೀಯರ ರಕ್ಷಣೆಗಾಗಿ ಟೊಂಕಕಟ್ಟಿದವರು ರಾಘವನ್. ಹಿಂದೀಯರನ್ನು ಸಂಘಟಿಸಲು ಅವರು ತೊಡಗಿದರು ಗೋಹೋ, ನೀಲಕಂಠ ಅಯ್ಯರ್, ಸ್ವಾಮಿ ಸತ್ಯಾನಂದ, ಕ್ಯಾ. ಅಕ್ರಂ ಮುಂತಾದವರೂ ಅವರೊಡನೆ ಸಹಕರಿಸಿದರು. ಹಿಂದೀಯರ ಶಕ್ತಿ ದಿನದಿಂದ ದಿನಕ್ಕೆ ಬೆಳೆದು ಬಂದಿತು. ಮತ್ತು ಜಪಾನರೂ ಅವರ ಸಹಕಾರವನ್ನಪೇಕ್ಷಿಸಿದರು. ಆ ದೃಷ್ಟಿಯಿಂದಲೇ ೧೯೪೨ ನೇ ಮಾರ್ಚ ತಿಂಗಳಲ್ಲಿ ಟೋಕಿಯೋದಲ್ಲಿ ಹಿಂದೀಯರ ಸಭೆಯನ್ನು ಕೂಡಿಸಲಾಯಿತು. ದುರದೃಷ್ಟದಿಂದ ಆ ಸಭೆಗೆ ತೆರಳಿದ ನೀಲಕಂಠ ಅಯ್ಯರ, ಸ್ವಾಮಿ ಸತ್ಯಾನಂದ ಮೊದಲಾದವರು ವಿಮಾನ ಅಪಘಾತದಿಂದ ಮರಣಹೊಂದಿದರು. ಹಿಂದೀ ರಾಷ್ಟ್ರೀಯ ಚಳವಳಿಯನ್ನು ಆರಂಭಿಸಲು ಇದಕ್ಕಿಂತಲೂ ಹೆಚ್ಚು ಪ್ರಾತಿನಿಧಿಕ ಸಭೆ ಕರೆಯಬೇಕೆಂದು ಗೊತ್ತಾದುದು ಟೋಕಿಯೋ ಪರಿಷತ್ತಿನಲ್ಲಿ. ಟೋಕಿಯೋದಲ್ಲಿ ನಿರ್ಧರಿಸಿದಂತೆ ಬಾಂಗಕಾಕ್‌ದಲ್ಲಿ ಕೂಡಿದ ಹಿಂದೀಯರ ಪರಿಷತ್ತಿನಲ್ಲಿ ಹಿಂದೀ ಸ್ವಾತಂತ್ರ್ಯ ಲೀಗನ್ನು ಸ್ಥಾಪಿಸಿದರು. ರಾಸ ಬಿಹಾರಿ ಬೋಸರು ಅದರ ಅಧ್ಯಕ್ಷರು. ಆಗ್ನೇಯ ಏಶಿಯದಲ್ಲೆಲ್ಲ ಅದರ ಶಾಖೆಗಳನ್ನು ತೆರೆಯಲು ಶ್ರೀ. ರಾಘವನ್ನರಿಗೆ ಅಧಿಕಾರ. ಹಿಂದೀ ರಾಷ್ಟ್ರೀಯ ಸೇನೆಯನ್ನು ಸಂಘಟಿಸಲು ಕ್ಯಾ. ಮೋಹನಸಿಂಹರಿಗೆ ಕೇಳಿಕೊಂಡರು. ಮಧ್ಯೆ ಈ ರಾಷ್ಟ್ರೀಯ ಸೇನೆ

ಯನ್ನು ವಿಸರ್ಜಿಸಿದರೂ ಬೋಸರು ಬಂದ ಮೇಲೆ ಅದರ ಪುನರುಜ್ಜೀವನವಾಯಿತು. ಆಝಾದ ಹಿಂದ ಫೌಜಿನ ರಚನೆಯಿಂದ ಮಲಯಾದಲ್ಲಿರುವ ಹಿಂದೀಯರ ಕಷ್ಟ ಪರಂಪರೆಗಳು ನೀಗಿದುವು.

## ಮತ್ತೆ ಬ್ರಿಟಿಶರು

ಈಗ ಮತ್ತೆ ಬ್ರಿಟಿಶರು ಮಲಯಾವನ್ನು ಆಕ್ರಮಿಸಿರುವರು. ಮೌಂಟಬ್ಯಾಟನ್ನರು ಮಿಲಿಟರಿ ಸರಕಾರವನ್ನೇ ಸ್ಥಾಪಿಸಿದ್ದಾರೆ. ಬ್ರಿಟಿಶರ ಪುನರಾಗಮನದಿಂದ ಮತ್ತೆ ಅನೇಕ ಸಮಸ್ಯೆಗಳೆದ್ದಿವೆ ಮತ್ತು ಹಿಂದೀಯರ ಕಷ್ಟಪರಂಪರೆಗಳು ಹೆಚ್ಚಾಗಿವೆ. ಅನೇಕ ಹಿಂದೀಯರ ಕೆಲಸಗಳು ಹೋದುವು. ಜಪಾನಿ ನಾಣ್ಯದ ಬೆಲೆಯನ್ನು ಇಳಿಸಿರುವುದರಿಂದ ಕೂಲಿಕಾರರಲ್ಲಿದ್ದ ಅಲ್ಪಸ್ವಲ್ಪ ಹಣವೂ ಜೀವನಕ್ಕೆ ಸಾಕಾಗದು. ಆಹಾರ ವಸ್ತುಗಳ ಬೆಲೆ ಒಂದಕ್ಕೆ ಎರಡು. ಬಟ್ಟೆಯ ಸ್ಥಿತಿಯನ್ನಂತೂ ಹೇಳುವ ಹಾಗಿಲ್ಲ. ಸ್ತ್ರೀಯರು ತಮ್ಮ ಮಾನ ಮುಚ್ಚಿಕೊಳ್ಳಲು ಗೋಣಿ ಚೀಲಗಳನ್ನು ಸುತ್ತಿಕೊಳ್ಳುತ್ತಿದ್ದಾರೆ. ಹಿಂದೀಯರು ತಮ್ಮ ಮಾತೃಭೂಮಿಗೆ ಹಿಂತೆರಳಲೂ ಬಯಸಿರುವರು. ಮಲಯಾದಲ್ಲಿ ಜೀವನವೇ ಕಷ್ಟ. ಪ್ರಯಾಣ ಬೆಳೆಸಲು ಹಡಗಗಳ ಸೌಕರ್ಯವೇ ಇಲ್ಲ. ಮಲಯಾದಲ್ಲಿರುವ ಹಿಂದೀಯರ ಹಿತವನ್ನು ರಕ್ಷಿಸಲು ಹಿಂದುಸ್ತಾನ ಸರಕಾರ ಶ್ರೀ. ಎಸ್ ಕೆ. ಚೆಟ್ಟೂರರನ್ನು ನೇಮಿಸಿ ಕಳಿಸಿತು. ಹಿಂದೀಯರ ಪರಿಹಾರಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಯಿತು. ಒಂದು ಲಕ್ಷ ರೂ. ಗಳು ಸಾಕೇ? ಹಣಕ್ಕಿಂತಲೂ ಅವರಿಗೆ ಅಗ್ಗದರದಲ್ಲಿ ಬಟ್ಟೆಬರೆ, ಆಹಾರ ವಸ್ತುಗಳು, ವೈದ್ಯಕೀಯ ಸೌಕರ್ಯಗಳು ಅಗತ್ಯ.

## ಹಿಂದೀಯರ ಬಂಧನ

ಮಲಯ ಹಿಂದಿಯರ ಪ್ರಶ್ನೆಗೆ ಇನ್ನೊಂದು ಮುಖವಿದೆ. ಬ್ರಿಟಿಶರು ಅನೇಕ ರಾಷ್ಟ್ರಾಭಿಮಾನಿಗಳನ್ನು ಬಂಧಿಸಿದರು. ಹಿಂದೀ ಸ್ವಾತಂತ್ರ್ಯ ಸಂಘ, ಆಝಾದಹಿಂದಫೌಜ ಮೊದಲಾದವುಗಳಲ್ಲಿ ಸೇರಿಕೊಂಡವರನ್ನು ಸಹಾಯನೀಡಿದವರನ್ನು ಹಿಡಿದು ಸೆರೆಮನೆಗಳಿಗೆ ನೂಕಿದರು.

ಮಲಯಾದ ಶಾಸನಗಳು ಹಿಂದುಸ್ಥಾನಕ್ಕಿಂತಲೂ ಕಠೋರವಿವೆ. ಸಣ್ಣ ತಪ್ಪಿಗೆ ಮರಣ. ಸ್ವರಕ್ಷಣೆಯನ್ನು ಮಾಡಿಕೊಳ್ಳಲು ಕೂಡಾ ಅವಕಾಶ ವಿಲ್ಲ ಹಿಂದೀಯರಿಗೆ. ಹಿಂದುಸ್ಥಾನದ ರಾಷ್ಟ್ರೀಯ ಮುಖಂಡರು ಮತ್ತು ಪತ್ರಿಕೆಗಳು ಈ ಪ್ರಶ್ನೆಯ ಕಡೆ ಜನರ ಲಕ್ಷ್ಯವನ್ನು ಸೆಳೆದು ಜನಾಭಿ ಪ್ರಾಯವನ್ನು ಸಂಘಟಿಸಿದುದರಿಂದ ಬ್ರಿಟಿಶರು ಸ್ವಲ್ಪ ಮೆತ್ತಗಾದರು. ಬಂಧಿಸಲ್ಪಟ್ಟಿದ್ದ ಶ್ರೀ. ರಾಘವನ್, ಗೋಹೋ ಮೊದಲಾದ ಹಿಂದೀ ಮುಖಂಡರನ್ನು ಬಿಡುಗಡೆ ಮಾಡಿದರು. ಪಂಡಿತ ನೆಹರುರವರಿಗೆ ಮಲಯಾ ಪ್ರವಾಸವನ್ನು ಕೈಕೊಳ್ಳಲು ಹಿಂದುಸ್ತಾನ ಸರಕಾರ ಅನು ಮತಿಯನ್ನು ಕೊಟ್ಟಿತು.

---

## ( ಭಾಗ ೬ )

# ಇಂಡೋ-ಚೀನ

---

## ಪ್ರಜಾರಾಜ್ಯ

" ಮಾನವರೆಲ್ಲರೂ ಸರಿಸಮಾನರು. ಸ್ವಾತಂತ್ರ್ಯ ಅವರ ಜನ್ಮ ಸಿದ್ಧ ಹಕ್ಕು. ಫ್ರೆಂಚರು ಶಾಲೆಗಳಿಗಿಂತಲೂ ಹೆಚ್ಚು ಸೆರೆಮನೆಗಳನ್ನೇ ಕಟ್ಟಿದರು"

ಇದು ಇಂಡೋಚೀನದ ಪ್ರಜಾರಾಜ್ಯವು ಹೊರಡಿಸಿದ ಘೋಷಣೆ ೮೦ ವರುಗಳ ಫ್ರೆಂಚ, ೫ ವರುಷಗಳ ಜಪಾನಿ ಸಂಕೋಲೆಗಳನ್ನು ಪ್ರಜೆಗಳು ಈಗ ಮುರಿದು ಹಾಕಿರುವರು. ದೀರ್ಘಕಾಲದ ಅವರ ಆಶೆ ಈಗ ಹೂ ಬಿಟ್ಟಿದೆ. ದೇಶದಲ್ಲಿ ' ವಿಯೆಟ ಮಿನಾ ' ಪ್ರಜಾರಾಜ್ಯವು ಸ್ಥಾಪಿಸಲ್ಪಟ್ಟಿದೆ. ಇಂಡೋನೇಶಿಯದಂತೆ ಇಂಡೋಚೀನವೂ ಸ್ವತಂತ್ರ ಇಂಡೋನೇಶಿಯಕ್ಕಿಂತಲೂ ಸ್ವಾತಂತ್ರ್ಯ ಪಥದಲ್ಲಿ ಒಂದು ಹೆಜ್ಜೆ

ಮುಂದು. ಆಗ್ನೇಯ ಏಶಿಯದಲ್ಲಿ ಮೊದಲು ಸ್ವಾತಂತ್ರ್ಯವನ್ನು ಘೋಷಿಸಿದ ದೇಶ ಇಂಡೋಚೀನ. ಆದಕ್ಕೆ ಫ್ರೆಂಚರಿಂದ ಹಾಗೂ ಮಿತ್ರರಿಂದ ಮತ್ತೆ ಗಂಡಾಂತರ ಬಂದಾಗ ಮೊದಲು ಪ್ರತಿಭಟಿಸಿದವರೂ ಅವರೇ.

## ೮೦ ವರುಷದ ಮಾತು

೮೦ ವರುಷಗಳ ಹಿಂದೆ ಇಂಡೋಚೀನವನ್ನು ಫ್ರೆಂಚರು ಆಕ್ರಮಿಸಿದರು. ಅಡ್ಮಿರಲ್ ಬೊನಾರ್ಡ್ನ ನೌಕಾಪಡೆ ತಂದು ಕರಾವಳಿ ನಗರಗಳ ಮೇಲೆ ಗುಂಡುಗಳ ಮಳೆಗರೆದ. ದೇಶಾಭಿಮಾನಿಗಳು ಪ್ರತಿಭಟಿಸಿದರು. ಹಡಗ ಬಲವಿಲ್ಲದ ತು-ದುಕ (Tu-Duc) ದೊರೆ ಶರಣಾಗತನಾದ, ದುಕ್‌ನ ಕಾಲದಿಂದ ದುಃಖ ಬಂತು ಜನರಿಗೆ. ಆದರೆ ಪ್ರಜೆಗಳು ಹತಾಶರಾಗದೆ " ಯುದ್ಧ " ಮುಂದುವರಿಸಿದರು. ಗುಡ್ಡಗಾಡುಗಳಲ್ಲಿ ವಾಸಿಸುವ ಈ ಇಂಡೋಚೀನದ ಜನ ಎಲ್ಲ ಧೀರರು. ದೃಢಕಾಯುವುಳ್ಳವರು. ದೃಢ ಮನೋಬಲವೂ ಉಂಟು. ಹೀಗಾಗಿ ಆಗಾಗ ಫ್ರೆಂಚ ಆಳಿಕೆಯ ವಿರುದ್ಧ ದಂಗೆಯೆದ್ದರು. ಫ್ರೆಂಚರು ಸಂಘಟಿಸಿದ ಇಂಡೋಚೀನಿ ' ಸಿಪಾಯಿಗಳೂ ' ಬಂಡಾಯ ಹೂಡಿದುದುಂಟು. ಹಿಂದುಸ್ತಾನದ " ಸಿಪಾಯಿ ದಂಗೆ '' ಯಲ್ಲಿ ಕೆಲವು ರಾಜರು ಕೂಡಿಕೊಂಡಂತೆ ಇಂಡೋಚೀನದ ತುಂಡರಸರೂ ಸೇರಿಕೊಂಡರು. ಅಂಥ ಮೂವರು ಅರಸರನ್ನು ಫ್ರೆಂಚರು ವಿದೇಶಗಳಿಗೆ ಗಡೀಪಾರು ಮಾಡಿದರು. ಇಂಡೋಚೀನದ ಇತಿಹಾಸದಲ್ಲಿ ಇಂಥ ಘಟನೆಗಳು ಹಲವು.

## ದಂಗೆ

೧೯೩೦ ರಲ್ಲಿ ನಡೆದ ಸೈನಿಕರ ದಂಗೆ ಬಹಳ ದೊಡ್ಡದು. ಯೆನ್ ಸಮುದ್ರದ ಕರಾವಳಿಯಲ್ಲಿದ್ದ ಇಂಡೋಚೀನದ ನಾವಿಕರು ಬಂಡಾಯ ಹೂಡಿದರು. ಫ್ರೆಂಚ ಅಧಿಕಾರಿಗಳಿಗೂ ಅವರು ಗತಿಕಾಣಿಸಿದರು. ಅದರ ಬೇಗೆ ಸೈನ್ಯ ಶಿಬಿರಗಳಿಗೂ ಒಳನಾಡಿಗೂ ವ್ಯಾಪಿಸಿತು. ಹಳ್ಳಿಹಳ್ಳಿಗಳೇ ಎದ್ದುವು ಫ್ರೆಂಚರ ವಿರುದ್ಧ. ಟಾಂಕಿನ ಹಳ್ಳಿಯನ್ನು ನಾಶಮಾಡಲು ಫ್ರೆಂಚರು ವಿಮಾನಗಳನ್ನೇ ಉಪಯೋಗಿಸಿದರು. ಆ ಹಳ್ಳಿ ಸಂಪೂರ್ಣ

ಸುಟ್ಟು ಹೋಯಿತು. ದಂಗೆಯೆಬ್ಬಿಸಿದ ನಾವಿಕರನ್ನೂ ಸೈನಿಕರನ್ನೂ ಗಲ್ಲಿಗೇರಿಸಲಾಯಿತು. ಮತಪ್ರದರ್ಶನ ಮಾಡಿದ ಸ್ತ್ರೀ ಪುರುಷರು ' ಮೆಶಿನ ಗನ್ " ಗಳಿಗೆ ತುತ್ತಾದರು. ಅಸಂಖ್ಯ ತರುಣರು ಸೆರೆಮನೆ ಕಂಡರು. ದೇಶದಲ್ಲಿ ರಕುತದ ಹೊಳೆಯೇ ಹರಿಯಿತು.

೧೯೪೦ ರಲ್ಲಿ ಪುನಃ ದೊಡ್ಡ ಪ್ರಮಾಣದ ಅಂದೋಲನ ನಡೆಯಿತು. ಟಾಂಕಿನ ಪ್ರಾಂತದ ಬಾಕದಲ್ಲಿ ಜನ ಬಂಡಾಯ ಹೂಡಿದರು. ಅದರ ಗಾಳಿ ಸಾಯಿಗಾಂವ ಮುಖ್ಯನಗರದ ವರೆಗೂ ಬೀಸದೇ ಇರಲಿಲ್ಲ. ಈ ಸಲವೂ ಫ್ರೆಂಚರು ವಿಮಾನ, ತೋಫುಗಳಿಗೇ ಮೊರೆ ಹೊಕ್ಕರು. ೧೯೪೦ ನೇ ವರುಷವೊಂದರಲ್ಲೇ ಒಂದು ಸಾವಿರ ರಾಜಕೀಯ ಕೈದಿಗಳು ಜೇಲುಗಳಲ್ಲಿ ಸಾವಿಗೆ ತುತ್ತಾದರು.

## ಜಪಾನರಿಗೆ ಒಪ್ಪಿಸಿದರು

ಫ್ರಾನ್ಸಿಗೆ ವಿಪತ್ತು ಬಂದಾಗ ಸಾಮ್ರಾಜ್ಯದ ಮೇಲಿನ ಅವರ ಹಿಡಿತ ಸಡಿಲಾಯಿತು. ಜರ್ಮನಿಗೆ ಫ್ರಾನ್ಸ ಶರಣು ಹೋದ ಮೇಲೆ (ಜೂನ ೧೯೪೦) ಫ್ರೆಂಚರ ವಸಾಹತುಗಳೆಲ್ಲ ದಿಕ್ಕಿಲ್ಲದವುಗಳಾದವು. ನಂದನ ಬದಕು ನರಿಯಾಯಿತೆಂದು ಹೋಗುವಹಾಗೆ. ಸಾಮ್ರಾಜ್ಯ ಪಿಪಾಸೆ ಹಿಡಿದಿದ್ದ ಜಪಾನಿಗೆ ಇದೇ ಚಿನ್ನಂದಥಾ ಸಂದರ್ಭ. ಫ್ರಾನ್ಸದ ಈ ಬಂಗಾರ ಭೂಮಿಯನ್ನು ಕಂಡು ಅದರ ಬಾಯಲ್ಲಿ ನೀರೂರಿತು. ಫ್ರೆಂಚ ವಾಯಿಸರಾಯರಾಗಿದ್ದ ಆಡ್ಮಿರಲ್ ಡಿಕಾಕ್ಸರನ್ನು ಬೆದರಿಸಿ ೧೯೪೦ ನೇ ಸಪ್ಟಂಬರದಲ್ಲಿ ವಿಮಾನ ನಿಲ್ದಾಣಗಳನ್ನೂ ಬಂದರಗಳನ್ನೂ ವಶಪಡಿಸಿಕೊಂಡರು. ೧೯೪೧ನೇ ಸಪ್ಟಂಬರದೊಳಗೆ ಇಡೀ ದೇಶವೇ ಜಪಾನರ ಜೋಳಿಗೆಯೊಳಗೆ ಬಿದ್ದಿತು. ಫ್ರೆಂಚ ವಾಯಿಸರಾಯರು ಒಪ್ಪಂದ ಮಾಡಿಕೊಂಡು ಇಂಡೋಚೀನವನ್ನು ಜಪಾನರಿಗೆ ಬಿಟ್ಟುಕೊಟ್ಟರು. " ಪರಮವೈರಿ " ಗಳಾದ " ಸಾಮ್ರಾಜ್ಯವಾದಿ " ಜಪಾನರಿಗೆ ದೇಶವನ್ನು ಒಪ್ಪಿಸಿದರು ಹೊರತು ಜನರಿಗೆ ಸ್ವಾತಂತ್ರ್ಯ ಕೊಡಲಿಲ್ಲ. ಯುದ್ಧದಲ್ಲಿ ಜಪಾನ ಮಣಿದರೆ ಇಂಡೋಚೀನವನ್ನು ದೊರಕಿಸಿಕೊಳ್ಳಬ

ಹುದು, ದೇಶಪ್ರೇಮಿಗಳಿಗೆ ಒಪ್ಪಿಸಿದರೆ "ಗತಂಗತ" ಎಂದು ಫ್ರೆಂಚರು ಊಹಿಸಿದರೋ ಏನೋ! ಆದರೆ ತಾನೊಂದು ನೆನೆದರೆ ದೈವ ಬೇರೊಂದು ನೆನಸಿತು!

## ಜಪಾನರ ವಿರುದ್ಧ ಹೋರಾಟ

ದೇಶವು ಜಪಾನರ ಅಧಿಕಾರ ಪ್ರಭಾವಕ್ಕೊಳಗಾದ ಕೂಡಲೇ ರಾಷ್ಟ್ರಾಭಿಮಾನಿಗಳು ಕೆರಳಿದರು. ಫ್ರೆಂಚರ ಬದಲು ಈಗ ಜಪಾನಿ ನೊಗ ಬಂದಿತಲ್ಲ! ಒಂದು ಪಾಶ್ಚಾತ್ಯರದು; ಇನ್ನೊಂದು ಪೌರ್ವಾತ್ಯ ಸಾಮ್ರಾಜ್ಯವಾದಿಗಳದು ! ಅಷ್ಟೆ. ಫ್ರೆಂಚರು ತೊಡಿಸಿದ್ದ ಕಬ್ಬಿಣದ ಕಡಗಗಳು ದೈವೇಚ್ಛೆಯಿಂದ ಮುರಿದು ಹೋದರೂ ಜಪಾನರ ಹೊಸ "ಬೇಡಿ" ಬಂತಲ್ಲ! ಇನ್ನು ಇವರ ಪದತಲದಲ್ಲಿ ಎಷ್ಟು ದೀರ್ಘಕಾಲ ನರಳ ಬೇಕೋ ! ಈ ಶೋಕದಿಂದ ಜನರನ್ನು ಪಾರುಮಾಡಲು ರಾಷ್ಟ್ರೀಯ ಮುಖಂಡರು ನಿಶ್ಚಯಿಸಿದರು. ಹೋಚಿ ಮಿನಾ, ಟ್ರಾನವಾನ್ ಮುಂತಾದ ಮುಖಂಡರು ತಲೆ ಮರೆಸಿಕೊಂಡು ಜಪಾನಿಗಳ ವಿರುದ್ಧ ದೇಶಪ್ರೇಮಿ ಗಳನ್ನು ಸಂಘಟಿಸತೊಡಗಿದರು. ಅವರ ಅವಿಶ್ರಾಂತ ಪರಿಶ್ರಮದಿಂದ ೧೯೪೦ ರಲ್ಲಿ ಟಾಂಕಿನ ಪ್ರಾಂತದಲ್ಲಿ ಬಂಡಾಯವೆದ್ದಿತು. ಅದೇ ವರುಷದ ನವಂಬರದಲ್ಲಿ ಕೊಚೀನ ಚೀನ ಪ್ರಾಂತದಲ್ಲೂ ಜನ ಕ್ರಾಂತಿಯೆದ್ದರು. ೧೯೪೨ ರಲ್ಲಿ ಅದಕ್ಕಿಂತಲೂ ಭೀಕರ ಗಲಭೆಗಳಾದುವು. ಕೊನೆಯ ಹೋರಾಟ ಆರಂಭವಾದುದು ೧೯೪೪ ನೇ ಮಾರ್ಚ ತಿಂಗಳಿಂದ. ಅದು ಕೊನೆಗೆ ಜಯಲಕ್ಷ್ಮಿಯನ್ನು ಒಲಿಸಿತು.

## ಪ್ರಜಾರಾಜ್ಯ

ಜರ್ಮನಿಯು "ದೇಹಿ" ಎಂದ ಬಳಿಕ ಜಪಾನಿನ ಕಾಲುಗಳೂ ನಡುಗ ತೊಡಗಿದುವು. ಅಮೇರಿಕನ್ನರು ಪಿಲಿಪ್ಪಾಯಿನ್ಸ, ಸೈಪಣ, ಒಕಿನಾವಾ ಮುಂತಾದ ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿದುದರಿಂದ ಜಪಾನಿ ಮಾತೃಭೂಮಿಗೆ ಆಪತ್ತು ಬಂತು. ವಸಾಹತುಗಳನ್ನು ಕಾಪಾಡಿಕೊಳ್ಳು ವುದು ಕಠಿನವೆಂದು ಅವರಿಗೆ ಭಾಸವಾಯಿತು. ತಾವು ಆಕ್ರಮಿಸಿದ್ದ

ಪ್ರದೇಶದಲ್ಲಿ "ಸ್ವತಂತ್ರ" ಸರಕಾರಗಳನ್ನು ಸ್ಥಾಪಿಸಲು ಅವರು ಬಯಸಿದರು. ಇಂಡೋಚೀನದಲ್ಲೂ ೧೯೪೫ ನೇ ಮಾರ್ಚ ತಿಂಗಳಲ್ಲಿ ವಿಯೆಟ-ನಾಮ (Viet-Nam) ಸರಕಾರ ಪ್ರತಿಷ್ಠಿಸಲ್ಪಟ್ಟಿತು. ಈ ಸರಕಾರದಲ್ಲಿ ಸೇರಿಕೊಂಡವರು ಜಪಾನಿ ಸ್ನೇಹಿತರು. ಪ್ರತಿಗಾಮಿಗಳು. ಜಪಾನಿ ಕೈಗೊಂಬೆಗಳು. ಜನತಾ ಪ್ರತಿನಿಧಿಗಳಲ್ಲ. ಜನರಿಗೆ ಬೇಕಾಗಿದ್ದುದು ಪ್ರಜಾಸ್ವಾತಂತ್ರ್ಯ. ಪ್ರಜಾರಾಜ್ಯ. ಜನಾಂಗದ ಈ ಆಶೆಯನ್ನು ಈಡೇರಿಸಲು ಹೋಚಿ ಮಿನಾ ಮತ್ತು ಟ್ರಾನವಾನರು ಮಹಾಕ್ರಾಂತಿಯ ಕಹಳೆಯನ್ನೂದಿದರು. ಅವರ ಸಾಹಸ ವೃತ್ತಿಯಿಂದ ಸರಕಾರ ಅವರ ವಶವಾಯಿತು. ಅಧಿಕಾರವನ್ನು ಕಿತ್ತುಕೊಳ್ಳಲು ಅವರು ಸಮರ್ಥರಾದರು. ವಿಯೆಟ-ನಾಮ ಜರಿದು ಬಿತ್ತು. ಅದರ ಗೋರಿಯಲ್ಲಿ ವಿಯೆಟ-ಮಿನಾ ಪ್ರಜಾರಾಜ್ಯ ರೂಪಧರಿಸಿತು- ಜಪಾನವು ಅಮೇರಿಕನ್ನರಿಗೆ ಶರಣು ಹೋಗುವ ಸ್ಥಿತಿಯಲ್ಲಿದ್ದುದರಿಂದ ಜಪಾನರು ಈ ಪ್ರಜಾರಾಜ್ಯವನ್ನು ಕೆಣಕಲಿಲ್ಲ. ಇಂಡೋ-ಚೀನಿಯರೆಲ್ಲ 'ಈ ಪ್ರಜಾರಾಜ್ಯಕ್ಕೆ ಬೆಂಬಲ ಕೊಟ್ಟರು. ಅದರ ರಕ್ಷಣೆಗಾಗಿ ತನುಮನಧನಗಳನ್ನರ್ಪಿಸಲು ಸಿದ್ಧರಾದರು. ದೇಶದಲ್ಲಿ ಸ್ಫೂರ್ತಿಯ ಕಡಲುಕ್ಕಿತು.

## ಅರಸನ ರಾಜ್ಯತ್ಯಾಗ

ಪ್ರಜಾಸ್ವಾತಂತ್ರ್ಯಕ್ಕೆ ದೇಶೀ ಸಂಸ್ಥಾನಗಳ ಪ್ರಶ್ನೆಯೊಂದು ಬಲ್ತೊಡಕು. ಇಂಡೋಚೀನದಲ್ಲೂ ಫ್ರೆಂಚರು ನಾಲ್ಕು ಸಂಸ್ಥಾನಗಳನ್ನು ಸ್ಥಾಪಿಸಿರುವರು. ಗುಲಾಮರಾಗಿದ್ದರೂ "ಚಕ್ರವರ್ತಿ ಏಕಛಕ್ರಾಧಿಪತಿ" ಗಳೆಂಬ ಬಿರುದುಬಾವಲಿಗಳು ಅವರಿಗೆ. ಅವರು ಪ್ರಜಾರಾಜ್ಯವನ್ನು ಮನ್ನಿಸದೇ ಇದ್ದರೆ ಅಂತಃಕಲಹ ತಪ್ಪಿದ್ದಲ್ಲ. ದೇಶಪ್ರೇಮಿಗಳಿಗೆ ಆ ಎದೆಗುದಿ. ಆದರೆ ನಾಲ್ವರು ನರೇಂದ್ರರಲ್ಲಿ ಅಣ್ಣಂಪ್ರಾಂತದಲ್ಲಿದ್ದ ಒಂದು ಸಂಸ್ಥಾನದ "ಚಕ್ರವರ್ತಿ" ಬಾವೊದಾಶ ದಾಯಿ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಅವನೂ ಸ್ವಾತಂತ್ರ್ಯ ಪ್ರೇಮಿ. "ಪ್ರಜೆಗಳ ಸ್ವಾತಂತ್ರ್ಯ ಮತ್ತು ಸುಖಗಳಿಗಾಗಿ ನಾನು ಯಾವುದನ್ನೂ ತ್ಯಾಗಮಾಡಲು ಸಿದ್ಧ. ಐಕ್ಯವೇ ಜೀವನ. ಅನೈಕ್ಯವೇ ಮರಣ" ಎಂದು ಸಾರಿ ರಾಜ್ಯತ್ಯಾಗ

ಮಾಡಿದ. “ಗುಲಾಮಗಿರಿಯಲ್ಲಿರುವ ರಾಜ್ಯದಲ್ಲಿ ಅರಸನಾಗುವುದಕ್ಕಿಂತ ಸ್ವತಂತ್ರ ದೇಶದಲ್ಲಿ ನಾಗರಿಕನಾಗಿರುವುದು ಲೇಸು” ಎಂದು ಹೇಳಿ ಸಾಮಾನ್ಯ ನಾಗರಿಕನ ಸ್ವಾತಂತ್ರ್ಯ ಬೇಡಿದ ಆತ. ರಾಜಕುಟುಂಬದವರಿಗೂ ಅದೇ ರೀತಿಯ ಸಲಹೆ ಕೊಟ್ಟ.

---

## ಫ್ರೆಂಚರ ಪುನರಾಗಮನ

---

ವಿಯೆಟ್-ಮಿನಾ ಸರಕಾರವು ಸರ್ವಜನ ವಿಶ್ವಾಸವನ್ನು ಸಂಪಾದಿಸಿ ಭದ್ರವಾಗಿ ಬೇರೂರುವ ಕಾಲಕ್ಕೆ ಸಂಕಟಗಳು ಬಂದುವು. ಜರ್ಮನಿಯು ಮಣ್ಣು ಮುಕ್ಕಿದ ಮೇಲೆ ಸ್ವತಂತ್ರವಾದ ಫ್ರಾನ್ಸ, ಜಪಾನದ ಅಧೀನವಿದ್ದ ಇಂಡೋಚೀನವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು ಹಾತೊರೆಯುತ್ತಿತ್ತು. ಇಂಡೋಚೀನಕ್ಕೆ ದಂಡೆತ್ತಿ ಹೋಗಲು ಸಕಲ ಸಿದ್ಧತೆಗಳನ್ನೂ ಮಾಡತೊಡಗಿತು. ಒಮ್ಮಿಂದೊಮ್ಮೆಯೇ ಜಪಾನ ಶರಣು ಹೋದುದರಿಂದ ಆ ಕೂಡಲೇ ಪ್ರಬಲ ಸೇನೆಯನ್ನು ಇಂಡೋಚೀನಕ್ಕೆ ಕಳಿಸುವ ಫ್ರೆಂಚರ ಆಶೆ ಈಡೇರಲಿಲ್ಲ. ಈ ಕಾರ್ಯವನ್ನು ಕೈಕೊಳ್ಳಲು ಫ್ರೆಂಚರು ಬ್ರಿಟಿಶರ ಮೊರೆ ಹೊಕ್ಕರೋ ಏನೋ! ಅಂತೂ ಬ್ರಹ್ಮದೇಶ, ಮಲಯಾಗಳಿಗೆ ನುಗ್ಗಿದ ಬ್ರಿಟಿಶರು ಇಂಡೋಚೀನಕ್ಕೂ ಪ್ರವೇಶಿಸಿದರು. ಒಂದು ದಿನ ಮುಂಜಾನೆ ಕತ್ತಲೆ ಕರಗಿ ಬೆಳಕು ಹರಿದು ಬಂದಾಗ ಬ್ರಿಟಿಶರ ಹಾಗೂ ಅವರ ಆಜ್ಞೆಗೊಳಗಾದ ಹಿಂದೀ ಸೈನಿಕರು ಸಾಯಿಗಾಂವ ನಗರದಲ್ಲಿ ಪ್ರತ್ಯಕ್ಷರಾದರು.

### ಅಧಿಕಾರ ಅಪಹರಿಸಲು ಫ್ರೆಂಚರ ಯತ್ನ

ಸಪ್ಟಂಬರ ೨೩ ನೇ ತಾರೀಖಿನ ದಿನ ಗಾಯಕ್ಕೆ ಉಪ್ಪು ನೀರು ಚೆಲ್ಲಿದಂತೆ ಫ್ರೆಂಚರು ಪ್ರಮಾದ ಮಾಡಿದರು. ಮುಂಜಾನೆ ೪ ಗಂಟೆಗೆ ಫ್ರೆಂಚ ಯುದ್ಧ ಕೈದಿಗಳು ಸಾಯಿಗಾಂವ ಮುಖ್ಯ ಪಟ್ಟಣದಲ್ಲಿ ಅಧಿಕಾರ

ಅಪಹರಿಸಲು ಹೆಣಗಿದರು. ಕರ್ನಲ್ ರಿವರೀರ ಫ್ರೆಂಚರ ನಾಯಕ. ಫ್ರೆಂಚರು ಪ್ರತಿಯೊಂದು ಸರಕಾರೀ ಕಟ್ಟಡಕ್ಕೆ ಮುತ್ತಿಗೆ ಹಾಕಿದರು. ಅಣ್ಣಾಂ ಪ್ರಜೆಗಳನ್ನು ಕಂಪಲ್ಲಿ ಗುಂಡಿಸಿದರು. ಬೆಳಗಾಗುವುದರೊಳಗೆ ಸಾಯುಗಾಂವ ನಗರದಲ್ಲಿ ರಕ್ತದ ನದಿ. ಕೋಲಾಹಲ. ಇಡೀ ದೇಶ ಅಲ್ಲೋಲಕಲ್ಲೋಲ. ಅಷ್ಟರವರೆಗೆ ಯುದ್ಧ ಕೈದಿಗಳ ಶಿಬಿರಗಳಲ್ಲಿದ್ದ ಈ ಫ್ರೆಂಚರಿಗೆ ಶಸ್ತ್ರಾಸ್ತ್ರಗಳನ್ನು ಮತ್ತು ಮದ್ದುಗುಂಡುಗಳನ್ನು ಪೂರೈಸಿದವರು ಯಾರು? ಬ್ರಿಟಿಶರೇ ಒದಗಿಸಿದರೆಂದು ಅಣ್ಣಾಂ ಜನ ಹೇಳುತ್ತಿದ್ದಾರೆ. ಅದೇನೇ ಇರಲಿ, ಫ್ರೆಂಚರು ಭಗ್ನಮನೋರಥರಾದರು. ಫ್ರೆಂಚರು ಕಳ್ಳತನದಿಂದ ವಿಯೆಟ-ಮಿನಾ ಪ್ರಜಾರಾಜ್ಯದ ಬೆನ್ನ ಮೇಲೆ ತಿವಿದರೂ ಅದು ಉರುಳಲಿಲ್ಲ. ಅದನ್ನು ರಕ್ಷಿಸಲು ಇಡೀ ಜನಾಂಗವೇ ಎದ್ದಿತು ಒಮ್ಮನಸ್ಸಿನಿಂದ. ಸಪ್ಟಂಬರ ೨೫ ರಿಂದ ದೇಶದಲ್ಲೆಲ್ಲ ಬಡಿದಾಟವೇ ಆರಂಭವಾಯಿತು.

## ಪ್ರಜಾರಾಜ್ಯದ ಅಗ್ನಿಪರೀಕ್ಷೆ

ಜೀವರಕ್ಷಣೆಗಾಗಿ ಇಂಡೋಚೀನಿಯರು ಹೋರಾಡತೊಡಗಿದರು. ಅವರದು ಜೀವನ್ಮರಣ ಹೋರಾಟ. ಪಾಶ್ಚಾತ್ಯರಷ್ಟು ಸಂಘಟನೆಯಿಲ್ಲ. ತರಬೇತಿ ಹೊಂದಿದ ಬಲಿಷ್ಠ ಸೇನೆಯ ಕೊರತೆಯೂ ಇದೆ. ರಿಪಬ್ಲಿಕ ಸ್ಥಾಪಿಸಲ್ಪಟ್ಟ ಮೇಲೆ ಮಿಲಿಟರಿ ಶಿಕ್ಷಣ ಕೊಡಲೆತ್ನಿಸಿರುವುದಾದರೂ ಈ ಸೈನಿಕರು ಆಧುನಿಕ ಯುದ್ಧ ಕಲಾನಿಪುಣರಲ್ಲ. ಇದ್ದ ಸೈನಿಕರಿಗೆ ಶಸ್ತ್ರಾಸ್ತ್ರಗಳ ಅಭಾವ. ಜಪಾನರಿಂದ ಕಿತ್ತುಕೊಂಡ ಮತ್ತು ಬಾವೊದಾಶ ಡಾಯಿ ದೊರೆ ಒಪ್ಪಿಸಿದ ಹಿಂದಿನ ಹಳೇ ಅಸ್ತ್ರಗಳಿವೆ ಇವರಲ್ಲಿ. ಅತ್ಯಾಧುನಿಕ ಯುದ್ಧೋಪಕರಣಗಳನ್ನು ಕೊಂಡುಕೊಳ್ಳೋಣವೆಂದರೆ ಕೊಡುವವರಾರು? ತಯಾರಿಸಲು ದೇಶ ಔದ್ಯೋಗೀಕರಣ ಹೊಂದಿದುದಲ್ಲ. ಔದ್ಯೋಗೀಕರಣಕ್ಕೆ ಫ್ರೆಂಚರು ಅವಕಾಶವನ್ನೇ ಕೊಟ್ಟಿಲ್ಲ. ಹೀಗಾಗಿ ಇಂಡೋಚೀನಿಯರ ಸ್ಥಿತಿ ಕರುಣಾಜನಕ. ಫ್ರೆಂಚರ ನೌಕಾಪಡೆ, ವಿಮಾನ, ಟ್ಯಾಂಕುಗಳ ವಿರುದ್ಧ ಅವರು ಲಾಟಿ, ಈಟಿ, ಬಂದೂಕುಗಳನ್ನು ಉಪಯೋಗಿಸಿರುವರು. ಪಾಶ್ಚಾತ್ಯ ಜಗತ್ತಿನ ವಿರುದ್ಧ ಏಕಾಕಿಗಳಾಗಿ ಅವರು ಹೋರಾಟ ನಡೆಸಿರುವರು.

## ಪ್ರಜೆಗಳ ಹಿಂಸೆ

ಇಂಡೋಚೀನಿಯರ ಈ ಅಸಹಾಯ ಸ್ಥಿತಿಯಿಂದ ಮಿತ್ರರು ದೇಶದಲ್ಲಿ ಹಿಂಸಾಚಾರ ನಡೆಸಿರುವರು. ಇಂಡೋಚೀನಿ ಸೈನಿಕರನ್ನು ಕೊಚ್ಚಿ ಹಾಕಲು ಅವರು ಸಮರ್ಥರಾಗಿದ್ದಾರೆ. ಅಸಂಖ್ಯ ದೇಶಾಭಿಮಾನಿಗಳು ಸಾವುನೋವುಗಳಿಗೆ ತುತ್ತಾಗಿರುವರು. ಯುದ್ಧದಲ್ಲಿ ಪ್ರತಿಸ್ಪರ್ಧಿಸುವ ಬಿಲ್ಲಾಳುವನ್ನು ಕೊಲ್ಲುವುದು ಶೂರತನ. ಆದರೆ ಫ್ರೆಂಚರು ಇಂಡೋಚೀನದಲ್ಲಿ ಇವರು ಸ್ತ್ರೀಯರು, ಇವರು ವಯೋವೃದ್ಧರು, ಇವರು ಮಕ್ಕಳೆಂಬ ಭೇದಭಾವ ತೋರಿಸದೆ ಸದೆಬಡೆಯುತ್ತಿದ್ದಾರೆ. ಗಾಯಗೊಂಡ ರಾಷ್ಟ್ರೀಯ ಜನರನ್ನು ಆಸ್ಪತ್ರೆಗಳಿಗೆ ಸಾಗಿಸುತ್ತಿದ್ದಾಗ ಫ್ರೆಂಚರು ಆ ಗಾಯಾಳುಗಳನ್ನೇ ತಿವಿದರು. ದೇಶಾಭಿಮಾನಿಗಳಿಗೆ ಆಶ್ರಯ ಕೊಟ್ಟರೆಂಬ ಸಂಶಯದಿಂದ ಮನೆಗಳ ಸಾಲುಗಳಿಗೆ ಪೆಟ್ರೋಲ ಎಣ್ಣೆ ಸುರಿದು ಬೆಂಕಿ ಕೊಟ್ಟರು. ಅಣ್ಣಾಂ ಪ್ರಾಂತದ ಡಾಕ್ಟರ್ ಹಸ್ಕಿಯ ಮೇಲೆ ಆರ್. ಏ. ಎಫ್. ಬಾಂಬೆಸೆದವು. ಇಂಡೋಚೀನಿಯರನ್ನು ಕಂಡಲ್ಲಿ ನೆರೆಹಿಡಿದು ದನಗಳ ಕೊಟ್ಟಿಗೆಯಂತೆ ಒಂದೆಡೆ ಹಿಂಡಾಗಿ ಸೇರಿಸಿರುವರು. ಮನೆಗಳ ಝಡತಿ ಫ್ರೆಂಚರ ನಿತ್ಯ ಕರ್ಮ; ಮನೆಗಳಿಗೆ ನುಗ್ಗಿ ಗಂಡಸರನ್ನು ಗುಂಡಿಕ್ಕಿ ಅಥವಾ ಅವರ ಕೈಕಾಲು ಕಟ್ಟಿ, ಸ್ತ್ರೀಯರನ್ನು ಕಾಲಗೆಡಿಸಿ ಬರುವುದು ಒಂದು ವಿನೋದವಾಗಿದೆ ಈ ಸೈನಿಕರಿಗೆ. ರಸ್ತೆಗಳಲ್ಲಿ ಅವರಿಗೆ ಸಂಚರಿಸಲು ಸಾಧ್ಯವೇ ಇಲ್ಲ. ಹಾಗೆ ತಿರುಗಿದ ಮುದಿಯರ ಅರ್ಧಜೀವ ದೇಹಗಳು ಅಥವಾ ಶವಗಳು ರಸ್ತೆಗಳ ಅಕ್ಕಪಕ್ಕಗಳಲ್ಲಿ ದೊರೆತಿವೆ. ಬಾಲಕರು ಅಥವಾ ಗಂಡಸರು ರಸ್ತೆಗಳಲ್ಲಿ ತಮ್ಮ ದಾರಿ ಹಿಡಿದು ಹೋಗುವಾಗ ಬಂದೂಕುಗಳ ಮುಂಭಾಗಕ್ಕೆ ಸಿಕ್ಕಿಸಿದ ಕಿರುಗತ್ತಿಗಳಿಂದ ತಿವಿಯುವುದು ಈ ಸೈನಿಕರ ಶೌರ್ಯದ ಕೃತಿಗಳು. "ರಸ್ತೆಯಲ್ಲಿ ನಾನು ಹೋಗುತ್ತಿದ್ದಾಗ ನೂರಾರು ಜನಗಳ ಮೋರೆಗಳು ರಕ್ತದಿಂದ ತೊಯ್ದಿದ್ದುದನ್ನು ಕಂಡೆ" ಎಂದು ಆಸ್ಟ್ರೇಲಿಯದ 'ಸಿಟಿಜನ್' ಪತ್ರಿಕೆಯ ಸುದ್ದಿಗಾರನು ಬರೆದಿರುವನು. ಸಾವಿರಾರು ಜನರನ್ನು ಬಂಧಿಸಿ, ಕೈಕಾಲುಗಳಿಗೆ ಬೇಡಿತೊಡಿಸಿ ಫ್ರಾನ್ಸಿಗೂ ಕಳಿಸಿರುವರು.

# ಫ್ರಾನ್ಸಿನ ಹೊಣೆ

ಫ್ರಾನ್ಸ ಈ ಅತ್ಯಾಚಾರವೆಸಗಿದುದನ್ನು ನೋಡಿ ಕಣ್ಣೀರು ಮಿಡಿಯದವರಿಲ್ಲ. ಸ್ವಾತಂತ್ರ್ಯ, ಸರಿಸಮಾನತೆ, ಭ್ರಾತೃಭಾವಗಳಿಗೆ ಫ್ರಾನ್ಸ ತವರೂರು. ಫ್ರೆಂಚ ರಾಜ್ಯಕ್ರಾಂತಿಯ ಸಂದೇಶ ಅದೇ. ಈ ಘನ ತತ್ವ ಧ್ಯೇಯಗಳಿಗಾಗಿ ಅಂದಿನ ಜನಾಂಗ ಬಹಳ ತ್ಯಾಗ ಮಾಡಿತ್ತು. ಪಾಳೆಯಗಾರ ಸ್ಥಿತಿಯಲ್ಲಿದ್ದ ಅಖಿಲ ಯುರೋಪಿಗೆ ದಿವ್ಯದೃಷ್ಟಿಯನ್ನು ಕೊಟ್ಟಿತು. ತಮ್ಮ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿಯೂ ಫ್ರೆಂಚರು ಬಹಳ ರಕ್ತ ಸುರಿಸಿರುವರು. ಬ್ರಿಟನ್ ಫ್ರಾನ್ಸಗಳ ನೂರು ವರುಷಗಳ ಯುದ್ಧ ಅದಕ್ಕೆ ನಿದರ್ಶನ. ಜರ್ಮನರೇ ಎರಡು ಮೂರು ಸಲ ದಂಡೆತ್ತಿ ಬಂದು ದೇಶವನ್ನು ಗೆದ್ದುಕೊಂಡರು. ಈ ಮಹಾಯುದ್ಧದಲ್ಲಿ ಕೂಡಾ ಕೆಲವು ವರುಷಗಳ ವರೆಗೆ ಫ್ರಾನ್ಸ, ನಾಝಿ ಗುಲಾಮಗಿರಿಯ ಸವಿ ಕಂಡಿತು. ಫ್ರಾನ್ಸನ್ನು ವಿಮೋಚಿಸಲು ಡಿಗಾಲೆ ಬ್ರಿಟನಿಗೆ ಪಲಾಯನ ಮಾಡಿ, ಅಲ್ಲಿ ಸಿದ್ಧತೆ ನಡೆಸಿ, ಹೋರಾಡಿದುದು ಸರ್ವಶ್ರುತ. ಆದರೆ ಈ ಐತಿಹಾಸಿಕ ಪಾಠವನ್ನು ಕಲಿತಿಲ್ಲ ಡಿಗಾಲೆ ಮತ್ತು ಫ್ರಾನ್ಸ. ನಾಝಿಗಳಂತೆ ಫ್ರೆಂಚರಿಗೂ ಸಾಮ್ರಾಜ್ಯದ ಹುಚ್ಚು. ಹೊಸ ರಾಜ್ಯಗಳ ಆಕ್ರಮಣಕ್ಕಾಗಿ ನಾಝಿಗಳು ಮಾಡಿದ ಯತ್ನವನ್ನು ಈ ಮೊದಲೇ ಫ್ರಾನ್ಸ ಸಾಧಿಸಿಬಿಟ್ಟಿದೆ. ಈಗ ಅವನ್ನು ರಕ್ಷಿಸಿಕೊಳ್ಳಲು ಫ್ರೆಂಚರ ಯತ್ನ. ಅಲ್ಜೀರಿಯಾ, ಟ್ಯೂನಿಸ, ಮೊರಕ್ಕೋ, ಪಶ್ಚಿಮ ಆಫ್ರಿಕಾ, ಸೋಮಾಲಿಲ್ಯಾಂಡ, ಮಡಗಾಸ್ಕರ್, ಸಿರಿಯಾ, ಲೆಬನಾನ, ಪಾಂಡಿಚೇರಿ, ಇಂಡೋಚೀನ ಈ ಯಾವ ವಸಾಹತುಗಳನ್ನೂ ಬಿಡಲೊಲ್ಲದು ಫ್ರಾನ್ಸ. ೪೭ ಲಕ್ಷ ಚದರ ಮೈಲುಗಳ ವಿಸ್ತಾರವಿರುವ ಈ ಭೂಮಿ ಫ್ರಾನ್ಸಿನ ಆಸ್ತಿ. ೭ ಕೋಟಿ ಜನ ಫ್ರೆಂಚರ ಗುಲಾಮರು. ಸಾಮಂತ ರಾಜ್ಯವನ್ನೂ ಕೊಟ್ಟಿಲ್ಲ. ಹೊಣೆಗಾರ ಸರಕಾರಗಳನ್ನೂ ಸ್ಥಾಪಿಸಿಲ್ಲ. ದಬ್ಬಾಳಿಕೆಯೇ ಅವರ ಧೋರಣ. ಅಲ್ಜೀರಿಯಾ ಸಿರಿಯಾಗಳ ಜನ ಮೊನ್ನೆ ಮೊನ್ನೆ ಸ್ವಾತಂತ್ರ್ಯ ಚಳವಳಿ ಹೂಡಿದಾಗ ವಿಮಾನ, ಟ್ಯಾಂಕುಗಳನ್ನು ಉಪಯೋಗಿಸಲು ಹೇಸಲಿಲ್ಲ ಡಿಗಾಲೆ. ನಾಲ್ಕೈದು ವರುಷಗಳ ವರೆಗೆ

ಜರ್ಮನಿಯ ದಾಸ್ಯದಲ್ಲಿ ಸಿಕ್ಕಿ ಸುಚ್ಚುನುರಿಯಾದ, ಅಪಮಾನ, ಹಿಂಸೆ, ಅತ್ಯಾಚಾರಗಳಿಗೆ ತುತ್ತಾದ ಫ್ರೆಂಚರಲ್ಲಿ ಇಷ್ಟು ದರ್ಪ, ಕ್ರೌರ್ಯ ಇರಬಾರದಿತ್ತು.

## ಅನುಕೂಲ ಜಾಗತಿಕ ಸ್ಥಿತಿ

ಫ್ರೆಂಚರು ಅಸಂಖ್ಯ ಸೈನ್ಯಬಲದಿಂದ ಹನೋಯಿ, ಸಾಯಿಗಾಂವ ಮುಂತಾದ ನಗರಗಳನ್ನು ವಶಪಡಿಸಿಕೊಂಡಿರುವರು. ಅವರಕಾಲು ಭದ್ರವಾದಂತೆ ಬ್ರಿಟಿಶರು ತಮ್ಮ ಸೈನಿಕರನ್ನು ಹಿಂದಕ್ಕೆ ಕರೆಸಿಕೊಂಡಿರುರುವರು. ಫ್ರೆಂಚ ಆಡಳಿತ ವ್ಯವಸ್ಥೆಯನ್ನು ಸ್ಥಿರಪಡಿಸುವ "ಮಹತ್ಕಾರ್ಯ" ಸಾಧಿಸಿ "ಪುಣ್ಯ" ಕಟ್ಟಿಕೊಂಡರಲ್ಲ! ಇನ್ನೇನು? ಆದರೆ ಇವರಿಂದ ಇಂಡೋಚೀನವು ಸಂಪೂರ್ಣ ನಿರ್ವೀರ್ಯವಾಗಿ ಹೋಯಿತೆಂದೆನ್ನಲಾಗದು ಪೇಟೆ ಪಟ್ಟಣಗಳು ಫ್ರೆಂಚರ ವಶವಾಗಿರುವುದಾದರೂ ಒಳನಾಡು ಪ್ರಜಾರಾಜ್ಯದ ಅಧೀನವೇ ಇದೆ. ಇಂಡೋಚೀನದೊಡನೆ ಒಪ್ಪಂದ ಮಾಡಿಕೊಳ್ಳದೆ ಉಪಾಯುವಿಲ್ಲ ಫ್ರೆಂಚರಿಗೆ. ಜಾಗತಿಕ ಪರಿಸ್ಥಿತಿಯೋ ಪರಾಧೀನ ಜನರಿಗೆ ಏಶಿಯನ್ನರಿಗೆ ಬಹಳ ಅನುಕೂಲವಿದೆ.

## ಒಪ್ಪಂದ

ವಿಯೆಟ ಮಿನಾ ಸರಕಾರವನ್ನು ಈಗ ಫ್ರೆಂಚರು ಮನ್ನಿಸಿರುವರು ಫ್ರಾನ್ಸ ಮತ್ತು ವಿಯೆಟಮಿನಾ ಸರಕಾರಗಳೊಳಗೆ ಒಪ್ಪಂದವಾಗಿದೆ. ಅದರನ್ವಯ ಇಂಡೋಚೀನದ ಸಂಯುಕ್ತ ಘಟನೆಯಲ್ಲಿ ಈ ಅಣ್ಣಾಂ ಪ್ರಜಾರಾಜ್ಯಕ್ಕೆ ಸ್ವರಾಜ್ಯವನ್ನು ಕೊಡಲಾಗಿದೆ. ಸೈನ್ಯ, ಪೋಲೀಸಪಡೆಗಳನ್ನಿಟ್ಟುಕೊಳ್ಳುವ ಹಕ್ಕು ಇದೆ ಈ ಸರಕಾರಕ್ಕೆ. ಆದರೆ ಇಷ್ಟರಿಂದಲೇ ಇಂಡೋಚೀನದ ಸಂಪೂರ್ಣ ವಿಮೋಚನೆಯಾಯಿತೆಂದು ತಿಳಿದರೆ ಅದು ತಪ್ಪು. ವಿಯೆಟಮಿನಾ ಸರಕಾರವು ಇಂಡೋಚೀನದ ಅಣ್ಣಾಂಪ್ರಾಂತವಲ್ಲಿ ಮಾತ್ರ ಸ್ಥಾಪಿಸಲ್ಪಟ್ಟಿದೆ. ದೇಶದ ಉಳಿದಭಾಗಗಳಲ್ಲಿ ಎಂದರೆ ಕಾಂಬೋಡಿಯಾ, ಟಾಂಕಿಂಗ, ಲಾವೊಸ ಮುಂತಾದ ದೇಶೀ ಸಂಸ್ಥಾನಗಳೇ ಇವೆ. ಇವೆಲ್ಲ ಫ್ರೆಂಚರ ಕೈಗೊಂಬೆ ಸಂಸ್ಥಾನಗಳು. ಈಗ ಈ ಅಣ್ಣಾಂಪ್ರಜಾರಾಜ್ಯಕ್ಕೂ (ವಿಯೆಟ-ಮಿನಾ) ಒಂದು ರೀತಿಯು ದೇಶೀ ಸಂಸ್ಥಾನದ ಸ್ಥಾನ

ಮಾನ ದೊರೆತಂತಾಗಿದೆ. ಸೈನ್ಯ, ಪೋಲೀಸ ದಳಗಳನ್ನಿಟ್ಟುಕೊಳ್ಳುವ ಅಧಿಕಾರ ಸಂಸ್ಥಾನಗಳಿದ್ದೇ ಇವೆ. ಹಿಂದುಸ್ತಾನದ ಅನೇಕ ನರೇಂದ್ರರಿಗೆ ಸ್ವಂತ ನಾಣ್ಯಗಳನ್ನು ಚಲಾವಣೆಯಲ್ಲಿ ತರುವ ಹಕ್ಕಿದೆಯಲ್ಲ! ಇಂಡೋಚೀನದ ಸಂಯುಕ್ತ ಘಟನೆಯಲ್ಲಿ ಸ್ವರಾಜ್ಯ ಸ್ಥಾನಮಾನ ಮಾತ್ರ ಅಣ್ಣಂ ಪ್ರಜಾರಾಜ್ಯಕ್ಕೆ. ಎಂದಬಳಿಕ ಫ್ರೆಂಚ ವಾಯಿಸರಾಯರ ಮೂಗುದಾರ ಇದ್ದೇ ಇದೆ. ಇಂಡೋಚೀನದ ಉಜ್ವಲ ರಾಷ್ಟ್ರಾಭಿಮಾನಿಗಳಿಗೆ ಇದರಿಂದ ಸಂಪೂರ್ಣ ತೃಪ್ತಿಯಾಗಲಾರದು. ಅವರು ಈ ಸಂಯುಕ್ತ ಘಟನೆಯ ಯೋಜನೆಯುನ್ನು ವಿರೋಧಿಸುತ್ತಿರುವರು.

---

## ನಾಡು ನುಡಿ ಜನ

---

ನಕ್ಷೆಯಲ್ಲಿ ಒಂದು ಗಿಣಿ ಮೂಗಿನಂತೆ ಕಾಣುತ್ತಿದೆ ಇಂಡೋಚೀನ. ಅದರ ಒಟ್ಟು ವಿಸ್ತಾರ ೨ ಲಕ್ಷ ೮೫ ಸಾವಿರ ಚದರ ಮೈಲುಗಳು. ಫ್ರಾನ್ಸಿಗಿಂತಲೂ ದೊಡ್ಡದು. ಕೊಚೀನ-ಚೀನ (೨೬ ಸಾವಿರ ಚ. ಮೈ), ಕಾಂಬೋದಿಯಾ (62½ ಸಾ. ಚ. ಮೈ), ಅಣ್ಣಂ (೫೭ ಸಾ. ಚ. ಮೈ), ಟಾಂಕಿಂಗ್ (40½ ಸಾ. ಚ. ಮೈ), ಲಾವೊಸ (೯೦ ಸಾ. ಚ. ಮೈ), ಕ್ವಾಂಗ ಚಾಂಗ ವಾನ (೩೨೫ ಚ. ಮೈ) ಪ್ರಾಂತಗಳೆಂದು ದೇಶವನ್ನು ಫ್ರೆಂಚರು ವಿಭಜಿಸಿರುವರು. ದೇಶ ಗುಡ್ಡಗಾಡುಗಳಿಂದ ತುಂಬಿದುದು. ಉತ್ತರ ಇಂಡೋಚೀನದಲ್ಲಿ ಘೋರಾರಣ್ಯಗಳಿವೆ. ಮೆಕಾಂಗ ಭಾರಿ ದೊಡ್ಡ ನದಿ. ಗಂಗಾ ನದಿ ಇದ್ದ ಹಾಗೆ. ಸಾಯಿಗಾಂವ, ಹನೋಯಿ, ಕಮುರಾನ, ಹೈಫಾಂಗ, ಕ್ವಿನಹಾನ, ಟ್ರಾನ, ಲಂಗಶಾವೆನ ಮುಂತಾದ ಅನುಕೂಲ ಬಂದರಗಳೂ ಇವೆ. ಕಮುರಾನ ಬಂದರವೊಂದೇ ದೊಡ್ಡ ನೌಕಾಪಡೆಗೆ ಆಶ್ರಯಕೊಡುವಷ್ಟು ಶ್ರೇಷ್ಠವಿದೆ. ಸಾಯಿಗಾಂವ ಮುಖ್ಯ ಪಟ್ಟಣ.

## ದೇಶದ ಸಿರಿ

ಇಂಡೋಚೀನ ಅಕ್ಕಿ ದೇಶ. ಜಗತ್ತಿನಲ್ಲಿ ಅಕ್ಕಿ ಬೆಳೆವ ಮುಖ್ಯ ದೇಶಗಳಲ್ಲಿ ಇಂಡೋಚೀನಕ್ಕೂ ಸ್ಥಾನವಿದೆ. ೧೯೩೯ರಲ್ಲಿ ೧೭ ಲಕ್ಷ ಟನ್ ಅಕ್ಕಿ ನಿರ್ಯಾತ ಮಾಡಲಾಗಿದೆ. ೭೦ ಸಾವಿರ ಟನ್ ರಬ್ಬರನ್ನು ಕಳಿಸಿದರು. ಸಕ್ಕರೆ, ಚಹಾ, ಕಾಫೀ, ಮೆಣಸು, ಅಡಿಕೆ, ಏಲಕ್ಕಿ ಮುಂತಾದವುಗಳನ್ನು ರಫ್ತುಮಾಡುತಿದ್ದಾರೆ. ಹಣ್ಣು ಹಂಪಲುಗಳಿಗೂ ಇಂಡೋಚೀನ ಪ್ರಸಿದ್ಧ. ಅನಾನಸು, ಬಾಳೆಹಣ್ಣು, ಕಿತ್ತಳೆಗಳೂ ಪೇರಳೆ. ಇದಲ್ಲದೆ ಹೊಗೆಸೊಪ್ಪು, ಕ್ವಿನಿನ್, ಕೊಬ್ಬರಿಗಳ ಬೆಳೆಯೂ ವಿಶೇಷವಿದೆ. ಸರ್ವಸಾಧಾರಣವಾಗಿ ಇಂಡೋಚೀನದ ಈ ಎಲ್ಲ ಉತ್ಪತ್ತಿಯನ್ನು ನೆರೆಹೊರೆ ದೇಶಗಳಿಗೆ ನಿರ್ಯಾತ ಮಾಡುತ್ತಿರುವರು. ಟಿನ್, ಜಿಂಕ್, ಕಲ್ಲಿದ್ದಲು, ತಾಮ್ರ, ಕಬ್ಬಿಣ, ಮುಂತಾದ ಖನಿಜಗಳೂ ದೊರೆಯುತ್ತಿವೆ ಫ್ರೆಂಚರಿಗೆ. ಮೀನ ಕೈಗಾರಿಕೆಯೂ ಪ್ರಗತಿ ಹೊಂದಿರುವುದು. ಕುದುರೆ, ಎತ್ತು, ಎಮ್ಮೆ, ಹಂದಿ, ಕುರಿ, ಆಡು ಮೊದಲಾದ ಪ್ರಾಣಿಗಳಿವೆ.

## ಆಡಳಿತೆ

ಇಂಡೋಚೀನದಲ್ಲಿ ಫ್ರೆಂಚ ವಾಯಿಸರಾಯರ ರಾಜ್ಯಭಾರ. ಅವರದೇ ನಿರಂಕುಶ ಪ್ರಭುತ್ವ. ಫ್ರಾನ್ಸಿಗೆ ಅವರು ಹೊಣೆ. ಕೊಚೀನ-ಚೀನ ಪ್ರಾಂತವು ಫ್ರೆಂಚರ ಪ್ರತ್ಯಕ್ಷ ಆಡಳಿತೆಗೊಳಗಾಗಿದೆ. ಅದಕ್ಕೊಬ್ಬ ಫ್ರೆಂಚ ಗವರ್ನರ್. ಕ್ವಾಂಗ ಚೌ ವಾನ ಪ್ರಾಂತವು ಚೀನದಿಂದ ೧೮೯೮ರಲ್ಲಿ ಕಡ ಪಡೆದುಕೊಂಡ ಭೂಮಿ. ೯೯ ವರ್ಷಗಳ ವರೆಗೆ ಫ್ರಾನ್ಸಿಗೆ ಚೀನವು ಅದನ್ನು ಬಿಟ್ಟುಕೊಟ್ಟದೆ. ಅದಕ್ಕೂ ಫ್ರೆಂಚ ಗವರ್ನರನನ್ನು ನೇಮಿಸಿರುವರು. ಇದಲ್ಲದೆ ಅಣ್ಣಾಂ, ಕಾಂಬೋದಿಯಾ, ಟಾಂಕಿಂಗ ಮತ್ತು ಲಾವೊಸ ಸಂಸ್ಥಾನಗಳು. ದೇಶಿರಾಜರ ಆಳಿಕೆ ಈ ಸಂಸ್ಥಾನಗಳಲ್ಲಿ. ೧೭೮೭ ರಲ್ಲೇ ಫ್ರೆಂಚರು ಅಣ್ಣಾಂ ಸಂಸ್ಥಾನದ ಮೇಲೆ ದಂಡೆತ್ತಿ ಹೋದರು. ೧೮೮೬ ರಲ್ಲಿ ಆದ ಒಪ್ಪಂದದನ್ವಯ ದೊರೆ ಫ್ರೆಂಚರ ಪ್ರಭುತ್ವವನ್ನು ಒಪ್ಪಿಕೊಂಡ. ಕಾಂಬೋದಿಯ ರಾಜ್ಯ ೧೮೬೩ ರಲ್ಲಿ ಫ್ರೆಂಚರ ವಶವಾಯಿತು. ಅಲ್ಲೂ ಫ್ರೆಂಚರು ತಮ್ಮ ಕೈಗೊಂಬೆ ರಾಜ

ನನ್ನು ಪ್ರತಿಷ್ಠಿಸಿದರು. ಟಾಂಕಿಂಗ ರಾಜ್ಯ ಫ್ರೆಂಚರ ಶಕ್ತಿಗೆ ಮಣಿದುದು ೧೮೮೪ ರಲ್ಲಿ. ೧೮೯೩ ರಲ್ಲಿ ಲಾವೊಸ ಸಂಸ್ಥಾನವು ಸ್ವಾತಂತ್ರ್ಯವನ್ನು ಕಳೆದುಕೊಂಡು ಫ್ರೆಂಚರ ತಾಳಕ್ಕೆ ತಕ್ಕ ಮೇಳ ಕಟ್ಟಿತು. ಈ ನಾಲ್ಕು ಸಂಸ್ಥಾನಗಳಲ್ಲೂ ಫ್ರೆಂಚ ರೆಸಿಡೆಂಟರಿರುವರು. ಅವರಿಗೆ ಗವರ್ನರರ ಸ್ಥಾನಮಾನ. ಈಗ ಈ ಸಂಸ್ಥಾನಗಳಲ್ಲಿ ಅಣ್ಣಾಂ ಕರಗಿ ಹೋಗಿದೆ. ಅಣ್ಣಾಂ ಸಂಸ್ಥಾನದ ದೊರೆ ಬಾವೊ ದಾಶದಾಯಿ ರಾಜ್ಯತ್ಯಾಗ ಮಾಡಿ ಪ್ರಜಾ ರಾಜ್ಯಕ್ಕೆ ಅಧಿಕಾರವನ್ನು ಬಿಟ್ಟುಕೊಟ್ಟಿರುವನು. ಉಳಿದ ಸಂಸ್ಥಾನಗಳ ನರೇಂದ್ರರು ಇನ್ನೂ ಫ್ರೆಂಚರ ದಾಸರಾಗಿರುವರು.

## ಜನ

ಇಂಡೋಚೀನದ ಒಟ್ಟು ಜನಸಂಖ್ಯೆ ೨ ಕೋಟಿ ೪೦ ಲಕ್ಷ. ಕೊಚೀನ ಚೀನದಲ್ಲಿ ೪೬ ಲಕ್ಷ, ಅಣ್ಣಾಂದಲ್ಲಿ ೬೨ ಲಕ್ಷ, ಕಾಂಬೋದಿಯಲ್ಲಿ ೩೦ ಲಕ್ಷ, ಟಾಂಕಿಂಗದಲ್ಲಿ ೯೩ ಲಕ್ಷ, ಲಾವೊಸದಲ್ಲಿ ೧೦ ಲಕ್ಷ, ಕ್ವಾಂಗವಾನದಲ್ಲಿ ಹೆಚ್ಚು ಕಡಿಮೆ ೩ ಲಕ್ಷ ಜನ ವಾಸಿಸುತ್ತಿರುವರು. ಒಟ್ಟು ದೇಶದ ಜನರಲ್ಲಿ, ಫ್ರೆಂಚರು ೪೧ ಸಾವಿರ, ಇನ್ನಿತರ ಯೂರೋಪಿಯನ್ನರು ೧ ಸಾವಿರ, ಚೀನಿಯರು 4½ ಲಕ್ಷ, ಹಾಗೂ ಇನ್ನಿತರ ಏಶಿಯನ್ನರು ೫ ಸಾವಿರ.

**ಜೈ ಹಿಂದ್**